ಸಂಪುಟ: 04 ಸಂಚಿಕೆ: 356 ಪುಟಗಳು: 08 ಭಾನುವಾರ 09 ಮಾರ್ಚ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಯಾರ ಮಾತಿಗು ನೀ ಅಂಜಬೇಡ''
ಯಾರ ಆಸೆಯಂತೆಯು ನೀ ಇರಬೇಡ ಯಾರನ್ನು ನಂಬಿ ನೀ ಬದುಕಬೇಡ
ನಿನ್ನ ಜೀವನ ನಿನಗೆ ನೀ ಮರೆಯಬೇಡ


## ವಿನ್ಯಾಸಗಾರರು ಬೇಕಾಗಿದ್ದಾರೆ




ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಚಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ, ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ.
ವಯೋಮಿತಿ ಗರಿಷ್ಠ 25 ವರ್ಷ.
ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
**9448225696**

ಉದಯ ವಾಹಿನಿ

#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)
udayavahininews@gmail.com


# ಕುರ್ಚಿ ಕಿತ್ತಾಟ ಬಿಡಿ

## ಅಭಿವೃದ್ಧಿಗೆ ಗಮನ ಕೊಡಿ

- ಸಿದ್ದರಾಮಯ್ಯ-ಡಿಕೆಶಿಗೆ ಖರ್ಗೆ ಒಗ್ಗಟ್ಟಿನ ಪಾಠ...!
- ಸಿಎಂ- ಡಿಸಿಎಂ ಒಂದಾಗಿ ಒಳ್ಳೆಯ ಕೆಲಸ ಮಾಡಿ: ಖರ್ಗೆ ಪುನರ್ ತಾಕೀತು
- ಕಲಬುರಗಿ ಪಥ ಕಾರ್ಯಕ್ರಮದಲ್ಲಿ ಖರ್ಗೆ ಮಾತು
- ಕಾಂಗ್ರೇಸ್ ನಲ್ಲಿ ನಾಯಕತ್ವ ಬದಲಾವಣೆಗೆ ಮತ್ತೊಮ್ಮೇ ಬ್ರೇಕ್
- ಎಐಸಿಸಿ ಅಧ್ಯಕ್ಷರ ಬಹುಪರಾಕ್..?







• **ಉದಯವಾಹಿನಿ, ಬೆಂಗಳೂರು**

ಮುಖ್ಯಮಂತ್ರಿ ಸಿದ್ದರಾಮಯ್ಯಹಾಗೂ ಉಪಮುಖ್ಯಮಂತ್ರಿ ಶಿವಕುಮಾರ್ ಒಂದಾಗಿ ಒಳ್ಳೆಯ ಕೆಲಸ ಮಾಡಿ. ಒಂದಾಗದೆ ಎರಡು ಹಾದಿಯಲ್ಲಿ ಮುನ್ನಡೆದರೆ ಎಲ್ಲರಿಗೂ ಕಷ್ಟ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪುನರ್ ತಾಕೀತು ಮಾಡಿದರು. ಶೈಕ್ಷಣಿಕ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಕಲ್ಯಾಣ ಕರ್ನಾಟಕ ಭಾಗ ಹಿಂದುಳಿದಿದ್ದು, ಈ ಕ್ಷೇತ್ರಗಳ ಅಭಿವೃದ್ಧಿ ಅದರಲ್ಲೂ ಶೈಕ್ಷಣಿಕ ಅಭಿವೃದ್ಧಿಯಾಗಬೇಕು.

ಇದಕ್ಕೆ ಈ ಭಾಗದ ಸಂಸದರು ಹಾಗೂ ಶಾಸಕರು ವಿಶೇಷ ಒತ್ತು ನೀಡಬೇಕು ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಒತ್ತಾಯಿಸಿದರು. ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಡಿಯಲ್ಲಿ ಕೈಗೆತ್ತಿಕೊಳ್ಳುತ್ತಿರುವ ಕಲ್ಯಾಣ ಪಥ ಯೋಜನೆಗೆ ಅಡಿಗಲ್ಲು ನೆರವೇರಿಸಿ ಅವರು ಮಾತನಾಡಿದರು. ಕಕ ಭಾಗದ 38 ಗ್ರಾಮೀಣ ವಿಧಾನಸಭಾ ಕ್ಷೇತ್ರದ ಒಟ್ಟು 1,166 ಕಿಮಿ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ರಾಷ್ಟಕ್ಕೆ ನೀಡಿದ ಕೊಡುಗೆಗಳನ್ನು ನೆನಪಿಸಿಕೊಂಡ ಶಿವಕುಮಾರ, ಅವರನ್ನು ಸ್ಮರಿಸಿಕೊಳ್ಳಬೇಕಿದೆ. ಖರ್ಗೆ ಸಾಹೇಬರ ಕೊಡುಗೆಯನ್ನು ಕೂಡಾ ನಾವು ಸ್ಮರಿಸಿಕೊಳ್ಳಬೇಕಿದೆ. ಜೇವರ್ಗಿ ಕ್ಷೇತ್ರದ ಮಲ್ಲಾಬಾದ್ ಏತನೀರಾವರಿ ಯೋಜನೆಯ ಜಾರಿಗಾಗಿ ಅಜಯ್ ಸಿಂಗ್, ಎಂಪಿ ರಾಧಾಕೃಷ್ಣ ದೊಡ್ಡಮನಿ ಒತ್ತಾಯಿಸಿದ್ದರು. ಆದಷ್ಟು ಬೇಗ ಯೋಜನೆಗೆ ನಾನೇ ಶಂಕುಸ್ಥಾಪನೆ ನೆರವೇರಿಸಲಿದ್ದೇನೆ ಎಂದರು. ಪ್ರಿಯಾಂಕ್ ಖರ್ಗೆ ಅವರ ಅಭಿವೃದ್ಧಿಪರ ಚಿಂತನೆಯನ್ನು ಕೊಂಡಾಡಿದ ಡಿಸಿಎಂ, ಕಲ್ಯಾಣಪಥ, ಪ್ರಗತಿ ಪಥ ಯೋಜನೆಯ ಮೂಲಕ ರಸ್ತೆಗಳ ಅಭಿವೃದ್ಧಿಗೆ ನಿಂತಿರುವುದು ಅಭಿವೃದ್ಧಿಯ ವಿಷಯದಲ್ಲಿ ಅವರ ಬದ್ಧತೆ ತೋರಿಸುತ್ತಿದೆ ಎಂದರು. ವೇದಿಕೆಯ ಮೇಲೆ ಸಚಿವರಾದ ಪ್ರಿಯಾಂಕ್ ಖರ್ಗೆ, ಶರಣಬಸಪ್ಪ ದರ್ಶನಾಪುರ, ಶರಣಪ್ರಕಾಶ್ ಪಾಟೀಲ್, ರಹೀಮ್ ಖಾನ್, ಎಂಪಿ ರಾಧಾಕೃಷ್ಣ ದೊಡ್ಡಮನಿ, ಶಾಸಕರಾದ ಎಂ ವೈ ಪಾಟೀಲ, ಬಿ.ಆರ್.ಪಾಟೀಲ್, ಅಜಯ್ ಸಿಂಗ್, ಚೆನ್ನಾರೆಡ್ಡಿ ಪಾಟೀಲ್ ತುನ್ನೂರು, ಅಲ್ಲಮಪ್ರಭು ಪಾಟೀಲ, ರಾಜಾ ವೇಣುಗೋಪಾಲ ನಾಯಕ, ಶರಣು ಸಲಗಾರ, ತಿಪ್ಪಣ್ಣಪ್ಪ ಕಮಕನೂರು, ಜಗದೇವ ಗುತ್ತೇದಾರ, ಎ.ವಸಂತ ಕುಮಾರ ಸೇರಿದಂತೆ ಹಲವರಿದ್ದರು.

**1** ಕಲ್ಯಾಣ ಕರ್ನಾಟಕ ಭಾಗದ ಶೈಕ್ಷಣಿಕ, ಆರೋಗ್ಯ ಕ್ಷೇತ್ರ ಅಭಿವೃದ್ಧಿಯಾಗಬೇಕಿದೆ

**2** ಕಾಂಗ್ರೇಸ್ ಪಕ್ಷಕ್ಕೆ ಭಗವಂತ ನೀಡಿದ ಅವಕಾಶವನ್ನು ಬಳಸಿಕೊಂಡು

**3** ಎಲ್ಲ ಕೆಲಸಗಳನ್ನು ಮೈಸೂರಿನಿಂದ ಪ್ರಾರಂಭ ಮಾಡಬೇಡಿ.

ಆರ್ಟಿಕಲ್ 371 ಎ ಜಾರಿಯಾಗಿರುವುದಕ್ಕೆ ಉತ್ತರ ಭಾರತದ ಜನರು ಆಶ್ಚರ್ಯ ವ್ಯಕ್ತಪಡಿಸುತ್ತಿದ್ದಾರೆ. ಸೋನಿಯಾಗಾಂಧಿ ಅವರ ಇಚ್ಚೆಯಂತೆ ಈ ಭಾಗಕ್ಕೆ ಈ ಸವಲತ್ತು ಸಿಗುವಂತಾಗಿದೆ. ದೇಶದ ಯಾವ ಕಡೆಗೆ ಇಂತಹ ವಿಶೇಷ ಸೌಲಭ್ಯ ಕೊಟ್ಟಿಲ್ಲ. ಕೆಲ ರಾಜ್ಯಗಳಿಗೆ ಕೊಟ್ಟಿದ್ದಾರೆ. ಆದರೆ ರಾಜ್ಯದ ಭಾಗಕ್ಕೆ ಕೊಟ್ಟಿಲ್ಲ ಎಂದರು.ಕಕ ಭಾಗಕ್ಕೆ ವಾರ್ಷಿಕ 5,000 ಕೋಟಿ ರೂ ಅನುದಾನ ನೀಡಲಾಗುತ್ತಿದೆ ಎನ್ನುವ ಡಿಸಿಎಂ ಮಾತಿಗೆ ಲಘು ಹಾಸ್ಯದ ಧಾಟಿಯಲ್ಲೇ ಉತ್ತರಿಸಿದ ಖರ್ಗೆ ಅವರು ಸ್ವಾಮಿ, ಐದು ಸಾವಿರ ಕೋಟಿ ಅಲ್ಲ, ಲಕ್ಷ ಕೋಟಿ ಕೊಟ್ಟರೂ ನಿಮ್ಮಷ್ಟು ನಾವು ಅಭಿವೃದ್ಧಿ ಆಗುವುದಿಲ್ಲ. ನಮ್ಮಭಾಗ ನಿಮ್ಮಷ್ಟೆ

> ಕಳೆದ ಲೋಕಸಭಾ ಚುನಾವಣೆಯಲ್ಲಿ ಎಲ್ಲಾ ಕ್ಷೇತ್ರದಲ್ಲಿ ಕಾಂಗ್ರೇಸ್ ಗೆಲ್ಲಿಸುವ ಮೂಲಕ ಮಲ್ಲಿಕಾರ್ಜುನ ಖರ್ಗೆ ಅವರ ಮಡಿಲಿಗೆ ಹಾಕಿದ್ದೀರಿ ನಿಮಗೆ ಧನ್ಯವಾದಗಳು.
>
> 
>
> ನಿಮ್ಮ ಋಣವನ್ನು ನಾವು ತೀರಿಸುತ್ತೇವೆ ಎಂದ ಡಿಸಿಎಂ, ವಿಧಾನಸೌಧ ನೋಡಿದ ತಕ್ಷಣ ಕೆಂಗಲ್ ಹನುಮಂತಯ್ಯನವರನ್ನು ನೆನಪಿಸಿಕೊಂಡಂತೆ ಕಲಬುರಗಿಯ ಇಎಸ್ ಐ ಆಸ್ಪತ್ರೆ ನೋಡಿದ ಕೂಡಲೇ ಖರ್ಗೆ ಅವರು ನೆನಪಾಗುತ್ತಾರೆ ಎಂದರು.ಕಲ್ಯಾಣದ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ 1,000 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗಿದೆ. ಈ ಯೋಜನೆ ಪ್ರಾರಂಭವಾಗಲಿದೆ. ದೇವರು ವರ ಅಥವಾ ಶಾಪ ಕೊಡಲ್ಲ ಅವಕಾಶ ನೀಡುತ್ತಾನೆ. ಕಾಂಗ್ರೇಸ್ ಪಕ್ಷಕ್ಕೆ ಭಗವಂತ ನೀಡಿದ ಅವಕಾಶವನ್ನು ಬಳಸಿಕೊಂಡು ಸರ್ಕಾರ ಎಲ್ಲಾ ವರ್ಗದ ಜನ ಹಿತ ಕಾಪಾಡುತ್ತಿದೆ. ಇದು ಕಾಂಗ್ರೇಸ್ ಸರ್ಕಾರದ ಬದ್ಧತೆಯಾಗಿದೆ ಹೇಳಿದರು.
>
> -ಉಪ ಮುಖ್ಯಮಂತ್ರಿ ಶಿವಕುಮಾರ್

ಅಭಿವೃದ್ಧಿಯಾಗಬೇಕೆಂದರೆ ನಿಮ್ಮಷ್ಟೇ ಸಮಾನವಾದ ಅನುದಾನ ನಮಗೂ ಕೊಡಬೇಕು. ಸರ್ಕಾರದ ಯಾವುದೇ ಯೋಜನೆ ಮೈಸೂರಿನಿಂದ ಪ್ರಾರಂಭವಾಗಿ ದಾವಣಗೆರೆಗೆ ಬಂದು ನಿಂತುಬಿಡುತ್ತದೆ, ಬಳ್ಳಾರಿಯವರೆಗೂ ತಲುಪುವುದಿಲ್ಲ ಎಂದರು. ಪ್ರಗತಿ ಪಥ ಹಾಗೂ ಕಲ್ಯಾಣ ಪಥ ಯೋಜನೆಯನ್ನು ಜಾರಿಗೊಳಿಸಲು ಶ್ರಮಿಸಿದ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಶ್ಲಾಘಿಸಿದ ಖರ್ಗೆ ಅವರು, ಈ ಯೋಜನೆಗಳ ಅಡಿಯಲ್ಲಿ ರಾಜ್ಯದ ರಸ್ತೆಗಳು ಅಭಿವೃದ್ಧಿ ಹೊಂದಲಿವೆ ಎಂದು ಆಶಿಸಿದರು. ಸತತ 16 ಬಜೆಟ್ ಮಂಡಿಸಿದ ಸಿಎಂ ಸಿದ್ದರಾಮಯ್ಯನವರನ್ನು ಕೊಂಡಾಡಿದ ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ ಮಂಡಿಸಿದ ಬಜೆಟ್ ಅತ್ಯಂತ ಉತ್ತಮ ಬಜೆಟ್ ಎಂದರು. ಡಿಕೆ ಶಿವಕುಮಾರ ಸಚಿವರಾಗಿ, ಕೆಪಿಸಿಸಿ ಅಧ್ಯಕ್ಷರಾಗಿ ಉತ್ತಮ ಕೆಲಸ ಮಾಡುತ್ತಿದ್ದಾರೆ. ನೀವಿಬ್ಬರು ಜೊತೆಯಾಗಿ ಅಭಿವೃದ್ಧಿ ಕೆಲಸ ಮಾಡಿ ಎಂದು ಸಲಹೆ ನೀಡಿದರು. ನಾನು ಶಾಸಕನಾಗಿ, ಸಚಿವನಾಗಿ, ಲೋಕಸಭೆ ಸದಸ್ಯನಾಗಿ, ರಾಜ್ಯಸಭಾ ಸದಸ್ಯನಾಗಿ ಈಗ ಎಐಸಿಸಿ ಅಧ್ಯಕ್ಷನಾಗಿ ಕೆಲಸ ಮಾಡುತ್ತಿರುವುದಕ್ಕೆ ನಿಮ್ಮೆಲ್ಲರ ಆಶೀರ್ವಾದ ಕಾರಣ ಎಂದು ಸ್ಮರಿಸಿದ ಖರ್ಗೆ, ನೀವು ( ಮತದಾರರು) ಒಮ್ಮೊಮ್ಮೆ ದಾರಿ ತಪ್ಪುತ್ತೀರಿ ಅದು ಕೆಲಸ ಮಾಡುವವರಿಗೆ ಅಡ್ಡಗಾಲು ಹಾಕಿದಂತಾಗುತ್ತದೆ ಎಂದು ಮಾರ್ಮಿಕವಾಗಿ ಹೇಳಿದರು. ಕಲ್ಯಾಣ ಕರ್ನಾಟಕ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಸ್ಥಾಪನೆಗೆ ಒತ್ತಿ ಹೇಳಿದ ಖರ್ಗೆ, ಬೀದರ್, ಕಲಬುರಗಿ ಹಾಗು ಬಳ್ಳಾರಿಯಿಂದ ಬೆಂಗಳೂರಿಗೆ ರಾಷ್ಟ್ರೀಯ ಹೆದ್ದಾರಿಗಳಿಲ್ಲ. ಈ ಬಗ್ಗೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಮಾತನಾಡಿದ್ದೇನೆ. ರಾಜ್ಯ ಸರ್ಕಾರ ಈ ಯೋಜನೆಗಳಿಗೆ ಅಗತ್ಯವಿರುವ ಭೂಮಿ ಸ್ವಾಧೀನಪಡಿಸಿಕೊಂಡು ಕೊಡಬೇಕು. ಈ ಮಾತು ಶಿವಕುಮಾರ್ ಅವರಿಗೆ ಯಾಕೆ ಹೇಳುತ್ತಿದ್ದೇನೆ ಎಂದರೆ ಸಿದ್ದರಾಮಯ್ಯ ಹಾಗೂ ಶಿವಕುಮಾರು ಜೊತೆಯಾಗಿ ಹೋದರೆ ಮಾತ್ರ ನಮ್ಮ ಕೆಲಸ ಆಗುತ್ತದೆ. ಹಳೆ ಮೈಸೂರು ಹಾಗೂ ಮಲೆನಾಡಿನ ಜನರು ಅರ್ಜಿ ಕೊಟ್ಟು ಯಾಕೆ ಕೆಲಸ ಮಾಡಿಲ್ಲ ಅಂತ ಪ್ರಶ್ನೆ ಮಾಡುತ್ತಾರೆ. ಆದರೆ, ನಮ್ಮ ಭಾಗದ ಜನರು ಯಾಕೆ ಕೆಲಸ ಆಗಿಲ್ಲ ಎಂದು ಕೈಮುಗಿಯುತ್ತಾರೆ ಅಷ್ಟೊಂದು ಮುಗ್ಧರು. ಅಲ್ಲದೆ ನಿಮಗೆ ಶಕ್ತಿ ತುಂಬಿದ್ದೇ ನಮ್ಮ ಭಾಗದ ಜನರು. ನಿಮಗೆ ಶಕ್ತಿ ತುಂಬಿದವರಿಗೆ ನೀವು ಕೆಲಸ ಮಾಡಿ. ಎಲ್ಲಾ ಕೆಲಸಗಳನ್ನು ಮೈಸೂರಿನಿಂದ ಪ್ರಾರಂಭ ಮಾಡಬೇಡಿ. ಕಲ್ಯಾಣದಿಂದ ಪ್ರಾರಂಭಿಸಿ ನಿಮ್ಮ ಕಲ್ಯಾಣವಾಗುತ್ತದೆ. ಕಲ್ಯಾಣದಿಂದ ಕೆಲಸ ಪ್ರಾರಂಭಿಸಿದರೆ ಅದು ಕೊಳ್ಳೆಗಾಲದವರೆಗೆ ಹೋಗುತ್ತದೆ ಆದರೆ ಮೈಸೂರಿನಿಂದ ಪ್ರಾರಂಭಿಸಿದ ಕೆಲಸ ಬೆಂಗಳೂರಿಗೆ ಬಂದು ನಿಲ್ಲುತ್ತಿದೆ ಎಂದರು. ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳಿಗೆ ಅದರಲ್ಲೂ ನರೇಗಾ ಯೋಜನೆಗೆ ಅನುದಾನ ಬಿಡುಗಡೆ ಮಾಡುತ್ತಿಲ್ಲ ಎಂದು ಅಸಮಧಾನ ವ್ಯಕ್ತಪಡಿಸಿದ ಮಲ್ಲಿಕಾರ್ಜನ ಖರ್ಗೆ, ಮಹಾತ್ಮಾಗಾಂಧಿ ಹೆಸರಲ್ಲಿ ಪ್ರಾರಂಭಿಸಿದ ಯೋಜನೆಗೂ ಅನುದಾನ ನೀಡುತ್ತಿಲ್ಲ ಎಂದರು.

ಇದಕ್ಕೂ ಮುನ್ನ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳೆಯರಿಗೆ ಶುಭಾಶಯ ತಿಳಿಸಿ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಕಾಂಗ್ರೇಸ್ ಸರ್ಕಾರ ಮಹಿಳೆಯರ ಅನುಕೂಲಕ್ಕಾಗಿಯೇ ಶಕ್ತಿ ಗೃಹಲಕ್ಷ್ಮೀ ಸೇರಿದಂತೆ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ ಎಂದರು. ಕಲ್ಯಾಣ ಕರ್ನಾಟಕ ಭಾಗಕ್ಕೆ ಆರ್ಟಿಕಲ್ 371 ಎ ಜಾರಿಗೆ ತರುವ ಮೂಲಕ ಮಲ್ಲಿಕಾರ್ಜುನ ಖರ್ಗೆ ಹಾಗೂ ಧರಂಸಿಂಗ್ ಅವರು ಆರ್ಥಿಕ ಸಬಲೀಕರಣಕ್ಕೆ ಶ್ರಮಿಸಿದ್ದಾರೆ. ಅದರ ಪರಿಣಾಮ ಈ ಭಾಗದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಶಿಕ್ಷಣ ಹಾಗೂ ಉದ್ಯೋಗ ದಲ್ಲಿ ಮೀಸಲಾತಿ ಪಡೆದುಕೊಂಡು ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಹಾಗೂ ಸರ್ಕಾರಿ ಕೆಲಸ ಪಡೆದುಕೊಳ್ಳುತ್ತಿದ್ದಾರೆ ಎಂದರು.

> ಪ್ರಧಾನಿ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ ಖರ್ಗೆ, ಹನ್ನೊಂದು ವರ್ಷದಲ್ಲಿ ಪ್ರಧಾನಿ ನರೇಂದ್ರ ಮೋದಿ ಹನ್ನೊಂದು ದೊಡ್ಡ ಸುಳ್ಳುಗಳನ್ನು ಹೇಳಿದ್ದಾರೆಂದು ಟೀಕಿಸಿದರು. ವಿದೇಶದಲ್ಲಿ ಹಣ ಇಟ್ಟಿದ್ದನ್ನು ದೇಶಕ್ಕೆ ತಂದು 15 ಲಕ್ಷ ರೂ ಹಾಕುತ್ತೇನೆಂದು, ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇನೆಂದು, ತೈಲ ಇಳಿಕೆ ಮಾಡುತ್ತೇನೆಂದು ಹೇಳಿದರ ಇಳಿಕೆ ಮಾಡದೆ ಇರುವುದು, 2022ರಲ್ಲೇ ಗಂಗಾ ನದಿ ಪೂರ್ಣ ಸ್ವಚ್ಛಗೊಳಿಸುವುದಾಗಿ, ಮೇಕ್ ಇನ್ ಇಂಡಿಯಾ ಮೂಲಕ 10 ಕೋಟಿ ಜನರಿಗೆ ಉದ್ಯೋಗ ಕಲ್ಪಿಸದಿರುವುದು, 2022ರಲ್ಲೇ ಎಲ್ಲಾ ಭಾರತೀಯರಿಗೆ ಪಕ್ಕಾ ಮನೆ ಕಲ್ಪಿಸಲಾಗುವುದು ಎಂದು ಹೇಳಿ ಮಾತಿಗೆ ತಪ್ಪಿರುವುದು, ರೈತರ ಆದಾಯ ದ್ವಿಗುಣಗೊಳಿಸದೆ ಇರುವುದು, ನೋಟ್ ಬ್ಯಾನ್ ದಿಂದ ಯಾವುದೇ ಸುಧಾರಣೆಯಾಗದಿರುವುದು, ಗುಜರಾತನ ಅಹ್ಮದಾಬಾದ್ ಹಾಗೂ ಮಹಾರಾಷ್ಟ್ರದ ಮುಂಬೈ ನಡುವೆ 2000ಕ್ಕೆ ಬುಲೈಟ್ ಟ್ರೇನ್ ಶುರುವಾಗುವುದು ಎಂದು ಹೇಳಿರುವುದು, ಪಿಎಂ ಕಿಸಾನ್‌ದಿಂದ ಸುಧಾರಣೆ ಕಾಣದಿರುವುದು, ಬ್ಯಾಂಕ್‌ದಿಂದ ಸಾಲ ಪಡೆದು ಹೊರಗಡೆ ಓಡಿ ಹೋದವರನ್ನು ಹಿಡಿದುಕೊಂಡು ತಂದು ಜೈಲಿಗೆ ಹಾಕುತ್ತೇನೆ ಎಂದು ಪಿಎಂ ಹೇಳಿದ್ದರು. ಹೀಗೆ ಸುಳ್ಳುಗಳನ್ನು ದೇಶದ ಜನತೆಗೆ ಮೋದಿ ಹೇಳಿದ್ದಾರೆಂದು ಖರ್ಗೆ ಟೀಕಿಸಿದರು.

## ಇನ್ನೊಂದು ತಿಂಗಳಲ್ಲಿ ಹೊರಗೆ ಬರ್ತಾರೆ, ಸೂರಜ್ ರೇವಣ್ಣ

• **ಉದಯವಾಹಿನಿ, ಹಾಸನ**

ಪ್ರಜ್ವಲ್ ರೇವಣ್ಣ ಇನ್ನೊಂದು ತಿಂಗಳಲ್ಲಿ ಹೊರಗೆ ಬರ್ತಾರೆ, ಯಾರು ತಲೆಕೆಡಿಸಿಕೊಳ್ಳೇಡಿ ಎಂದು ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಹೇಳಿದ್ದಾರೆ. ಹೊಳೆನರಸೀಪುರದ ಚಾಕೇನಹಳ್ಳಿಕಟ್ಟೆ ಗ್ರಾಮದಲ್ಲಿ ದನು ಸ್ಮರಣಾರ್ಥ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿ ಉದ್ಘಾಟಿಸಿ ಅವರು ಮಾತನಾಡಿದ ಅವರು, ಈ ವೇಳೆ ಪ್ರಜ್ವಲ್ ರೇವಣ್ಣ ಈ ಗ್ರಾಮಕ್ಕೆ ಕೊಡುಗೆ ಕೊಟ್ಟಿದ್ದಾರೆ. ಅವರು ಶೀಘ್ರದಲ್ಲೇ ಬಿಡುಗಡೆಯಾಗುತ್ತಾರೆ. ನಾವು, ನೀವು ಎಲ್ಲರೂ ಒಟ್ಟಿಗೆ ಸ್ವಾಗತ ಮಾಡೋಣ. ಇವತ್ತಿಗೆ ಪ್ರಪಂಚ ಮುಗಿದು ಹೋಗಿಲ್ಲ. ಮುಂದಕ್ಕೂ ರಾಜಕೀಯ ಏನು ಅನ್ನೋದು ನನಗೂ ಗೊತ್ತಿದೆ ಎಂದಿದ್ದಾರೆ. ನಾಲ್ಕೈದು ತಿಂಗಳಲ್ಲಿ ಸರ್ಕಾರ ಬದಲಾವಣೆ ಆಗುತ್ತೆ ಮುಂದಿನ ನಾಲ್ಕೈದು ತಿಂಗಳಿನಲ್ಲಿ ರಾಜ್ಯ ಕಾಂಗ್ರೇಸ್ ಸರ್ಕಾರ ಬದಲಾವಣೆ ಆಗುತ್ತದೆ ಎಂದು ಜೆಡಿಎಸ್ ಎಂ ಎಲ್ ಸಿ ರೇವಣ್ಣ ಸ್ಫೋಟಕವಾದ ಹೇಳಿಕೆ ನೀಡಿದರು.

## ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಕಟ

• **ಉದಯವಾಹಿನಿ, ಬೆಂಗಳೂರು**

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ. 2023ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿ, ಸಾಹಿತ್ಯ ಶ್ರೀ ಪ್ರಶಸ್ತಿ ಪ್ರಕಟಿಸಲಾಗಿದೆ.

ಐವರು ಹಿರಿಯ ಸಾಹಿತಿಗಳಿಗೆ ವಾರ್ಷಿಕ ಗೌರವ ಪ್ರಶಸ್ತಿ, 10 ಮಂದಿಗೆ ಸಾಹಿತ್ಯ ಶ್ರೀ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಡಾ.ಸಿ. ವೀರಣ್ಣ, ಡಾ. ಶ್ರೀರಾಮ ಇಟ್ಟಣ್ಣವರ, ಜಾಣಗೆರೆ ವೆಂಕಟರಾಮಯ್ಯ, ಎ.ಎಂ. ಮದರಿ, ಡಾ. ಸಬಿಹಾ ಭೂಮಿ ಗೌಡ ಅವರಿಗೆ ವಾರ್ಷಿಕ ಗೌರವ ಪ್ರಶಸ್ತಿ ನೀಡಲಾಗಿದೆ. ಪ್ರಶಸ್ತಿ 50,000 ರೂ. ನಗದು, ಪ್ರಶಸ್ತಿ ಫಲಕ, ಪ್ರಮಾಣ ಪತ್ರ ಒಳಗೊಂಡಿರುತ್ತದೆ.



ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಅಮೂಲ್ಯ ಸೇವೆ ಪರಿಗಣಿಸಿ 50 ರಿಂದ 60ರ ವಯೋಮಾನದ 10 ಮಂದಿಗೆ ಸಾಹಿತಿಗಳಿಗೆ ಸಾಹಿತ್ಯ ಶ್ರೀ ಪ್ರಶಸ್ತಿ ನೀಡಲು ನಿರ್ಧರಿಸಲಾಗಿದೆ. ಪ್ರಶಸ್ತಿಯು 25 ಸಾವಿರ ರೂ. ನಗದು, ಪ್ರಶಸ್ತಿ ಫಲಕ, ಪ್ರಮಾಣ ಪತ್ರ ಒಳಗೊಂಡಿದೆ. ಡಾ. ಎಂ.ಎಸ್. ಶೇಖರ್, ಜಿ.ಎನ್. ಮೋಹನ್, ಟಿ.ಎಸ್. ವಿವೇಕಾನಂದ, ಜಯಶ್ರೀ ಕಂಬಾರ ನಿಜಲಿಂಗಪ್ಪ ಯಮನಪ್ಪ ಮಟ್ಟಿಹಾಳ, ಬಾಲಗುರುಮೂರ್ತಿ, ಶಿವಗಂಗಾ ರುಮ್ಮಾ, ರೀಟಾ ರೀನಿ, ಕಲೀಮ್ ಉಲ್ಲಾ ವೆಂಕಟಗಿರಿ ದಳವಾಯಿ ಅವರಿಗೆ ಸಾಹಿತ್ಯ ಶ್ರೀ ಪ್ರಶಸ್ತಿ ನೀಡಲಾಗಿದೆ. ಮಾರ್ಚ್ 24ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

# ಮೀಸಲಾತಿ ಸೌಲಭ್ಯ ಕೊಟ್ಟಿದ್ದು ನಾವು, ಅದರ ಪ್ರತಿಫಲ ಸಿಗುತ್ತಿರುವುದು ಕಾಂಗ್ರೇಸ್ ಪಕ್ಷಕ್ಕೆ


## ವರ್ಷಕ್ಕೊಮ್ಮೆ ಅಲ್ಲ, ಪ್ರತಿನಿತ್ಯವೂ ಮಹಿಳೆಯರ ದಿನಾಚರಣೆಯನ್ನು ಹೃದಯದಲ್ಲಿ ಆಚರಣೆ ಮಾಡೋಣ

• **ಉದಯವಾಹಿನಿ, ಬೆಂಗಳೂರು**

ರಾಜ್ಯದಲ್ಲಿ ಸಾಮಾಜಿಕ ನ್ಯಾಯ, ದುರ್ಬಲರಿಗೆ ಮೀಸಲಾತಿ ಸೌಲಭ್ಯ ತಂದಿದ್ದೇ ನಾವು ಆದರೆ ಇವತ್ತು ಅದರ ಪ್ರತಿಫಲವನ್ನು ಕಾಂಗ್ರೇಸ್ ಅನುಭವಿಸುತ್ತಿದೆ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹೇಳಿದರು.

ಜೆಡಿಎಸ್ ಪಕ್ಷದ ರಾಜ್ಯದ ಕಚೇರಿ ಜೆಪಿ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಇವರು ಬಜೆಟ್ ಮಂಡಿಸಿದ್ದಾರೆ. ಅದರ ಬಗ್ಗೆ ನಾನು ಒಂದು ಶಬ್ದವನ್ನೂ ಮಾತನಾಡುವುದಿಲ್ಲ. ಸಮಯ ಬಂದಾಗ ಮಾತನಾಡುತ್ತೇನೆ. ಆದರೆ ಸಾಮಾಜಿಕ ನ್ಯಾಯ ಎಂದೆಲ್ಲಾ ಮಾತನಾಡುತ್ತಿದ್ದಾರೆ. ಈ ರಾಜ್ಯದಲ್ಲಿ ಸಾಮಾಜಿಕ ನ್ಯಾಯ ಮತ್ತು ದುರ್ಬಲ ಜನರಿಗೆ ಮೀಸಲಾತಿ ಸೌಲಭ್ಯ ಕೊಟ್ಟಿದ್ದೇ ನಾವು. ಆದರೆ, ಅದು ಕಾಂಗ್ರೇಸ್ ಪಕ್ಷಕ್ಕೆ ಅನುಕೂಲವಾಗಿದೆ ಎಂದರು.



ನಾರಿಯರಿಗೆ ಶಕ್ತಿ ತುಂಬಿದವರು ನರೇಂದ್ರ ಮೋದಿಯವರು. ನಾವು ಅವರ ಜೊತೆ ಇದ್ದೇವೆ, ಯಾವ ಭಯವೂ ಇಲ್ಲ. ಪಕ್ಷದಲ್ಲಿ ಮುಂದೆ ಕನಿಷ್ಠ ಐವತ್ತು ಮಹಿಳಾ ಸಮಾವೇಶಗಳು ನಡೆಯಬೇಕು. ಭಿಕ್ಷೆ ಬೇಡಿಯಾದರೂ ಹಣ ಕೊಡುತ್ತೇನೆ. ಅದಕ್ಕೆ ಕೇಂದ್ರ ಸಚಿವರಾದ ಕುಮಾರಸ್ವಾಮಿ ಅವರು ಬರುತ್ತಾರೆ, ನಾನು ಬರುತ್ತೇನೆ. ನಿಖಿಲ್ ಅವರು ರಾಜ್ಯದ ಉದ್ದಗಲಕ್ಕೂ ಓಡಾಡಿ ಪಕ್ಷವನ್ನು ಕಟ್ಟಬೇಕು. ಸಮಾವೇಶಗಳನ್ನು ನಡೆಸಬೇಕು ಎಂದು ದೇವೇಗೌಡರು ಹೇಳಿದರು. ನಾವು ಎಷ್ಟು ಕೆಲಸ ಮಾಡಿದ್ದೇವೆ, ಈ ನಾಡಿನ ಜನರಿಗೆ ಏನೆಲ್ಲಾ ಮಾಡಿದ್ದೇವೆ ಎನ್ನುವುದನ್ನು ಹೇಳಬೇಕು. ಏನೂ ಮಾಡದೆಯೇ ಅಧಿಕಾರ ಅನುಭವಿಸುತ್ತಿರುವವರ ಬಗ್ಗೆಯೂ ನಾವು ಜನರಿಗೆ ತಿಳಿ ಹೇಳಬೇಕಿದೆ ಎಂದು ಅವರು ಒತ್ತಿ ಹೇಳಿದರು. ಮುಂದಿನ ವರ್ಷಗಳಲ್ಲಿ ಕನಿಷ್ಠ 80 ಮಹಿಳೆಯರು ನಮ್ಮ ಪಕ್ಷದಿಂದ ಅಸೆಂಬ್ಲಿಗೆ ನಿಲ್ಲಬೇಕು. ಅದನ್ನು ನಾನು ಕಣ್ಣಾರೆ ನೋಡಬೇಕು. ಮೋದಿಯವರು ಮಹಿಳಾ ಸಬಲೀಕರಣಕ್ಕೆ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದಾರೆ. ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಬಿಲ್ ಪಾಸಾಗಿದೆ ಎಂದು ಮಾಜಿ ಪ್ರಧಾನಿಗಳು ಸಂತೋಷ ವ್ಯಕ್ತಪಡಿಸಿದರು. ಪಕ್ಷ ಸಂಘಟನೆಗೆ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕು. ಪ್ರತಿ ಜಿಲ್ಲೆಗೂ ಭೇಟಿ ಕೊಡಬೇಕು. ಕಾರ್ಯಕರ್ತರನ್ನು ಸಂಪರ್ಕಿಸಬೇಕು. ಅವರ ನೇತೃತ್ವದಲ್ಲಿಯೇ ಸಂಘಟನೆ ಕಟ್ಟಬೇಕು. ನಾನು ಕೂಡ ಎಲ್ಲಾ ಕಡೆ ಬರುತ್ತೇನೆ. ನಿಖಿಲ್ ನೇತೃತ್ವದಲ್ಲಿ ಯುವಕರು ಸಂಘಟನೆಯನ್ನು ಕಟ್ಟಬೇಕು ಎಂದು ಮಾಜಿ ಪ್ರಧಾನಿ ಕಾರ್ಯಕರ್ತೆಯರು, ನಾಯಕಿಯರಿಗೆ ಆತ್ಮವಿಶ್ವಾಸ ತುಂಬಿದರು. ವರ್ಷಕ್ಕೊಮ್ಮೆ ಅಲ್ಲ, ಪ್ರತಿನಿತ್ಯವೂ ಮಹಿಳೆಯರ ದಿನಾಚರಣೆಯನ್ನು ಹೃದಯದಲ್ಲಿ ಆಚರಣೆ ಮಾಡೋಣ ಇಂದು ಪಕ್ಷದ ಕಚೇರಿಯಲ್ಲಿ ದೇವೇಗೌಡರ ಉಪಸ್ಥಿತಿಯಲ್ಲಿ ಕಾರ್ಯಕ್ರಮ ಆಗಿದೆ. ಪಕ್ಷ ಸಂಘಟನೆಗೆ ಮಹಿಳೆಯರು ಎಷ್ಟು ತ್ಯಾಗ ಮಾಡಿದ್ದಾರೆ ಎನ್ನುವುದನ್ನು ನಾನು ಬಲ್ಲೆ. ನಮ್ಮ ಅಜ್ಜ ದೇವೇಗೌಡರು ಸಂಘಟನೆಗಾಗಿ ಇಡೀ ರಾಜ್ಯವನ್ನು ಸುತ್ತುತ್ತಿದ್ದರೆ, ನಮ್ಮ ಅಜ್ಜಿಯವರು ಎಷ್ಟು ತ್ಯಾಗ ಮಾಡಿರಬಹುದು ಎನ್ನುವುದು ನನಗೆ ಗೊತ್ತಿದೆ ಎಂದು ನಿಖಿಲ್ ಕುಮಾರಸ್ವಾಮಿ ಅವರು ಇದೇ ಸಂದರ್ಭದಲ್ಲಿ ಹೇಳಿದರು.

> ಭಾರತ ಎಲ್ಲಾ ಕ್ಷೇತ್ರಗಳಲ್ಲಿಯೂ ಮುಂದುವರೆಯುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ದೇಶವು ಜಗತ್ತಿನ ಮೂರನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಅವತರಿಸುವ ದಿನಗಳು ದೂರವಿಲ್ಲ. ನರೇಂದ್ರ ಮೋದಿಯವರ ಹತ್ತು ವರ್ಷಗಳ ಆಡಳಿತವನ್ನು ಎಲ್ಲರೂ ಮೆಚ್ಚಬೇಕು. ಇಂದು ಭಾರತಕ್ಕೆ ಜಾಗತಿಕವಾಗಿ ದೊಡ್ಡ ಗೌರವ ಸಿಕ್ಕಿದೆ ಅಂದರೆ ಅದಕ್ಕೆ ಮೋದಿ ಅವರೇ ಕಾರಣ ಎಂದು ಹೇಳಿದರು.
>
> -ನಿಖಿಲ್ ಕುಮಾರಸ್ವಾಮಿ

### ನಿಖಿಲ್ ಕುಮಾರಸ್ವಾಮಿ ರಾಜ್ಯ ಕಾಂಗ್ರೇಸ್ ಸರಕಾರಕ್ಕೆ ಟಾಂಗ್

ಮಹಿಳಾ ಸಬಲೀಕರಣ ಎಂದರೆ ಇಷ್ಟ ಬಂದಾಗ ಎರಡು ಸಾವಿರ ರೂಪಾಯಿ ಬ್ಯಾಂಕ್ ಖಾತೆಗೆ ಹಾಕುವುದಲ್ಲ. ದೇವೇಗೌಡರು ಮಹಿಳೆಯರಿಗೆ 33% ಮೀಸಲಾತಿ ನೀಡಲು ದಿಟ್ಟ ಕ್ರಮ ಕೈಗೊಂಡರು. ಆಗ ವಿಧೇಯಕ ರಾಜ್ಯಸಭೆಯಲ್ಲಿ ಅಂಗೀಕಾರವಾಯಿತು. ಆದರೆ, ಲೋಕಸಭೆಯಲ್ಲಿ ಅವರದ್ದೇ ಸರಕಾರದ ಭಾಗವಾಗಿದ್ದ ಆರ್ ಜೆಡಿ, ಸಮಾಜವಾದಿ ಪಕ್ಷಗಳು ಬೆಂಬಲ ನೀಡದ ಕಾರಣ ಬಿದ್ದು ಹೋಯಿತು. ಇಲ್ಲವಾಗಿದ್ದಿದ್ದರೆ ಅಂದೇ ಮಹಿಳೆಯರಿಗೆ ಮೀಸಲು ಸೌಲಭ್ಯ ಜಾರಿಗೆ ಬರುತ್ತಿತ್ತು. ಅದನ್ನು ಮೋದಿ ಅವರು ಸಾಧಿಸಿ ತೋರಿಸಿದರು. ಮಹಿಳಾ ಸಬಲೀಕರಣ ಎಂದರೆ ಇದು ಎಂದು ನಿಖಿಲ್ ಕುಮಾರಸ್ವಾಮಿ ಅವರು ರಾಜ್ಯಕಾಂಗ್ರೇಸ್ ಸರಕಾರಕ್ಕೆ ಟಾಂಗ್ ಕೊಟ್ಟರು.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹8,771/Gram24ct ₹8,040/Gram22ct | ಬೆಳ್ಳಿ: ₹99.10/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ರಾಮೋಹಳ್ಳಿ**

# ಮಠ ನಿಮ್ಮದು, ಸೇವೆ ನಮ್ಮದು

ನಿನ್ನೆ ಸವದತ್ತಿ ತಾಲ್ಲೂಕಿನ ಉಗರಗೊಳ್ಳದ ನಿರ್ವಾಣೇಶ್ವರ ಮಠಕ್ಕೆ ಭೇಟಿ ನೀಡಿದಾಗ ಮಠದ ಗೋಡೆಯ ಮೇಲೆ ಕಂಡ ಬರಹವಿದು. ಸರ್ಕಾರದ ಕೆಲಸ ದೇವರ ಕೆಲಸ, ಜನತಾ ಸೇವೆ ಜನಾರ್ದನನ ಸೇವೆ ಮಾತು ನೆನಪಾದವು. ಕೃತಿಗಿಳಿದ ಈ ಮಾತು ಅದೆಷ್ಟು ಚೆನ್ನ! ಜಾತ್ರಾಮಹೋತ್ಸವದ ಪತ್ರಿಕೆಯಲ್ಲಿ ಬಸವ ರೇಣುಕ ವಾಲ್ಮೀಕಿ ಅಂಬಿಗರ ಚೌಡಯ್ಯ ಕನಕ ಸಿದ್ಧಾರೂಢ ಅಂಬೇಡ್ಕರ್ ಮುಂತಾದವರೆಲ್ಲರ ಭಾವಚಿತ್ರಗಳು! ಸಿದ್ಧಾರೂಢರ ಶಿಷ್ಯ ನಿರ್ವಾಣ ಶಿವಯೋಗಿಗಳ ಈ ಮಠಕ್ಕೆ 38 ವರ್ಷಗಳ ಹಿಂದೆ ಭೇಟಿ ನೀಡಿದ್ದೆ. ಆಗ ತಾನೇ ಈಗಿನ ಶ್ರೀಗಳು ಮಹಂತ ಸ್ವಾಮಿಗಳು ಮಠವನ್ನು ವಹಿಸಿಕೊಂಡು ಮೌನವ್ರತದಲ್ಲಿದ್ದರು. ಮತ್ತೆ ಈಗ ನೋಡಿ ವಿಶಾಲತೆಯರಿತು ಸಂತಸಪಟ್ಟೆ. ವೇದಿಕೆಯಲ್ಲಿ ಬಾಲ್ಯ ಮಿತ್ರ ಶಿವಾನಂದ ಸ್ವಾಮೀಜಿ ಗೊರವನಕೊಳ್ಳ, ಅಭಿನವ ರೇವಣಸಿದ್ಧ ಸ್ವಾಮೀಜಿ ಉಪಸ್ಥಿತರಿದ್ದರು. ನಿರ್ವಾಣ ಶಿವಯೋಗಿಗಳು ಕನ್ನಡೀಕರಿಸಿ ಬರೆದ ವೇದಾಂತ ಪಂಚೀಕರಣ ಕೃತಿಯ ಕುರಿತು ಹೇಳಲಾಯಿತು. ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿಯ ನೀತಿಕ್ರಿಯಾಚರ್ಯಸ್ಥಲದ ಮಮಕಾರದಿಂದೆ ಮಿಕ್ಕಿನ ಬಂಧಮುಂಟೆ? ಎಂಬ ವಿಷಯದ ಮೇಲೆ ಆಡಿದ ಮಾತು : ಉಸಿರಿಲ್ಲದ ದೇಹ ಶವ. ಆಗ ಚಪ್ಪಲಿಗಿರುವ ಬೆಲೆಯೂ ಇದಕ್ಕಿಲ್ಲ. ಇಂಥ ದೇಹವೇ ನಾನೆಂದು ತಿಳಿದು ಈ ದೇಹಕ್ಕೆ ಮಾತ್ರ ಸಂಬಂಧಪಟ್ಟಂತೆ ನನ್ನದು ಎನ್ನುವ ಸಂಕುಚಿತ ಮಮಕಾರ ಬಂಧನಕಾರಿ. ಸಂಕುಚಿತೆಗೆ ಜನಮನ್ನಣೆ ಸಿಗದು. ಜನ ಹಿಂದೆ ಸರಿದರೆ ಒಂಟಿತನ. ಶವ ಹೊರಲೂ ಬೇಕು ನಾಲ್ಕು ಜನ. ಜನರ ಮನ್ನಣೆಗಾಗಿ ಉದಾರಿಯಾಗಿ ಎಲ್ಲ ನನ್ನದು ಎಲ್ಲರೂ ನನ್ನವರೆನ್ನಿ.

# ಭಜನ-ಪ್ರವಚನ-ಸಂಕೀರ್ತನ

• **ಉದಯವಾಹಿನಿ, ಬೆಂಗಳೂರು**

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ವಿಜಯನಗರದ ಮಾಧ್ವ ಸಂಘದಲ್ಲಿ ಮಾರ್ಚ್ 11 ರಿಂದ 14ರ ವರೆಗೆ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಭಜನಾ ಕಾರ್ಯಕ್ರಮ : ಪ್ರತಿದಿನ ಸಂಜೆ 5-30ಕ್ಕೆ. ಮಾರ್ಚ್ 11- ವಿಜಯನಗರದ ಪವಿತ್ರ ಗಾನ ವೃಂದ, ಮಾರ್ಚ್ 12-ಅಮರಜ್ಯೋತಿನಗರದ ಶ್ರೀ ಗುರು ರಾಘವೇಂದ್ರ ಭಜನಾ ಮಂಡಳಿ, ಮಾರ್ಚ್ 13-ಬಸವೇಶ್ವರನಗರದ ಅಲಕನಂದ ಭಜನಾ ಮಂಡಳಿ.



ಪ್ರವಚನ ಕಾರ್ಯಕ್ರಮ : ಮಾರ್ಚ್ 11 ರಿಂದ 13, ಪ್ರತಿದಿನ ಸಂಜೆ 6-30ಕ್ಕೆ. ಪ್ರವಚನಕಾರರು : ಡಾ|| ವೆಂಕಟೇಶ್ ಆಚಾರ್ಯ. ವಿಷಯ : ಮಾರ್ಕಂಡೇಯ ಪುರಾಣ. ಹರಿನಾಮ ಸಂಕೀರ್ತನೆ : ಮಾರ್ಚ್ 14, ಶುಕ್ರವಾರ ಸಂಜೆ 6-00 ಗಂಟೆಗೆ. ಗಾಯನ : ಶ್ರೀ ಪ್ರಾಣೇಶ್ ಪಿ. ಭಾರದ್ವಾಜ್ ಮತ್ತು ಶ್ರೀ ಕೌಶಿಕ್. ಕೀ-ಬೋರ್ಡ್ : ಶ್ರೀ ಅಮಿತ್ ಶರ್ಮಾ, ತಬಲಾ : ಶ್ರೀ ಶ್ರೀನಿವಾಸ ಕಾಖಂಡಕಿ. ಕಾರ್ಯಕ್ರಮ ನಡೆಯುವ ಸ್ಥಳ : ವಿಜಯ ಮಧ್ವಸಂಘ, 37/2, ಗಂಗಾಧರ ಬಡಾವಣೆ,2ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು - 560 040 ಈ ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳಲ್ಲೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಟಿಟಿಡಿ ಹೆಚ್.ಡಿ.ಪಿ.ಪಿ. ಸಂಚಾಲಕರಾದ ಡಾ|| ಪಿ. ಭುಜಂಗರಾವ್ ವಿನಂತಿಸಿದ್ದಾರೆ.

### ಉಡುಪಿ ಪೇಜಾವರ ಅಧೋಕ್ಷಜ ಮಠದ ವಿಶ್ವೇಶತೀರ್ಥ ಮೆಮೋರಿಯಲ್ ಹಾಸ್ಪಿಟಲ್ ಉದ್ಘಾಟನಾ ಸಮಾರಂಭ

# ಬಿವೈವೈ ಭಾಷಣ ಮಾಡುತ್ತಿದ್ದಾಗ ಅಮಿತ್ ಶಾಗೆ ಚೀಟಿ ಕೊಟ್ಟ ಲಿಂಬಾವಳಿ

• **ಉದಯವಾಹಿನಿ, ಬೆಂಗಳೂರು**

ಕೆಲವೇ ಕೆಲವು ಗಂಟೆಗಳ ಕಾರ್ಯಕ್ರಮಕ್ಕಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಜಧಾನಿಗೆ ಆಗಮಿಸಿದ್ದರು. ಉಡುಪಿ ಪೇಜಾವರ ಅಧೋಕ್ಷಜ ಮಠದ ವಿಶ್ವೇಶತೀರ್ಥ ಮೆಮೋರಿಯಲ್ ಹಾಸ್ಪಿಟಲ್ ಉದ್ಘಾಟನಾ ಸಮಾರಂಭ, ಬೆಂಗಳೂರಿನಲ್ಲಿ ಆಯೋಜನೆಗೊಂಡಿತ್ತು. ಮಹದೇವಪುರ ಅಸೆಂಬ್ಲಿ ವ್ಯಾಪ್ತಿಯ ಕುಂದಲ ಹಳ್ಳಿ ಗೇಟ್ ಬಳಿಯ ಈ ಆಸ್ಪತ್ರೆಯ ಉದ್ಘಾಟನೆಗೆ ಅಮಿತ್ ಶಾ ಆಗಮಿಸಿದ್ದರು. ಕೆಲವೇ ಗಂಟೆ ಬೆಂಗಳೂರಿನಲ್ಲಿದ್ದರೂ, ವಿಜಯೇಂದ್ರ ಬಣ ಮತ್ತು ಯತ್ನಾಳ್ ಬಣಕ್ಕೆ ಭಿನ್ನಮತ ಸಹಿಸುವುದಿಲ್ಲ ಎನ್ನುವ ಸಂದೇಶವನ್ನು ಕೊಟ್ಟು ಹೋಗಿದ್ದಾರೆ. ಇದು ವೇದಿಕೆಯ ಕಾರ್ಯಕ್ರಮದಲ್ಲಿ ಸ್ಪಷ್ಟವಾಗಿತ್ತು.

ಈ ಕಾರ್ಯಕ್ರಮದಲ್ಲಿ ಅಮಿತ್ ಶಾ ಮಧ್ಯದಲ್ಲಿ ಕೂತಿದ್ದರು, ಅವರ ಒಂದು ಕಡೆ ಪೇಜಾವರ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಗಳು ಕುಳಿತಿದ್ದರು. ಇನ್ನೊಂದು ಕಡೆ ಮಾಜಿ ಸಿಎಂ ಯಡಿಯೂರಪ್ಪ ಮತ್ತು ಅರವಿಂದ ಲಿಂಬಾವಳಿ ಕೂತಿದ್ದರು. ಶ್ರೀಗಳ ಇನ್ನೊಂದು ಪಕ್ಕ ವಿಜಯೇಂದ್ರ ಕೂತಿದ್ದರು.

ಅಮಿತ್ ಶಾ ಅವರು ಕಾರ್ಯಕ್ರಮದ ತಮ್ಮ ಭಾಷಣದಲ್ಲಿ ವಿಜಯೇಂದ್ರ ಅವರ ಹೆಸರನ್ನು ಉಲ್ಲೇಖಿಸಿದೇ, ರಾಜ್ಯಾಧ್ಯಕ್ಷರು ಎಂದು ಮಾತ್ರ ಉಲ್ಲೇಖಿಸಿದ್ದಾರೆ. ತಮ್ಮ ಭಾಷಣ ಮುಗಿದ ಕೂಡಲೇ, ಅಮಿತ್ ಶಾ ಕಾರ್ಯಕ್ರಮದಿಂದ ಹೊರಟಿದ್ದಾರೆ. ಶ್ರೀಗಳ ಜೊತೆ ಮಾತುಕತೆ ನಡೆಸುತ್ತಿದ್ದ ವಿಜಯೇಂದ್ರರನ್ನು ತಂದೆ ಯಡಿಯೂರಪ್ಪ, ಅಮಿತ್ ಶಾ ಜೊತೆ ಕೂಡಲೇ ಹೋಗುವಂತೆ ಸೂಚಿಸಿದ್ದಾರೆ. ತಮಿಳುನಾಡಿನ ಕಾರ್ಯಕ್ರಮವನ್ನು ಮುಗಿಸಿ ಅಮಿತ್ ಶಾ, ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದರು. ಅಲ್ಲಿಂದ, ಕಾರ್ಯಕ್ರಮ ನಡೆದ ಕುಂದಲಹಳ್ಳಿ ಗೇಟ್ ಮತ್ತು ಕಾರ್ಯಕ್ರಮ ಮುಗಿದ ನಂತರ, ವಾಪಸ್ ವಿಮಾನ ನಿಲ್ದಾಣಕ್ಕೆ, ವಿಜಯೇಂದ್ರ ಅವರ ಜೊತೆ ಪ್ರಯಾಣಿಸಿದ್ದರು. ಆ ವೇಳೆ, ರಾಜಕೀಯ ಚರ್ಚೆ ನಡೆಯದೇ ಇರುತ್ತದೆಯೇ ಎಂದು ವಿಶ್ಲೇಷಿಸಲಾಗುತ್ತಿದೆ.

ಬಸನಗೌಡ ಪಾಟೀಲ್ ಯತ್ನಾಳ್ ಬಣದಲ್ಲಿ ಕಾಣಿಸಿ ಕೊಳ್ಳುತ್ತಿರುವ ಅರವಿಂದ ಲಿಂಬಾವಳಿಯವರ ಮೇಲೆ ಅಮಿತ್ ಶಾ ಸಿಟ್ಟಾಗಿರಬಹುದು. ಮೂಲತಃ ಆರ್ ಎಸ್ ಎಸ್ ಮೂಲದವರಾಗಿ ಬಹಿರಂಗವಾಗಿ ಭಿನ್ನಮತ ಚಟುವಟಿಕೆ ನಡೆಸುವುದು ಸರಿಯೇ ಎನ್ನುವ ಕೋಪತಾಪ ಅವರಿಗಿದೆಯೇ ಎನ್ನುವುದು ಪ್ರಶ್ನೆಯಾಗಿದೆ. ಅರವಿಂದ ಲಿಂಬಾವಳಿ ಕೂಡಾ, ಉಡುಪಿ ಮಠದ ಕಾರ್ಯಕ್ರಮದ ಬಗ್ಗೆ ತಮ್ಮ ಸಾಮಾಜಿಕ ತಾಣದಲ್ಲಿ ಬರೆದುಕೊಂಡಿದ್ದಾರೆ. ಆದರೆ, ಎಲ್ಲೂ ಅವರು ಯಡಿಯೂರಪ್ಪ ಅಥವಾ ವಿಜಯೇಂದ್ರ ಅವರ ಹೆಸರನ್ನು ಪ್ರಸ್ತಾವಿಸದೇ ಇರುವುದು, ಭಿನ್ನಮತದ ಕಾವು ಎಷ್ಟು ಎನ್ನುವುದರ ಅರಿವಾಗುತ್ತದೆ. ಕೇಂದ್ರದ ಗೃಹ, ಸಹಕಾರಿ ಸಚಿವರಾದ ಸನ್ಮಾನ್ಯ ಶ್ರೀ ಅವರೊಂದಿಗೆ ಮಹದೇವಪುರ ವಿಧಾನ ಸಭಾ ಕ್ಷೇತ್ರದ ಕುಂದಲಹಳ್ಳಿ ಗೇಟ್ ಬಳಿ ಶ್ರೀ ವಿಶ್ವೇಶತೀರ್ಥ ಮೆಮೋರಿಯಲ್ ಹಾಸ್ಪಿಟಲ್ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಾಯಿತು. ಈ ವೇಳೆ ಉಡುಪಿಯ ಪೇಜಾವರ ಅಧೋಕ್ಷಜ ಮಠದ ಪರಮ ಪೂಜ್ಯ ಶ್ರೀ ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಗಳು ದಿವ್ಯ ಸಾನಿಧ್ಯವನ್ನು ವಹಿಸಿ ಆಶೀರ್ವಚನ ನೀಡಿದರು. ಈ ಸಂದರ್ಭದಲ್ಲಿ ಗಣ್ಯರು, ಆಸ್ಪತ್ರೆಯ ಆಡಳಿತ ಮಂಡಳಿಯ ಮುಖ್ಯಸ್ಥರು, ಮುಖಂಡರು ಕಾರ್ಯಕರ್ತರು ಉಪಸ್ಥಿತರಿದ್ದರು ಎಂದು ಅರವಿಂದ ಲಿಂಬಾವಳಿ ಟ್ವೀಟ್ (ಎಕ್ಸ್) ಮಾಡಿದ್ದಾರೆ.



ಉದಯವಾಹಿನಿ ಚಿತ್ರ

- ಉಡುಪಿ ಪೇಜಾವರ ಅಧೋಕ್ಷಜ ಮಠದ ವಿಶ್ವೇಶತೀರ್ಥ ಮೆಮೋರಿಯಲ್ ಹಾಸ್ಪಿಟಲ್ ಉದ್ಘಾಟನಾ ಸಮಾರಂಭ
- ವಿಜಯೇಂದ್ರ ಅವರ ಹೆಸರನ್ನು ಉಲ್ಲೇಖಿಸಿದೇ, ರಾಜ್ಯಾಧ್ಯಕ್ಷರು ಎಂದು ಮಾತ್ರ ಉಲ್ಲೇಖಿಸಿದ ಅಮಿತ್ ಶಾ
- ದೆಹಲಿಗೆ ಬರುವಂತೆ ಲಿಂಬಾವಳಿಯವರಿಗೆ ಅಮಿತ್ ಶಾ ಸೂಚಿಸಿದ್ದಾರೆ ಎಂದು ಹೇಳಲಾಗುತ್ತಿದೆ

**ಇದಕ್ಕೂ ಮುನ್ನ, ಅಮಿತ್ ಶಾ ಸಮ್ಮುಖದಲ್ಲಿ ಯಡಿಯೂರಪ್ಪ ಭಾಷಣವನ್ನು ಮಾಡಿ ವಿಶ್ವೇಶತೀರ್ಥ ಶ್ರೀಗಳ ಕೊಡುಗೆಯನ್ನು ವಿವರಿಸಿದ್ದರು. ಆ ವೇಳೆ, ಅಮಿತ್ ಶಾ ಪಕ್ಕಕ್ಕೆ ಬಂದು ಕೂತ, ಅರವಿಂದ ಲಿಂಬಾವಳಿ ಅದೇನೋ ಚೀಟಿಯನ್ನು ಅಮಿತ್ ಶಾಗೆ ಕೊಟ್ಟಿದ್ದಾರೆ. ಅಮಿತ್ ಶಾ ಅವರ ಭದ್ರತೆಯವರು ಆ ಚೀಟಿಯನ್ನು ನೋಡಿ, ತಮ್ಮ ಜೇಬಿನೊಳಗೆ ಇಟ್ಟುಕೊಂಡಿದ್ದಾರೆ. ಆ ವೇಳೆ ಏನನ್ನೂ ಲಿಂಬಾವಳಿ ಜೊತೆ ಮಾತನಾಡದೇ, ದೆಹಲಿಗೆ ಬರುವಂತೆ ಲಿಂಬಾವಳಿ ಯವರಿಗೆ ಸೂಚಿಸಿದ್ದಾರೆ ಎಂದು ಹೇಳಲಾಗುತ್ತಿದೆ. ಆ ಚೀಟಿಯ ಬಗ್ಗೆ ಅಮಿತ್ ಶಾ ಹೆಚ್ಚೇನು ತಲೆಕೆಡಿಸಿಕೊಳ್ಳದೇ, ಲಿಂಬಾವಳಿ ಕಡೆ ತಿರುಗಿ ಕೂಡಾ ನೋಡಲಿಲ್ಲ. ಇದರಿಂದ, ಲಿಂಬಾವಳಿಗೆ ನಿರಾಸೆಯಾಗಿರಬಹುದು ಎನ್ನುವುದು ಬಾಡಿ ಲಾಂಗ್ವೇಜ್ ಮೂಲಕ ವ್ಯಾಖ್ಯಾನಿಸಲಾಗುತ್ತಿದೆ.**

# ಕಠಿಣ ಪೊಲೀಸ್ ಕೆಲಸಕ್ಕೂ ಮಹಿಳೆಯರು ಸೈ

• **ಉದಯವಾಹಿನಿ, ಬೆಂಗಳೂರು**


ಉದಯವಾಹಿನಿ ಚಿತ್ರ

ಮಹಿಳಾ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಎಂತಹ ಕಠಿಣ ಕೆಲಸ ನೀಡಿದರೂ ಸಹ ಉತ್ತಮವಾಗಿ ಮಾಡುತ್ತಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಬಿ. ದಯಾನಂದ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ವಿಶ್ವ ಮಹಿಳಾ ದಿನಚರಣೆ ಅಂಗವಾಗಿ ಮೈಸೂರು ರಸ್ತೆಯಲ್ಲಿನ ಸಿಎಆರ್ ಕೇಂದ್ರಸ್ಥಾನದಲ್ಲಿ ಏರ್ಪಡಿಸಿದ್ದ ವಿಶೇಷ ಮಹಿಳಾ ತುಕಡಿಗಳನ್ನೊಳಗೊಂಡ ಕವಾಯತಿನಲ್ಲಿ ಗೌರವ ವಂದನೆ ಸ್ವೀಕರಿಸಿ ಅವರು ಮಾತನಾಡಿದರು. ಕೆಲವು ವರ್ಷಗಳ ಹಿಂದೆ ಇಲಾಖೆಯಲ್ಲಿ ಪುರುಷ ಅಧಿಕಾರಿ ಹಾಗೂ ಸಿಬ್ಬಂದಿಗಳು ಮಾಡುವಂತಹ ಕೆಲಸ ಕಾರ್ಯಗಳನ್ನ ಮಹಿಳಾ ಅಧಿಕಾರಿ ಹಾಗೂ ಸಿಬ್ಬಂದಿಗಳು ಮಾಡುವುದಿಲ್ಲ ಎಂಬ ಮನೋಭಾವನೆ ಇತ್ತು. ಈಗ ಅದು ಹೋಗಿದೆ ಎಂದು ಅವರು ಹೇಳಿದರು. ಒಂದು ಸರ್ವೇ ಮಾಡಿದಾಗ ತಮಗೂ ಠಾಣಾ ಬರಹಗಾರರು, ತನಿಖಾ ಸಹಾಯಕರು ಇನ್ನೂ ಮುಂತಾದ ಕೆಲಸಗಳನ್ನು ಕೊಡಬೇಕೆಂದು ಮಹಿಳಾ ಸಿಬ್ಬಂದಿಗಳು ತಿಳಿಸಿದ್ದರು.

ಅದರಂತೆಯೇ ಈಗ ಮಹಿಳಾ ಸಿಬ್ಬಂದಿಗಳಿಗೂ ಸಹ ಎಲ್ಲಾ ಕೆಲಸಗಳನ್ನು ನೀಡಲಾಗುತ್ತಿದೆ. ಇಂದು ಉತ್ತಮ ಕೆಲಸ ಮಾಡಿದಂತಹ 126 ಅಧಿಕಾರಿ ಹಾಗೂ ಗುರುತಿಸಿ ಪ್ರಶಂಸೆ ಪತ್ರವನ್ನು ನೀಡಿರುವುದನ್ನು ನೋಡಿದರೆ ಅವರುಗಳು ಮಾಡಿರುವಂತಹ ಕೆಲಸಗಳು ಮೆಚ್ಚುವಂತಹದ್ದು ಎಂದು ಆಯುಕ್ತರು ಹೇಳಿದರು. ಇದೇ ಸಂದರ್ಭದಲ್ಲಿ ವಿವಿಧ ಕಾರ್ಪೊರೇಟ್ ಸಂಸ್ಥೆಗಳು ಉಚಿತವಾಗಿ ನೀಡಿರುವ 32 ಇ- ಆಟೋಗಳನ್ನು ಮಹಿಳಾ ಫಲಾನುಭವಿಗಳಿಗೆ ಹಸ್ತಾಂತರಿಸಲಾಯಿತು.

# ಚಾಲುಕ್ಯ ಉತ್ಸವದ ನೃತ್ಯೋತ್ಸವ ಕಾರ್ಯಕ್ರಮ

• **ಉದಯವಾಹಿನಿ, ಬೆಂಗಳೂರು**

ಸಂಕಷ್ಟದಲ್ಲಿರುವ ಕಲಾವಿದರಿಗೆ ನೀಡಲಾಗುತ್ತಿರುವ ಮಾಸಾಶನವನ್ನು ರಾಜ್ಯ ಸರ್ಕಾರವು 2,500ಕ್ಕೆ ಹೆಚ್ಚಿಸಿದೆ. ರಾಜ್ಯದಲ್ಲಿ 12 ಸಾವಿರಕ್ಕೂ ಅಧಿಕ ಕಲಾವಿದರು ತಲಾ 2 ಸಾವಿರ ಮಾಸಾಶನ ಪಡೆಯುತ್ತಿದ್ದಾರೆ. ಈ ಮಾಸಾಶನವನ್ನು 5 ಸಾವಿರಕ್ಕೆ ಹೆಚ್ಚಿಸಬೇಕೆಂಬ ಬೇಡಿಕೆ ಕಲಾವಿದರ ವಲಯದಲ್ಲಿತ್ತು. ಕಲಾವಿದರ ಒಕ್ಕೂಟವು ಈ ಬಗ್ಗೆ ಸರ್ಕಾರಕ್ಕೆ ಮನವಿಯನ್ನೂ ಸಲ್ಲಿಸಿತ್ತು. ಕಳೆದ ಸೆಪ್ಟೆಂಬರ್‌ನಲ್ಲಿ ನಡೆದ ಕರ್ನಾಟಕ ನಾಟಕ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಈ ಬಗ್ಗೆ ಪ್ರಸ್ತಾಪಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ. ಮುಂದಿನ ವರ್ಷದಿಂದ ಸಾವಿರಕ್ಕೆ ಹೆಚ್ಚಿಸುವುದಾಗಿ ಭರವಸೆ ನೀಡಿದ್ದರು. ಆದರೆ, 500 ಮಾತ್ರ ಹೆಚ್ಚಿಸಲಾಗಿದೆ. ಬಾದಾಮಿಯಲ್ಲಿ ನಡೆಯುವ 'ಚಾಲುಕ್ಯ ಉತ್ಸವ'ದ ನೃತ್ಯೋತ್ಸವ ಕಾರ್ಯಕ್ರಮ ಆಯೋಜನೆಗೆ 2 ಕೋಟಿ ಅನುದಾನ ಘೋಷಿಸಲಾಗಿದೆ.



ಸಾಹಿತಿ ಬೊಳುವಾರು ಮಹಮದ್ ಕುಂಞ ಅವರ 'ಸ್ವಾತಂತ್ರ್ಯದ ಓಟ' ಕಾದಂಬರಿಯನ್ನು ನಾಟಕಕ್ಕೆ ರೂಪಾಂತರಿಸಿ, ಪ್ರದರ್ಶಿಸಲು 1 ಕೋಟಿ ಅನುದಾನ ನೀಡಲಾಗಿದೆ.

'ಕನ್ನಡ ಭಾರತಿ' ಪುಸ್ತಕ ಮಾಲಿಕೆಯಡಿ ವಿವಿಧ ಕ್ಷೇತ್ರಗಳ ಸಾಧಕರನ್ನು ಪರಿಚಯಿಸುವ ಪುಸ್ತಕ ಪ್ರಕಟಣೆಗೆ 50 ಲಕ್ಷ ಒದಗಿಸಲಾಗಿದೆ. ದಾವಣಗೆರೆಯ ವೃತ್ತಿರಂಗ ಭೂಮಿ ರಂಗಾಯಣದಲ್ಲಿ 3 ಕೋಟಿ ವೆಚ್ಚದಲ್ಲಿ ಮೂಲಭೂತ ಸೌಕರ್ಯ, ವೃತ್ತಿ ರಂಗಾಯಣ ಸಮುಚ್ಚಯ ಹಾಗೂ ಥಿಯೇಟರ್ ಮ್ಯೂಸಿಯಂ ನಿರ್ಮಾಣ ಮಾಡುವುದಾಗಿ ಘೋಷಿಸಲಾಗಿದೆ.

ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ 2,500 ತಾಳೆಗರಿಯ ಹಸ್ತಪ್ರತಿಗಳನ್ನು 1 ಕೋಟಿಯಲ್ಲಿ ಡಿಜಿಟಲೀಕರಣಕ್ಕೆ ಯೋಜನೆ ರೂಪಿಸಲಾಗಿದೆ.

ಮೈಸೂರು ರಂಗಾಯಣದ ಕಾರ್ಯ ಚಟುವಟಿಕೆಗಳಿಗೆ 2 ಕೋಟಿ ಅನುದಾನ, ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರಕ್ಕೆ ತತ್ವಪದ ಪಾರಿಭಾಷಿಕ ಪದಕೋಶದ ಸಿದ್ಧತೆ ಮತ್ತು ಪ್ರಕಟಣೆ ಕಾರ್ಯಕ್ಕೆ 1 ಕೋಟಿ ನೀಡಲಾಗಿದೆ.

ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಬಸವ ಆಧ್ಯಾತ್ಮಿಕ ಹಾಗೂ ವಚನ ಅಧ್ಯಯನ ಕೇಂದ್ರ ಸ್ಥಾಪನೆಗೆ ತಜ್ಞರ ಸಮಿತಿ ರಚಿಸಿ, ವಿಸ್ತ್ರತ ವರದಿ ಪಡೆದ ಬಳಿಕ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದೆ.

# ತೆರಿಗೆ ಸುಧಾರಣೆಗಾಗಿ ಗ್ರಾಮ ಪಂಚಾಯತಿಗಳ ದತ್ತು

• **ಉದಯವಾಹಿನಿ, ಬೆಂಗಳೂರು**

ಪಂಚಾಯತ್‌ಗಳ ತೆರಿಗೆ ಹಾಗೂ ಗುಣಮಟ್ಟ ಸುಧಾರಿಸಲು ಮತ್ತು ಅವುಗಳನ್ನು ಒಟ್ಟಾರೆ ಅಭಿವೃದ್ಧಿಯತ್ತ ಕೊಂಡೊಯ್ಯಲು ಮೊದಲ ಬಾರಿಗೆ ರಾಜ್ಯ ಸರ್ಕಾರವು RDPR ಅಧಿಕಾರಿಗಳು ಪಂಚಾಯತ್ ಅನ್ನು ದತ್ತು ತೆಗೆದುಕೊಳ್ಳುವ ಪರಿಕಲ್ಪನೆಯನ್ನು ಪರಿಚಯಿಸಿದೆ.

ಕರ್ನಾಟಕದಲ್ಲಿ ಸುಮಾರು 6,000 ಗ್ರಾಮ ಪಂಚಾಯತ್‌ಗಳಿದ್ದು, ನಿರಂತರ ಒತ್ತಡದ ನಂತರ, ಈ ವರ್ಷ ರಾಜ್ಯಾದ್ಯಂತ ಗ್ರಾಮ ಪಂಚಾಯತಿಗಳು 1,200 ಕೋಟಿ ರೂ.ಗಳ ತೆರಿಗೆಯನ್ನು ಉತ್ಪಾದಿಸಿವೆ, ಇಲ್ಲದಿದ್ದರೆ ಅದು ಪ್ರತಿ ವರ್ಷ ಇದರ ಅರ್ಧದಷ್ಟು ಇರುತ್ತಿತ್ತು ಎಂದು RDPR ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ಅಧಿಕಾರಿಗಳು ಸದಸ್ಯರ ನಿರಂತರ ಒತ್ತಡ ದಿಂದಾಗಿ ಇದು ಸಾಧ್ಯವಾಯಿತು. ಈಗ ಒಂದು ಪಂಚಾಯತ್ ಅನ್ನು ದತ್ತು ತೆಗೆದುಕೊಂಡು ಅವುಗಳನ್ನು ಸುಧಾರಿಸಲು ಅಧಿಕಾರಿಗಳ ಸಹಾಯ ಪಡೆಯುವುದು ಯೋಜನೆಯ ಉದ್ದೇಶವಾಗಿದೆ ಎಂದಿದ್ದಾರೆ. ಪ್ರತಿ ಪಂಚಾಯತಿಗೂ ಪ್ರತ್ಯೇಕ ಮಾನದಂಡಗಳಿವೆ. ತೆರಿಗೆ ಸಂಗ್ರಹ ಸುಧಾರಿಸುವುದು, ರಸ್ತೆಗಳು, ಆರೋಗ್ಯ, ಶಾಲೆಗಳು, 15 ನೇ ಹಣಕಾಸು ಆಯೋಗದ ಅನುಷ್ಠಾನ, ಶಿಕ್ಷಣ, ಸಾಮಾಜಿಕ ಲೆಕ್ಕಪರಿಶೋಧನೆ ಸೇರಿದಂತೆ ಸುಮಾರು 100 ಅಂಶಗಳಿರುತ್ತವೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೇಡರ್‌ಗಿಂತ ಮೇಲಿನ ಅಧಿಕಾರಿಗಳನ್ನು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯ ಬಳಿಗೆ ಕರೆದು ಪಂಚಾಯತ್ ಅನ್ನು ದತ್ತು ತೆಗೆದುಕೊಂಡು ಅಂಶಗಳನ್ನು ಸುಧಾರಿಸಲು ನಾವು ಪ್ರಯತ್ನಿಸುತ್ತಿದ್ದೇವೆ ಎಂದು ಖರ್ಗೆ ಹೇಳಿದರು.



**ಹಿಂದುಳಿದ ಪಂಚಾಯತ್‌ಗಳನ್ನು ಸರಾಸರಿ, ಸರಾಸರಿಯಿಂದ ಉತ್ತಮ ಮತ್ತು ಉತ್ತಮದಿಂದ ಉತ್ತಮಕ್ಕೆ ಮೇಲ್ದರ್ಜೆಗೇರಿಸುವ ಪ್ರಯತ್ನ ಇದಾಗಿದೆ ಎಂದು ಖರ್ಗೆ ಹೇಳಿದರು. ದತ್ತು ಎಂದರೆ ಶಾಲೆ ಅಥವಾ ಹಳ್ಳಿಯನ್ನು ದತ್ತು ಪಡೆದಂತೆ ಅಲ್ಲ, ಆದರೆ ನಿಯತಾಂಕಗಳನ್ನು ಸುಧಾರಿಸುವುದು ಅಧಿಕಾರಿಯ ಜವಾಬ್ದಾರಿಯಾಗಿದೆ. ಅಧಿಕಾರಿಗಳು ತೆರಿಗೆ ಸಂಗ್ರಹದ ಮೇಲ್ವಿಚಾರಣೆ ಮಾಡಬಹುದು. ಮೂಲಸೌಕರ್ಯ, ಶಾಲೆಗಳು, ಆಸ್ಪತ್ರೆಗಳನ್ನು ನಿರ್ಮಿಸಬಹುದು, ರಸ್ತೆಗಳನ್ನು ಸುಧಾರಿಸಬಹುದು ಅದಕ್ಕೂ ಮೀರಿ ಹೆಚ್ಚಿನ ಜಾವಾಬ್ದಾರಿ ತೆಗೆದು ಕೊಂಡು ಗ್ರಾಮ ಪಂಚಾಯಿತಿಯನ್ನು ಸುಧಾರಿಸಬಹುದು ಎಂದು ತಿಳಿಸಿದ್ದಾರೆ.**

# ಡಿಐಜಿ ವರ್ತಿಕಾ ವಿರುದ್ಧ ರೂಪಾ ಪ್ರತಿ ದೂರು: ಆರೋಪ

• **ಉದಯವಾಹಿನಿ, ಬೆಂಗಳೂರು**

ಡಿಐಜಿ ವರ್ತಿಕಾ ಕಟಿಯಾರ್ ವಿರುದ್ಧ ಐಜಿಪಿ ರೂಪಾ ಅವರು ಆರೋಪ ಸಂಪೂರ್ಣ ಆಧಾರ ರಹಿತವಾಗಿದ್ದು, ಆರೋಪ ದೃಢೀಕರಿಸಲು ಯಾವುದೇ ಸಾಕ್ಷ್ಯಾಧಾರಗಳಿಲ್ಲ ಎಂದು ರಾಷ್ಟ್ರೀಯ ಪೊಲೀಸ್ ಅಕಾಡೆಮಿಯ ಮೂಲಗಳು ತಿಳಿಸಿವೆ.

ಈ ಹಿಂದೆ 'ರೂಪಾ ಅವರು ಕೆಳಹಂತದ ಸಿಬ್ಬಂದಿ ಬಳಸಿಕೊಂಡು ತಮ್ಮ ಕೊಠಡಿಯನ್ನು ಅನಧಿಕೃತವಾಗಿ ಪ್ರವೇಶಿಸಿ, ಕೆಲವು ದಾಖಲೆಗಳನ್ನು ಇರಿಸಿದ್ದಾರೆ' ಎಂದು ಆರೋಪಿಸಿ ವರ್ತಿಕಾ ಅವರು ಶಾಲಿನಿ ರಜನೀಶ್ ಅವರಿಗೆ ದೂರು ನೀಡಿದ್ದರು.

ಇದರ ಬೆನ್ನಲ್ಲೇ ವರ್ತಿಕಾ ಅವರ ವಿರುದ್ಧವೂ ರೂಪಾ ಅವರು ಪ್ರತಿ ದೂರು ನೀಡಿದ್ದರು. ಕೆಲವು ಕಾನ್‌ಸ್ಟೆಬಲ್‌ಗಳು ತಮ್ಮ ಕೊಠಡಿಯಲ್ಲಿ ಕೆಲವು ಫೈಲ್‌ಗಳನ್ನು ಇರಿಸಿ ಫೋಟೋ ತೆಗೆದುಕೊಂಡಿದ್ದಾರೆ ಎಂದು ವರ್ತಿಕಾ ಕಟಿಯಾರ್ ಅವರು ಯಾವುದೇ ಪುರಾವೆಗಳಿಲ್ಲದೆ ಆರೋಪ ಮಾಡಿದ್ದಾರೆ. ವರ್ತಿಕಾ ಅವರ ಕೊಠಡಿ ಮತ್ತು ನನ್ನ ಕೊಠಡಿಯ ಮುಂದೆ, ಕಾರಿಡಾರ್‌ನಲ್ಲಿ ಕನಿಷ್ಠ 5 ಸಿಸಿಟಿವಿ ಕ್ಯಾಮರಾಗಳಿವೆ. ಯಾವುದೇ ಸಿಸಿಟಿವಿ ದೃಶ್ಯಾವಳಿಗಳನ್ನೂ ಅವರು ನೀಡಿಲ್ಲ. ಮತ್ತು ಅಂಥಹ ಯಾವುದೇ ಘಟನೆ ಸಂಭವಿಸಿದೆ ಎಂದು ಅವರು ಭಾವಿಸಿದ್ದರೆ, ಅದನ್ನು ಆಂತರಿಕ ಭದ್ರತಾ ವಿಭಾಗದ (ಐಎಸ್‌ಡಿ) ಹಿರಿಯ ಅಧಿಕಾರಿಗಳ ಗಮನಕ್ಕೆ ಏಕೆ ತರಲಿಲ್ಲ. ನಾನು ಕೆಲವು ಫೈಲ್‌ಗಳನ್ನು ಇಟ್ಟುಕೊಂಡಿರುವುದಾಗಿ ವರ್ತಿಕಾ ಕಟಿಯಾರ್ ಆರೋಪಿಸುತ್ತಿದ್ದಾರೆ. ಹಾಗಿದ್ದರೆ ಅವರು ನಿಷ್ಪಕ್ಷಪಾತವಾಗಿ ಇಲಾಖಾ ಮುಖ್ಯಸ್ಥರಿಗೆ ಬರೆಯಬಹುದಿತ್ತು. ಆದರೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನೇರವಾಗಿ ಪತ್ರ ಬರೆದಿದ್ದಾರೆ.


ಉದಯವಾಹಿನಿ ಚಿತ್ರ

ಹೈದರಾಬಾದ್‌ನ ರಾಷ್ಟ್ರೀಯ ಪೊಲೀಸ್ ಅಕಾಡೆಮಿಯಲ್ಲಿ 2010 ರಲ್ಲಿ ಪ್ರೊಬೇಷನರಿ ಅಧಿಕಾರಿಯಾಗಿದ್ದ ವರ್ತಿಕಾ ಅವರು, ಕರ್ನಾಟಕ ಕೇಡರ್‌ನ ಸಹಾಯಕ ನಿರ್ದೇಶಕ ವಿಪುಲ್ ಕುಮಾರ್ (ಐಪಿಎಸ್) ವಿರುದ್ಧ ಕಿರುಕುಳ ದೂರು ದಾಖಲಿಸಿದ್ದರು ಹೇಳಿದ್ದರು.

ಈ ಆರೋಪ ಕುರಿತು ಪೊಲೀಸ್ ಇಲಾಖೆಯೊಳಗಿನ ವಿಶ್ವಾಸಾರ್ಹ ಮೂಲಗಳು ಮಾಹಿತಿ ನೀಡಿದ್ದು, ಈ ಆರೋಪಗಳು ಸಂಪೂರ್ಣವಾಗಿ ಆಧಾರರಹಿತವಾಗಿದ್ದು, ಇದನ್ನು ದೃಢೀಕರಿಸಲು ಯಾವುದೇ ಸಾಕ್ಷ್ಯಾಧಾರಗಳಿಲ್ಲ ಎಂದು ಹೇಳಿದೆ.

**ನನ್ನ ಖ್ಯಾತಿಗೆ ಕಳಂಕ ತರುವ ಮತ್ತು ನನಗೆ ಮಾನಹಾನಿ ಮಾಡುವ ಏಕೈಕ ಉದ್ದೇಶದಿಂದ ವರ್ತಿಕಾ ಕಟಿಯಾರ್ ಅವರು ಈ ರೀತಿಯ ಆರೋಪ ಮಾಡಿದ್ದಾರೆ. ಪೊಲೀಸ್ ಇಲಾಖೆಯು ಶ್ರೇಣೀಕೃತ ಹಾಗೂ ಶಿಸ್ತುಬದ್ಧವಾಗಿದ್ದು, ಹಿರಿಯ ಅಧಿಕಾರಿಗಳನ್ನು ಬೈ-ಪಾಸ್ ಮಾಡುವ ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನೇರವಾಗಿ ಪತ್ರ ಬರೆಯುವ ಕ್ರಮಗಳು ಅವಿಧೇಯತೆಗೆ ಸಮಾನವಾಗಿರುತ್ತವೆ ಎಂದು ಹೇಳಿದ್ದರು. ಅಲ್ಲದೆ, ವರ್ತಿಕಾ ಕಟಿಯಾರ್ ಅವರ ವಿರುದ್ಧ ಈ ಹಿಂದಿನ ಕೆಲವು ನಿದರ್ಶನಗಳನ್ನು ಉಲ್ಲೇಖಿಸಿದ್ದ ಡಿ. ರೂಪಾ ಅವರು, ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಮನವಿ ಸಲ್ಲಿಸಿದ್ದರು.**

ಡಿಐಜಿ ವರ್ತಿಕಾ ಕಟಿಯಾರ್ ಮತ್ತು ಐಜಿಪಿ ವಿಪುಲ್ ಕುಮಾರ್ 2023-24ರಲ್ಲಿ ಆಂತರಿಕ ಭದ್ರತಾ ವಿಭಾಗದಲ್ಲಿ ವೃತ್ತಿಪರವಾಗಿ ಒಟ್ಟಿಗೆ ಕೆಲಸ ಮಾಡಿದ್ದು, ಈ ಸಮಯದಲ್ಲಿ ಇಬ್ಬರೂ ಸಹೋದ್ಯೋಗಿ ವೃತ್ತಿಪರ ಸಂಬಂಧವನ್ನು ಉಳಿಸಿಕೊಂಡಿದ್ದಾರೆಂದು ತಿಳಿಸಿದೆ.

# ವಕ್ಫ್ ಅಕ್ರಮ: ಹಾಲಿ, ಮಾಜಿ ಸಚಿವರೂ ಭಾಗಿಯಾಗಿದ್ದು ದಾಖಲೆ

• **ಉದಯವಾಹಿನಿ, ಬೆಂಗಳೂರು**

ವಕ್ಫ್ ಆಸ್ತಿ ಅಕ್ರಮದಲ್ಲಿ ಹಾಲಿ, ಮಾಜಿ ಸಚಿವರೂ ಭಾಗಿಯಾಗಿದ್ದು ಇದಕ್ಕೆ ಸಂಬಂಧಿಸಿದ ದಾಖಲೆಗಳೂ ಇವೆ ಎಂದು ಬಿಜೆಪಿ ರಾಜ್ಯಸಭಾ ಸದಸ್ಯ ಲೇಹರ್ ಸಿಂಗ್ ಸಿರೋಯಾ ಗಂಭೀರ ಆರೋಪ ಮಾಡಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ತಂದಿರುವ ದಾಖಲೆಗಳು ಲೋಕಾಯುಕ್ತಕ್ಕೆ ರಾಜ್ಯ ಸರ್ಕಾರ ಕೊಟ್ಟಿದ್ದು. ವಕ್ಫ್ ಆಸ್ತಿಗಳ ತನಿಖೆಗೆ ಸರ್ಕಾರವು ಜಸ್ಟೀಸ್ ಎನ್. ಆನಂದ್ ಸಮಿತಿಯನ್ನು ಸರ್ಕಾರ ರಚಿಸಿತ್ತು. ಅದರಂತೆ ತನಿಖೆ ನಡೆಸಿ ಒಟ್ಟು 40 ಸಾವಿರ ಪುಟಗಳ ದಾಖಲೆಯನ್ನು ಸಮಿತಿ ಸರ್ಕಾರಕ್ಕೆ ಕೊಟ್ಟಿತ್ತು ಎಂದು ಲೇಹರ್ ಸಿಂಗ್ ಹೇಳಿದ್ದಾರೆ. ಪ್ರತಿ ಜಿಲ್ಲೆಗಳಲ್ಲಿ ಯಾವ್ಯಾವ ರೀತಿ ಹಗರಣ ಆಗಿದೆ ಎಂಬುದು ಈ ದಾಖಲೆಗಳಲ್ಲಿ ಇದೆ. ಬಹಳ ದೊಡ್ಡ ದೊಡ್ಡ ರಾಜಕಾರಣಿಗಳ ಹೆಸರು ಕೂಡ ಈ ದಾಖಲೆಗಳಲ್ಲಿದೆ. ಹಾಲಿ ಸಚಿವರು, ಮಾಜಿ ಸಚಿವರ ಹೆಸರುಗಳು ಕೂಡಾ ಈ ದಾಖಲೆಗಳಲ್ಲಿದೆ. ನಾನು ಯಾವುದೇ ರಾಜಕಾರಣಿಗಳ ಹೆಸರು ಬಹಿರಂಗಪಡಿಸುವುದಿಲ್ಲ ಎಂದು ಲೆಹರ್ ಸಿಂಗ್ ಹೇಳಿದ್ದಾರೆ.

# ಸಿಎಂ ಘೋಷಣೆ ಚರ್ಚೆಗೆ ಗ್ರಾಸ; ಬೇರೆ ಹೆಣ್ಣುಮಕ್ಕಳಿಗೆ ರಕ್ಷಣೆ ಬೇಡವೇ?


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬೆಂಗಳೂರು**

ಅಲ್ಪಸಂಖ್ಯಾತರ ನಿರ್ದೇಶನಾಲಯ ನಡೆಸುವ 169 ವಸತಿ ಶಾಲೆಗಳು ಮತ್ತು ಕಾಲೇಜುಗಳಲ್ಲಿ ಓದುತ್ತಿರುವ 25,000 ಬಾಲಕಿಯರಿಗೆ ಆತ್ಮರಕ್ಷಣಾ ಕೌಶಲ್ಯ ತರಬೇತಿ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್‌ನಲ್ಲಿ ಘೋಷಿಸಿದರು. ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಹಲವಾರು ಕ್ರಮಗಳನ್ನು ಘೋಷಿಸಿದ ಮುಖ್ಯಮಂತ್ರಿ, ಅಲ್ಪಸಂಖ್ಯಾತ ಸಮುದಾಯಗಳ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ಬಗ್ಗೆ ಒತ್ತಿ ಹೇಳಿದರು. ಕರ್ನಾಟಕ ಸಾರ್ವಜನಿಕ ಶಾಲೆಗಳ (ಕೆಪಿಎಸ್) ಮಾದರಿಯಲ್ಲಿ 500 ಕೋಟಿ ರೂ. ವೆಚ್ಚದಲ್ಲಿ 250 ಮೌಲಾನ ಆಜಾದ್ ಮಾದರಿ ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಹಂತ ಹಂತವಾಗಿ ತರಗತಿಗಳನ್ನು ಪ್ರಾರಂಭಿಸಲಾಗುವುದು ಎಂದು ಅವರು ಹೇಳಿದರು.

ಶಿಕ್ಷಣ ಇಲಾಖೆಯು ನಡೆಸುತ್ತಿರುವ ಅತಿ ಹೆಚ್ಚು ದಾಖಲಾತಿ ಹೊಂದಿರುವ 100 ಉರ್ದು ಮಾಧ್ಯಮ ಶಾಲೆಗಳನ್ನು ಪ್ರಸ್ತುತ ವರ್ಷದಲ್ಲಿ 400 ಕೋಟಿ ರೂ.ಗಳ ಒಟ್ಟು ಮೇಲ್ದರ್ಜೆಗೇರಿಸಲಾಗುವುದು. 100 ಕೋಟಿ ವೆಚ್ಚದಲ್ಲಿ ಮೌಲಾನಾ ಆಜಾದ್ ಸಾರ್ವಜನಿಕ ಶಾಲೆಗಳನ್ನು ಮೇಲ್ದರ್ಜೆಗೇರಿಸಲಾಗುವುದು ಎಂದು ಅವರು ಹೇಳಿದರು. ಕೆಇಎ ಮೂಲಕ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ 5 ಲಕ್ಷ ರೂ.ಗಳ ಮಿತಿಯವರೆಗೆ ಶುಲ್ಕದ 50 ಪ್ರತಿಶತವನ್ನು ಮರುಪಾವತಿಸಲಾಗುತ್ತದೆ ಎಂದರು. ಇದಲ್ಲದೆ, ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ನೀಡಲಾಗುವ ರಾಷ್ಟ್ರೀಯ ವಿದೇಶಿ ವಿದ್ಯಾರ್ಥಿವೇತನದ ಮೊತ್ತವನ್ನು 20 ಲಕ್ಷ ರೂ.ಗಳಿಂದ 30 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ. ಮುಖ್ಯಮಂತ್ರಿಗಳ ಅಲ್ಪಸಂಖ್ಯಾತ ವಸಾಹತು ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ 1,000 ಕೋಟಿ ರೂ.ಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲಾಗಿದೆ ಮತ್ತು 2025-26ರ ಹಣಕಾಸು ವರ್ಷದಲ್ಲಿ ಕಾರ್ಯಗಳನ್ನು ಜಾರಿಗೆ ತರಲಾಗುವುದು ಎಂದು ಅವರು ಹೇಳಿದರು.

# ಬಿಜೆಪಿ ಮಹಿಳಾ ಘಟಕ ವತಿಯಿಂದ ಮಹಿಳಾ ದಿನಾಚರಣೆ

## ಆಶಾ ಕಾರ್ಯಕರ್ತೆಯರಿಗೆ , ಸಾಧಕ ಮಹಿಳೆಯರಿಗೆ ಮಹಿಳಾ ರತ್ನ ಪ್ರಶಸ್ತಿ ಪ್ರಧಾನ ಮಹಿಳೆಯರಿಗೆ ಬಾಗಿನ ವಿತರಣೆ

• **ಉದಯವಾಹಿನಿ, ಗೋವಿಂದರಾಜನಗರ**

ವಿಧಾನಸಭಾ ಕ್ಷೇತ್ರ,ಮಾರುತಿಮಂದಿರ ವಾರ್ಡ್ ವೈಟ್ ಪೆಟಲ್ಸ್ ಸಭಾಂಗಣದಲ್ಲಿ ಗೋವಿಂದರಾಜನಗರ ಮಂಡಲ ಬಿಜೆಪಿ ಮಹಿಳಾ ಘಟಕ ವತಿಯಿಂದ, ಸಂಸ್ಕಾರ ಫೌಂಡೇಷನ್ ಸಹಯೋಗದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಪೌರ ಕಾರ್ಮಿಕ, ಆಶಾ ಕಾರ್ಯಕರ್ತರಿಗೆ ಹಾಗೂ ಸಾಧಕ ಮಹಿಳೆಯರಿಗೆ ಮಹಿಳಾ ರತ್ನ ಪ್ರಶಸ್ತಿ ಪ್ರಧಾನ ಮಹಿಳೆಯರಿಗೆ ಬಾಗಿನ ವಿತರಣೆ ಕಾರ್ಯಕ್ರಮ.

ದಕ್ಷಿಣ ಜಿಲ್ಲಾ ಬಿಜೆಪಿ ಉಪಾಧ್ಯಕ್ಷರು, ನಿಕಟಪೂರ್ವ ಬಿಬಿಎಂಪಿ ಸದಸ್ಯರಾದ ಕೆ.ಉಮೇಶ್ ಶೆಟ್ಟಿರವರು, ಮಂಡಲದ ಅಧ್ಯಕ್ಷರಾದ ಎನ್.ಬಿ.ಮಂಜುನಾಥ್ ರವರು, ಮಾಜಿ ಪಾಲಿಕೆ ಸದಸ್ಯ ರಾಮಪ್ಪ, ಬಿಜೆಪಿ ಮುಖಂಡರುಗಳಾದ ನಂಜಪ್ಪ, ದೊಡ್ಡಯ್ಯ ರಮ್ಯ ಸುರೇಶ್, ಶಾಮಣ್ಣ, ವೆಂಕಟೇಶ್, ಶ್ರೀಮತಿ ದೀಪಿಕಾ ಉಮೇಶ್ ಶೆಟ್ಟಿ, ಪ್ರೀತಿ ಹೊನ್ನುಡಿಕೆ, ಪಣಿವೇಣಿ ಸೀತರಾಮ್, ಚಲನಚಿತ್ರ ರಂಗದ ಖ್ಯಾತ ನಟಿಯರುಗಳಾದ ನಿಶಿತಾ ಗೌಡ, ಅಕ್ಷತಾಗೌಡ ರವರು ದೀಪ ಬೆಳಗಿಸಿ ಉದ್ಘಾಟನೆ ಮಾಡಿದರು. ಭಾರತಾಮಾತೆ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾನಯಿತು. ಕೆ.ಉಮೇಶ್ ಶೆಟ್ಟಿರವರು ಮಾತನಾಡಿ ಭಾರತದ ಭವಿಷ್ಯದ ರೂವಾರಿಗಳು ಎಂದರೆ ಮಹಿಳೆಯರು. ತಾಯಿ, ಅಕ್ಕ, ತಂಗಿ ಪತ್ನಿ, ಮಗಳು ಎಲ್ಲಾ ಸ್ಥಾನಗಳನ್ನು ತುಂಬಿ ನಮ್ಮ ಅಭಿವೃದ್ದಿಗೆ ಶ್ರಮಿಸುವ ಮಹಿಳೆಯರು ನಿಸ್ವಾರ್ಥವಾಗಿ ಸೇವೆ ಸಲ್ಲಿಸಿ, ಕುಟುಂಬದ ಜೊತೆಗೆ ಸಮಾಜದ ಅಭಿವೃದ್ದಿಗೆ ಶ್ರಮಿಸುವಳು. ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಮಹಿಳಾ ಘಟಕ ಸಶಕ್ತ ಸಂಘಟನೆ ಇದೆ. ನಮ್ಮ ಕ್ಷೇತ್ರದ ಮಹಿಳಾ ಕಾರ್ಯಕರ್ತರಿಗೆ ಗೌರವಿಸುವ ದಿನವಾಗಿದೆ.


ಉದಯವಾಹಿನಿ ಚಿತ್ರ

ಕಾಲ ಬದಲಾಗಿದೆ ಪುರುಷರಷ್ಟೆ ಮಹಿಳೆಯರಿಗೆ ಸರಿಸಮಾನ ಹಕ್ಕು ಇದೆ. ಕಿತ್ತೂರು ರಾಣಿ ಚನ್ನಮ್ಮ ರವರಿಂದ ಇಂದಿನ ದೇಶದ ಪ್ರಥಮ ಪ್ರಜೆ ದ್ರೌಪದಿ ಮುರ್ಮು, ದೆಹಲಿ ಮುಖ್ಯಮಂತ್ರಿ ಸಹ ಮಹಿಳೆಯಾಗಿ ಸಾಧನೆ ಮಾಡಿ ತೋರಿಸಿದ್ದಾರೆ.

ಕಲೆ, ಸಾಹಿತ್ಯ ಚಲನಚಿತ್ರ, ರಂಗಭೂಮಿ, ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ ರಾಜಕೀಯ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರು ಪ್ರತಿನಿಧಿಸುತ್ತಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ಶೇಕಡ 50ರಷ್ಟು ಮೀಸಲಾತಿ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ನೀಡಲಾಗಿದೆ.

ರಾಜ್ಯದ ಅಂದಿನ ಮುಖ್ಯಮಂತ್ರಿಗಳಾದ ಬಿ.ಎಸ್ ಯಡಿಯೂರಪ್ಪರವರು ಮಹಿಳೆಯರಿಗೆ ಭಾಗ್ಯಲಕ್ಷ್ಮಿ ಯೋಜನೆ ಜಾರಿಗೆ ತಂದರು ಇದರಿಂದ ಹೆಣ್ಣು ಮಕ್ಕಳ ಭ್ರೂಣಹತ್ಯೆ ಮಾಡುವುದು ನಿಂತಿತು. ಹೆಣ್ಣು ಮಕ್ಕಳು ಭೂತಾಯಿ, ಗೃಹಲಕ್ಷ್ಮಿ, ಸಂತಾನಲಕ್ಷ್ಮಿ, ಭಾಗ್ಯಲಕ್ಷ್ಮಿಯಾಗಿ ಇಡಿ ಕುಟುಂಬಕ್ಕೆ ಆಸರೆಯಾಗುವಳು.

**ಮಹಿಳೆ ಮಾತೃರೂಪ, ಮಹಿಳೆ ಎಂದರೆ ಹೆಮ್ಮೆಪಡಬೇಕು. ಮಹಿಳೆಯ ,ಶಕ್ತಿ, ಯುಕ್ತಿ, ಭಕ್ತಿಯ ಸಂಕೇತವಾಗಿದೆ. ಪ್ರತಿಯೊಬ್ಬ ಮನುಷ್ಯನ ಯಶ್ವಸಿಯ ಹಿಂದೆ ಮಹಿಳೆ ಇರುತ್ತಾಳೆ. ತಾಯಿಗಿಂತ ದೇವರಿಲ್ಲ ,ಎಲ್ಲಕ್ಕೂ ಬದಲಿ ವ್ಯಕ್ತಿ, ವಸ್ತು ಸಿಗಬಹುದು ಅದರೆ ತಾಯಿ ಸಿಗುವುದಿಲ್ಲ. ದೇಶಭಕ್ತಿ ಮತ್ತು ಸಮಾಜದಲ್ಲಿ ಉತ್ತಮ ಪ್ರಜೆಯಾಗಲು ತಾಯಿ ಮೊದಲ ಪಾಠಶಾಲೆಯಾಗಿ ಹೇಳಿ ಕೊಡುವಳು ಎಂದು ಹೇಳಿದರು.**

**-ರಮ್ಯ ಸುರೇಶ್**

ಒಂದು ದೇಶದ ಪ್ರಗತಿಯನ್ನು ಕಾಣಬೇಕಾದರೆ ಮಹಿಳೆಯರನ್ನ ಗೌರವಯುತವಾಗಿ ನೋಡಬೇಕು ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದರು ಈ ನಿಟ್ಟಿನಲ್ಲಿ ವಿಶ್ವದ ಬಲಿಷ್ಠ ಪ್ರಧಾನಿ ನರೇಂದ್ರಮೋದಿ ರವರ ಆಡಳಿತದಲ್ಲಿ ಮಹಿಳೆಯರಿಗೆ ವಿಶೇಷ ಯೋಜನೆಗಳನ್ನು ಜಾರಿಗೆ ತಂದರು. ಮಗಳು ಉಳಿಸಿ, ಮಗಳಿಗೆ ವಿದ್ಯಾಭ್ಯಾಸ ಕೊಡಿ ವಿಶೇಷ ಅಭಿಯಾನದಿಂದ ಲಕ್ಷಾಂತರ ಹೆಣ್ಣು ಮಕ್ಕಳಿಗೆ ಸ್ವಾಭಿಮಾನಿಯಾಗಿ ಬದುಕಲು ಸಹಕಾರಿಯಾಯಿತು.

ನಟಿ ನಿಶಿತಾ ಗೌಡ ರವರು ಮಾತನಾಡಿ ಮಹಿಳೆಯಂದರೆ ಶಕ್ತಿ ಸ್ವರೂಪಿಣಿ, ನಮ್ಮ ಶಕ್ತಿ ಏನು ಎಂಬುದು ಸಮಾಜಕ್ಕೆ ತೋರಿಸಬೇಕು. ಹೆಣ್ಣು ಮಕ್ಕಳಿಗೆ ಮನಸ್ಸಿನ ಒಳಗಡೆ ಅದ್ಭುತ ಶಕ್ತಿ ಹೊಂದಿರುತ್ತಾಳೆ. ಜನ್ಮ ಕೊಡುವ ಶಕ್ತಿ ಇರುವುದು ಮಹಿಳೆಗೆ ಮಾತ್ರ ಇರುವುದು.ಒಂದು ಜೀವದಿಂದ ಇನ್ನೊಂದು ಜೀವ ಕೊಡುವವಳು ಮಹಿಳೆ. ಸರ್ವಶ್ರೇಷ್ಠ ಮಕ್ಕಳಾಗಿ ರೂಪಿಸುವಲ್ಲಿ ತಾಯಿಯ ಪಾತ್ರ ದೊಡ್ಡದು. ಮಕ್ಕಳಿಗೆ ಭಗವದ್ಗೀತೆ, ರಾಮಾಯಣ ಕುರಿತು ಅರಿವು ಮೂಡಿಸಬೇಕು ಎಂದು ಹೇಳಿದರು. ಅಥಿತಿ ನಾರಾಯಣ್ ರವರಿಂದ ಭಕ್ತಿಗೀತೆಗಳು ದೀಕ್ಷಾ ರವರಿಂದ ಭರತನಾಟ್ಯ ಮತ್ತು ಪೌರ ಕಾರ್ಮಿಕರ ಮಹಿಳೆಯರು, ಆಶಾ ಕಾರ್ಯಕರ್ತೆಯರಿಗೆ, ಸಾಧಕ ಮಹಿಳೆಯರಿಗೆ ಮಹಿಳಾ ರತ್ನ ಪ್ರಶಸ್ತಿ ಸನ್ಮಾನ ಕಾರ್ಯಕ್ರಮ ನೇರವೇರಿತು.

ಅಂತರಾಳದಿಂದ.. EDITORIAL

# ಬಂಡವಾಳ ವೆಚ್ಚಕ್ಕೆ ಗಣನೀಯ ಮೊತ್ತ ಮೂಲಸೌಕರ್ಯಕ್ಕೆ ಸಿಕ್ಕಿದೆ ಆದ್ಯತೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 4.09 ಲಕ್ಷ ಕೋಟಿ ಗಾತ್ರದ 2025-26ನೇ ಸಾಲಿನ ರಾಜ್ಯ ಬಜೆಟ್ ಅನ್ನು ಶುಕ್ರವಾರ ಮಂಡಿಸಿದ್ದಾರೆ. ಹದಿನಾರನೇ ಬಾರಿಗೆ ಬಜೆಟ್ ಮಂಡಿಸಿರುವ ಅವರು, ಈ ಸಲದ ಆಯ-ವ್ಯಯ ಸಿದ್ಧಪಡಿಸುವಾಗ ತಮ್ಮ ಅನುಭವವನ್ನೆಲ್ಲ ಧಾರೆ ಎರೆದಿರುವುದು ಎದ್ದು ಕಾಣುತ್ತಿದೆ. ಗ್ಯಾರಂಟಿಗಳ ಭಾರದಿಂದ ಅಭಿವೃದ್ಧಿಯ ವೇಗ ಕುಗ್ಗಿದೆ ಎಂಬ ಹಣೆಪಟ್ಟಿಯನ್ನು ಕಳಚಿಹಾಕಲು ಸನ್ನದ್ಧರಾದಂತೆ ಅವರು ಮೈಕೊಡವಿ ಎದ್ದು ನಿಂತಿದ್ದಾರೆ. ರಾಜ್ಯದ ರಸ್ತೆ ಮತ್ತು ಮೂಲಸೌಕರ್ಯದ ಅಭಿವೃದ್ಧಿಗಾಗಿ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ರೂಪಿಸಿರುವ ಅವರು, 8,000 ಕೋಟಿಯನ್ನು ಈ ಉದ್ದೇಶಕ್ಕಾಗಿ ಎತ್ತಿಟ್ಟಿದ್ದಾರೆ. 'ಅಹಿಂದ' ವರ್ಗದ ಮೇಲಿನ ತಮ್ಮ ಪ್ರೇಮವನ್ನು ಮತ್ತೆ ಪ್ರಕಟಿಸಿದ್ದರೂ ಹತ್ತು-ಹಲವು ಯೋಜನೆಗಳ ಮೂಲಕ ಇತರ ಎಲ್ಲಾ ಸಮುದಾಯ ಗಳನ್ನೂ ಒಂದಿಲ್ಲೊಂದು ರೀತಿ ತಲುಪುವ ಪ್ರಯತ್ನ ಮಾಡಿದ್ದಾರೆ. ತಳಸಮುದಾಯಗಳನ್ನು ಕೇಂದ್ರವಾಗಿಟ್ಟುಕೊಂಡು ಒಟ್ಟು ಸಮಾಜದ ಏಳಿಗೆಗಾಗಿ ಅವರು ನಡೆಸಿರುವ ಕಸರತ್ತು ಕುತೂಹಲಕಾರಿ. ಕಲ್ಯಾಣ ಕಾರ್ಯಕ್ರಮಗಳಿಗೆ ಯಥಾಪ್ರಕಾರ ಸಿಂಹಪಾಲನ್ನು ಮೀಸಲಿಟ್ಟರೂ ಅಭಿವೃದ್ಧಿಯ ಚಹರೆ ಬಜೆಟ್‌ನಲ್ಲಿ ಎದ್ದು ಕಾಣುವಂತೆ ನೋಡಿಕೊಳ್ಳುವಲ್ಲಿ ಅವರು ಅಪಾರ ಶ್ರಮ ಹಾಕಿದ್ದಾರೆ. 'ನಾಡು ಕಟ್ಟುವ ಪ್ರಕ್ರಿಯೆಯಲ್ಲಿ ಸುಸ್ಥಿರ ಅಭಿವೃದ್ಧಿಯ ಇಟ್ಟಿಗೆಗಳನ್ನು ಸುವ್ಯವಸ್ಥಿತವಾಗಿ ಜೋಡಿಸಬೇಕಿದೆ' ಎಂಬ ಆಶಯವನ್ನು ವ್ಯಕ್ತಪಡಿಸಿರುವ ಮುಖ್ಯಮಂತ್ರಿ, ಆ ದಿಸೆಯಲ್ಲಿ ಅಭಿವೃದ್ಧಿಯ ಆರು ಆಯಾಮಗಳನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ. ಕಲ್ಯಾಣ ಕಾರ್ಯಕ್ರಮಗಳು, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ, ಮೂಲಸೌಕರ್ಯ ಅಭಿವೃದ್ಧಿ, ನಗರಾಭಿವೃದ್ಧಿ, ಹೂಡಿಕೆ ಮತ್ತು ಉದ್ಯೋಗ ಸೃಷ್ಟಿ ಹಾಗೂ ಆಡಳಿತ ಸುಧಾರಣೆ- ಇವೇ ಆ ಆರು ಆಯಾಮಗಳು. 'ಗ್ಯಾರಂಟಿ' ಯೋಜನೆಗಳನ್ನು ಉಳಿಸಿಕೊಳ್ಳುವುದರ ಜತೆಯಲ್ಲೇ ಮೂಲಸೌಕರ್ಯ ಯೋಜನೆಗಳಿಗೆ ದೊಡ್ಡ ಮೊತ್ತವನ್ನು ವಿನಿಯೋಗಿಸುವುದಾಗಿ ಘೋಷಿಸುವ ಮೂಲಕ ಅವರು ಸಮತೋಲನದ ಹಾದಿಯೊಂದನ್ನು ಕಂಡುಕೊಂಡಿದ್ದಾರೆ. ಹಾಗೆಯೇ, ಶಿಕ್ಷಣ, ತರಬೇತಿ, ಉದ್ಯೋಗದ ಮೂಲಕ ಸಮಾಜದ ಅಭಿವೃದ್ಧಿ ಎಂಬ ವಿಶಿಷ್ಟ ಕಾರ್ಯತಂತ್ರವನ್ನು ಅಳವಡಿಸಿಕೊಂಡಿದ್ದಾರೆ. ಮೈಕ್ರೋ ಫೈನಾನ್ಸ್‌ನ ಸಮಸ್ಯೆಗಳಿಗೂ ಪರಿಹಾರ ಹುಡುಕುವ ಇರಾದೆ ಬಜೆಟ್‌ನಲ್ಲಿದೆ. ಅಕ್ಕ ಕೋ-ಆಪರೇಟಿವ್ ಸೊಸೈಟಿ ಸ್ಥಾಪಿಸುವ ಮೂಲಕ ಗೃಹಲಕ್ಷ್ಮಿ ಯೋಜನೆಯ ಯಜಮಾನಿಯರನ್ನು ಸದಸ್ಯರನ್ನಾಗಿಸುವ ಉದ್ದೇಶ ಅರ್ಥಪೂರ್ಣ. ಬಹುತೇಕ ಮಾಸಾಶನ-ಗೌರವಧನಗಳ ಮೊತ್ತದಲ್ಲಿ ಏರಿಕೆ ಮಾಡಲಾಗಿದೆ. ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ ಬಳಸುವ, ಡಿಜಿಟಲೀಕರಣದ ಮೂಲಕ ಕೃಷಿ ಆದಾಯ ಹೆಚ್ಚಿಸುವ ಮಾತುಗಳು ಕೃಷಿಕರಿಗೆ ಆನಂದ ಉಂಟುಮಾಡುವಂತಿವೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶೇಕಡ 4ರ ಪ್ರಗತಿ ಸಾಧಿಸಿರುವ ಕೃಷಿ ಕ್ಷೇತ್ರಕ್ಕೆ ತಕ್ಕ ಉತ್ತೇಜನ ನೀಡಲು ಹೊರಟಿರುವ ಕ್ರಮ ಸರಿಯಾಗಿದೆ. ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು ಎಂಬುದನ್ನು ಅನುಬಂಧದಲ್ಲಿ ನೀಡುವ ಮೂಲಕ ಕಾಲಮಿತಿಯಲ್ಲಿ ಅವುಗಳನ್ನು ಪೂರ್ಣಗೊಳಿಸುವ ಇರಾದೆಯನ್ನೂ ಪ್ರದರ್ಶಿಸಲಾಗಿದೆ. ಕಾಲದ ತುರ್ತನ್ನು ಮನಗಂಡಂತೆ ತಂತ್ರಜ್ಞಾನದ ಜಪ ಬಜೆಟ್‌ನ ಉದ್ದಕ್ಕೂ ಹರಿದಿದೆ. ಬೆಂಗಳೂರಿನ ಅಭಿವೃದ್ಧಿಗೂ ಮುಖ್ಯಮಂತ್ರಿ ಗಮನ ಹರಿಸಿದ್ದು, 7,000 ಕೋಟಿಯಷ್ಟು ದೊಡ್ಡ ಮೊತ್ತವನ್ನು ಎತ್ತಿಟ್ಟಿದ್ದಾರೆ. ತವರು ಜಿಲ್ಲೆ ಮೈಸೂರಿಗೂ ಹಲವು ಯೋಜನೆಗಳನ್ನು ಕೊಡುಗೆಯಾಗಿ ಕೊಟ್ಟಿದ್ದಾರೆ. ಬಂಡವಾಳ ವೆಚ್ಚವನ್ನು ಕಳೆದ ವರ್ಷಕ್ಕೆ ಹೋಲಿಸಿದರೆ ಶೇಕಡ 47.3ರಷ್ಟು ಹೆಚ್ಚಿಸಿರುವುದು ಬಜೆಟ್‌ನ ಹೆಗ್ಗುರುತುಗಳಲ್ಲಿ ಒಂದು. ಒಟ್ಟಾರೆ 71,336 ಕೋಟಿ ಹಣವನ್ನು ಈ ಉದ್ದೇಶಕ್ಕೆ ಎತ್ತಿಡಲಾಗಿದೆ. ಬಜೆಟ್‌ನ ಗಾತ್ರವನ್ನು ಹಿಗ್ಗಿಸಿದ್ದರಿಂದ ಎಲ್ಲಾ ಆರ್ಥಿಕ 'ಹೊರೆ'ಗಳ ನಡುವೆಯೂ ಅಭಿವೃದ್ಧಿ ಕಾರ್ಯಗಳಿಗೆ ಗಣನೀಯ ಮೊತ್ತ ಸಿಗಲಿದೆ. ಆದರೆ, ಆರ್ಥಿಕತೆಗೆ ಚೈತನ್ಯ ತುಂಬುವಂತಹ ಸಾಮರ್ಥ್ಯವಿರುವ ಸೇವಾ ವಲಯಕ್ಕೆ ಇನ್ನಷ್ಟು ಬಲ ತುಂಬುವ ಕೆಲಸ ಆಗಬೇಕಿತ್ತು. 2004-05ರಲ್ಲಿ ಮಿಗತೆ ಬಜೆಟ್ ಮಂಡಿಸಿ, ದೇಶದ ಗಮನ ಸೆಳೆದಿದ್ದ ಸಿದ್ದರಾಮಯ್ಯನವರು ಕಳೆದ ಬಾರಿಯಂತೆ ಈ ಸಲವೂ ಕೊರತೆಯ ಬಜೆಟ್ ಕೊಟ್ಟಿದ್ದಾರೆ. 2025-26ರ ಆರ್ಥಿಕ ವರ್ಷದ ಅಂತ್ಯದಲ್ಲಿ ರಾಜ್ಯದ ಮೇಲಿನ ಒಟ್ಟು ಸಾಲದ ಹೊರೆ 7.64 ಲಕ್ಷ ಕೋಟಿಗೆ ಹೆಚ್ಚಲಿದೆ ಎಂದು ಅಂದಾಜಿಸಲಾಗಿದೆ.



ವಿತ್ತೀಯ ಕೊರತೆಯು ಮಿತಿಯೊಳಗೆ ಇದೆ ಎಂದು ಮುಖ್ಯಮಂತ್ರಿ ಸಮಾಧಾನ ವ್ಯಕ್ತಪಡಿಸಿದರೂ ಆ ಮಿತಿ ಅಂಚಿಗೆ ತಲುಪಿದೆ ಎಂಬುದನ್ನು ಮರೆಯುವಂತಿಲ್ಲ. ವರ್ಷದಿಂದ ವರ್ಷಕ್ಕೆ ಸಾಲದ ಹೊರೆ ಹೆಚ್ಚುತ್ತಿರುವುದು ಕಳವಳಕಾರಿ. ಸಾಲದ ಹೊರೆ ಇಳಿಸಿಕೊಳ್ಳುವ ಮಾರ್ಗೋಪಾಯಗಳು ಬಜೆಟ್‌ನಲ್ಲಿ ಇಲ್ಲ.



## ರಾಮಾಯಣ


### ಶ್ರೀರಾಮನ ವನವಾಸಕ್ಕಾಗಿ ಕೌಸಲ್ಯಾ ದೇವಿಯ ಪ್ರಲಾಪ

• ಹಿಂದಿನ ಸಂಚಿಕೆಯಿಂದ 78ನೆಯ ಅಧ್ಯಾಯ

ಆತನು ಮಧುರೋಕ್ತಿಗಳಿಂದ ಸಮಸ್ತ ಜನರನ್ನೂ ಸಂತೋಷಪಡಿಸುತ್ತ ತಾಯಿಯಾದ ಕೌಸಲ್ಯಾದೇವಿಯ ಸಮೀಪವನ್ನೈದಿದನು. ಆತನಿಗೆ ವಿನಯಾದಿ ಸದ್ಗುಣಗಳಲ್ಲಿ ಸಮಾನನಾದ ಲಕ್ಷ್ಮಣನೂ ದುಃಖಾಕ್ರಾಂತನಾಗಿ ಆತನ ಸಂಗಡ ಕೌಸಲ್ಯಾದೇವಿಯ ಸಮೀಪಕ್ಕೆ ಹೋದನು. ಶ್ರೀರಾಮನು ತನಗೆ ಬಂದ ವಿಪತ್ತನ್ನು ತಿಳಿದವನಾದರೂ ಮನಸ್ಸಿನಲ್ಲಿ ಸಂತೋಷವನ್ನೇ ತಳೆದಿದ್ದನು : ತನ್ನ ಮಿತ್ರರಿಗೆ ಮನೋವ್ಯಥೆಯಾಗುವುದೆಂಬ ಶಂಕೆಯಿಂದ ಮನೋವಿಕಾರವನ್ನು ತಂದುಕೊಳ್ಳಲಿಲ್ಲ.

**ಶ್ರೀರಾಮನ ವನವಾಸಕ್ಕಾಗಿ ಕೌಸಲ್ಯಾದೇವಿಯ ಪ್ರಲಾಪ:** ಈ ಪ್ರಕಾರವಾಗಿ ಶ್ರೀರಾಮನು ದಶರಥರಾಯನಿಗೆ ಕೈ ಮುಗಿದು ಅರಮನೆಯಿಂದ ಹೊರಡುವ ಸಮಯದಲ್ಲಿ ಅರಮನೆಯೊಳಗೆ ಮಹಾಶೋಕಪೂರ್ಣವಾದ ಕೋಲಾಹಲಧ್ವನಿಯುಂಟಾಯಿತು. ಆ ಅಂತಃಪುರದ ಸ್ತ್ರೀಯರು ಪರಸ್ಪರವಾಗಿ ಅಕಟಕಟಾ ಶ್ರೀರಾಮನು ಸಮಸ್ತ ಪ್ರಾಣಿಗಳಿಗೂ ಇಹದಲ್ಲಿ ಸುಖವನ್ನೂ ಪರದಲ್ಲಿ ಮೋಕ್ಷವನ್ನೂ ತೋರಿಸುವವನು ಎಲ್ಲಾರಿಗಿಂತಲೂ ಯೋಗ್ಯನು. ಅಂಥವನನ್ನು ದಶರಥರಾಯನು ಸಮಸ್ತಲೋಕಗಳನ್ನೂ ರಕ್ಷಿಸಲು ಆಜ್ಞಾಪಿಸದೆಹೋದನು ಶ್ರೀರಾಮನು ತನ್ನ ತಾಯಿಯಾದ ಕೌಸಲ್ಯಾದೇವಿಯಲ್ಲಿ ಎಷ್ಟು ವಿಶ್ವಾಸವಿಟ್ಟಿರುವನೋ ಅಷ್ಟೇ ವಿಶ್ವಾಸವನ್ನು ನಮ್ಮಲ್ಲಿಯೂ ಇಟ್ಟುಕೊಂಡಿದ್ದಾನೆ, ನಮ್ಮಲ್ಲೊಬ್ಬರನ್ನಾದರೂ ವ್ಯತ್ಯಾಸವಾಗಿ ಕಾಣುವವನಲ್ಲ; ಯಾರನ್ನೂ ನಿಷ್ಠುರವಾಗಿ ನುಡಿದು ಅವರಮೇಲೆ ಕೋಪಿಸುವವನಲ್ಲ. ಒಂದು ಸಾರಿಯಾದರೂ ಪರರ ಮನಸ್ಸಿಗೆ ನೋವಾಗುವ ವಾಕ್ಯಗಳನ್ನು ನುಡಿದವನಲ್ಲ. ಯಾರಾದರೂ ಕೋಪಿಸಿಕೊಂಡರೆ ಅವರನ್ನು ಸಮಾಧಾನಗೊಳಿಸಿ ಹಿತೋಪದೇಶವನ್ನು ಮಾಡುತ್ತಾನೆ. ಸಮಸ್ತ ಜನರಿಗೂ ಪ್ರಾಣಸ್ವರೂಪನಾಗಿ ಸಮಸ್ತರಿಗೂ ರಕ್ಷಕನಾದ ಶ್ರೀರಾಮನು ರಾಜ್ಯವನ್ನು ಪರಿಪಾಲಿಸದೆ ವನಕ್ಕೆ ಹೋಗುತ್ತಾನಲ್ಲ'' ಎಂದು ಕರುವನ್ನು ಕಾಣದ ಹಸುವಿನಂತೆ ಹಂಬಲಿಸುತ್ತ ರೋದನವನ್ನು ಮಾಡುತ್ತಿದ್ದರು. ದಶರಥರಾಯನು ಆ ಧ್ವನಿಯನ್ನು ಕೇಳಿ ಶೋಕದಿಂದ ಕಂಗೆಟ್ಟು ತಾನು ಕುಳಿತಿದ್ದ ಮಣಿಮಂಚದ ಮೇಲೆ ಒರಗಿ ಲಜ್ಜಿತನಾಗಿದ್ದನು. ಇತ್ತ ಶ್ರೀರಾಮನು ವನವಾಸಕ್ಕೆ ಹೋಗಬೇಕೆಂದು ನಿಶ್ಚಯಿಸಿಕೊಂಡು ತನ್ನ ತಮ್ಮನಾದ ಲಕ್ಷ್ಮಣನೊಡನೆ ಕೌಸಲ್ಯಾದೇವಿಯ ಮನೆಗೆ ಬಿಜಯಂಗೈದು ಆ ಅರಮನೆಯ ಹೊರಬಾಗಿಲ ಹಜಾರದಲ್ಲಿದ್ದ ಕುಲವೃದ್ಧರಾದ ಪ್ರಧಾನಿಗಳನ್ನು ಕಂಡನು. ಅವರು ತಮ್ಮ ಸುವರ್ಣ ಪೀಠಗಳಿಂದೆದ್ದು ವಂದನೆಗಳನ್ನು ಮಾಡಿ ಜಯ ಜಯ ಎಂದು ಕೊಂಡಾಡುತ್ತಿರಲು ಮೊದಲಂತರದ ಬಾಗಿಲನ್ನು ದಾಟಿ ಎರಡನೆಯ ಬಾಗಿಲಿಗೆ ಹೋದನು. ಅಲ್ಲಿದ್ದ ಶ್ರೀರಾಮನು ವೇದಾಧ್ಯಯನ ಸಂಪನ್ನರೂ ವೃದ್ಧರೂ ತನಗೆ ಆಪ್ತರೂ ಆದ ಬ್ರಾಹ್ಮಣರನ್ನು ಕಂಡು ಅವರಿಗೆ ಅಭಿವಂದಿಸಿ ಅವರ ಆಶೀರ್ವಾದಗಳನ್ನು ಪಡೆದನು. ಅನಂತರ ಮೂರನೆಯ ಅಂತರದ ಬಾಗಿಲಲ್ಲಿ ವೃದ್ಧೆಯರಾಗಿ ಬಾಗಿಲನ್ನು ಕಾದುಕೊಂಡಿದ್ದ ಸ್ತ್ರೀಯರನ್ನು ಕಂಡು ಸನ್ಮಾನಿಸಿ ತನ್ನ ತಾಯಿಯಾದ ಕೌಸಲ್ಯಾದೇವಿಯ ಸಮೀಪಕ್ಕೆ ಹೋದನು. ಆಗ ಆ ದೇವಿಯು ಹಿಂದಣ ನಿಯಮಗಳಿಂದ ಪ್ರಾತಃಕಾಲದಲ್ಲಿ ಮಂಗಳ ಸ್ನಾನವನ್ನು ಮಾಡಿ ಬಿಳಿಯ ಪಟ್ಟೆಸೀರೆಯನ್ನುಟ್ಟು ತನ್ನ ಕುಮಾರನಿಗೆ ಶ್ರೇಯಸ್ಸಾಗಬೇಕೆಂದು ದೇವಪೂಜೆಯನ್ನು ಮಾಡಿ ವ್ರತಸ್ಥೆಯಾಗಿ ಯತ್ನಿಕ್ಕುಗಳಾದ ಬ್ರಾಹ್ಮಣರಿಂದ ಹೋಮವನ್ನು ಮಾಡಿಸುತ್ತ ತನ್ನ ಮಗನ ಬರವನ್ನುದ್ದಳು. ಶ್ರೀರಾಮನು ಮಂಗಳಕರವಾದ ಆ ಅಂತಃಪುರವನ್ನು ಪ್ರವೇಶಿಸಿ ಆ ದೇವಿಯು ಹೋಮಾರ್ಥವಾಗಿರಿಸಿಕೊಂಡಿದ್ದ ಸಮಿತ್ತು ತುಪ್ಪ ಮೊಸರು ಮೋದಕ ಹವಿಸ್ಸು ಲಾಜ ಅಕ್ಷತೆ ಪುಷ್ಪಮಾಲಿಕೆ ಪೂರ್ಣಕುಂಭಗಳು ಮೊದಲಾದ ಹೋಮದ್ರವ್ಯಗಳನ್ನು ನೋಡಿದನು; ಬ್ರಾಹ್ಮಣರ ಕೈಯಲ್ಲಿ ಹೋಮವನ್ನು ಮಾಡಿಸುತ್ತೆ ವ್ರತನಿಯಮದಿಂದ ಕೃಶಾಂಗಿಯಾಗಿದ್ದ ತಾಯಿಯನ್ನು ಕಂಡನು.


ಮುಂದುವರಿಯುವುದು...





ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

# ಬಾ ಮರಳಿ




ಜಗತ್ತಿನಲ್ಲಿ ಯಾರಿಗೂ ಸಿಗದಂತಹ ಗೌರವ ಸಿಗುವುದು ಕೇವಲ ಶಿಕ್ಷಕರಿಗೆ ಮಾತ್ರ. ಉಸಿರು ಇರುವವರೆಗೂ, ಉಸಿರು ಹೋದ ನಂತರವು. ಕೇವಲ ಬೋಧಿಸುವುದರಲ್ಲಿ, ಕಲಿಸುವುದರಲ್ಲಿ ಈ ಸ್ಥಾನ ಮಾನ ಸಿಗುವುದಿಲ್ಲ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆ ಮತ್ತು ಶಾಲೆಯ ಶೈಕ್ಷಣಿಕ ಪ್ರಗತಿಯನ್ನೇ ಉತ್ತುಂಗಕ್ಕೆ ಕೊಂಡೊಯ್ಯುವ ಆದರ್ಶ ಶಿಕ್ಷಕನಿಗೆ ಮಾತ್ರ ತನ್ನ ಜೀವಿತದ ಮತ್ತು ಜೀವಿತದ ನಂತರವೂ ಸಹ ಬೆಲೆ ಕಟ್ಟಲಾಗದಷ್ಟು ಗೌರವ ಸ್ಥಾನಮಾನಗಳು ಸಿಗುತ್ತದೆ. ಇಂತಹ ಶಿಕ್ಷಕರ ಸಾಲಿನಲ್ಲಿ ನಿಲ್ಲುವ ಬಲು ಅಪರೂಪದ ಸಕಲಕಲಾವಲ್ಲಭ ಕುಮಾರ್‌ರವರು. ಪಾಂಡವಪುರ ತಾಲ್ಲೂಕಿನ ಹಳೇಬೀಡು ಗ್ರಾಮದ ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಇವರು ತಮ್ಮ ಪ್ರತಿಭೆಯಿಂದ ಗುರುತಿಸಿಕೊಂಡವರು.

ತಮ್ಮ ಕುಟುಂಬದ ನಿರ್ವಹಣೆಗಾಗಿ ಟಿ.ಸಿ.ಹೆಚ್ ವಿದ್ಯಾಭ್ಯಾಸವನ್ನು ಮುಗಿಸಿ ಶಿಕ್ಷಕ ವೃತ್ತಿಗೆ ಸೇರಿಕೊಂಡವರಾದರೂ ಕಾಯಕವೇ ಕೈಲಾಸ ಎಂಬಂತೆ ವೃತ್ತಿಯಲ್ಲಿ ಸಾರ್ಥಕತೆ ಕಂಡುಕೊಂಡು ಆರಾಧಿಸಿದವರು. ಸಮಯ ಪಾಲನೆ ಹಾಗೂ ಬಟ್ಟೆ ತೊಡುವುದರಲ್ಲಿ ಶಿಸ್ತಿನ ಸಿಪಾಯಿಯಂತಿದವರು, ಮಿತ ಭಾಷಕರಾಗಿದ್ದರೂ ಹಿತವಾದ ನುಡಿಗಳನಾಡುತ್ತಿದ್ದರು, ಸುಖಸುಮ್ಮನೆ ಕಾಲ ಹರಣ ಮಾಡುವವರಾಗಿರಲಿಲ್ಲ, ಸದಾ ಚಟುವಟಿಕೆಯಿಂದ, ಲವಲವಿಕೆಯಿಂದ ಕೂಡಿದ ಮುಗ್ಧ ಮನಸ್ಸಿನವರು. ಸದಾ ಪಾದರಸದಂತೆ ಸಕ್ರಿಯವಾಗಿರುತ್ತಿದ್ದರು. ಒಬ್ಬ ಆದರ್ಶ ಶಿಕ್ಷಕನಿಗಿರಬೇಕಾದ ಗುಣಗಳನ್ನು ಪಟ್ಟಿ ಮಾಡಿದರೆ ಎಷ್ಟು ಗುಣಗಳಿರಬೇಕೆಂದು ಅಂದಾಜು ಮಾಡುತ್ತೇವೋ ಅಷ್ಟೆಲ್ಲ ಗುಣಗಳು ಇವರಲ್ಲಿದ್ದವು. ಶಾಲಾ, ವಿದ್ಯಾರ್ಥಿಗಳನ್ನು ಸದಾ ಪ್ರೀತಿಸುತ್ತಿದ್ದ ಇವರು ಸದಾ ಅವುಗಳ ಬೆಳವಣಿಗೆಗಾಗಿ ಚಿಂತಿಸುತ್ತಾ ಕಾರ್ಯ ಪ್ರವೃತ್ತವಾಗಿರುತ್ತಿದ್ದರು. ತಾವು ಕರ್ತವ್ಯ ನಿರ್ವಹಿಸಿದ ಕೆ.ಆರ್.ಪೇಟೆ ತಾಲ್ಲೂಕಿನ ಸಿಂಗಾಪುರ ಹಾಗೂ ಪಾಂಡವಪುರ ತಾಲ್ಲೂಕಿನ ನರಹಳ್ಳಿ ಶಾಲೆಯ ಆಂತರಿಕ ಮತ್ತು ಬಾಹ್ಯ ಸೌಂದರ್ಯವನ್ನು ಹೆಚ್ಚುಸುವಲ್ಲಿ ಬೇಕಾದ ಕಾಮಗಾರಿಗಳನ್ನು ಪೋಷಕರ, ಗ್ರಾಮಸ್ಥರ ಹಾಗೂ ಇಲಾಖೆಯ ಸಹಕಾರ ಪಡೆದು ಜಿಲ್ಲಾ ಮಟ್ಟದ ಮಾದರಿ ಶಾಲೆಯ ಪಟ್ಟಿಗೆ ಸೇರುವಲ್ಲಿ ಟೊಂಕ ಕಟ್ಟಿ ನಿಂತು ಫಲಪ್ರದ ಮಾಡಿದವರು.

'Simple living light thinking' ಎಂಬಂತೆ ಸರಳ ಜೀವನ ನಡೆಸುತ್ತಾ ಉನ್ನತ ಮಟ್ಟದ ಚಿಂತನೆ ಮಾಡುತ್ತಿದ್ದರು. ಆಡಂಬರದ ಸಂಭ್ರಮಾಚರಣೆಗಳನ್ನು ಹಾಗೂ ಮದುವೆಯನ್ನು ವಿರೋಧಿಸಿ ಸರಳ ಮದುವೆಗೆ ಪ್ರೋತ್ಸಾಹ ನೀಡಿದವರು. ಅಂತೆಯೇ ಹೇಳಿದ್ದನ್ನು ಮಾಡುವಂತೆ ಸ್ವಯಂ ತಾವೇ ಸರಳ ವಿವಾಹವಾದವರು. ಉತ್ತಮ ಬರವಣಿಗೆ ಹೊಂದಿದ ಇವರು ಶಾಲೆಯ ಕಲಿಕೋಪಕರಣಗಳಿಗೆ ತಮ್ಮ ಕೈ ಬರವಣಿಗೆಯ ಮೂಲಕ ಮೆರಗನ್ನು ನೀಡಿದವರು. ಭೋದನಾ ಮಾದರಿ ಹಾಗೂ ಕಲಿಕೋಪಕರಣಗಳ ತಯಾರಿಕೆಗೆ ಜಿಲ್ಲಾಮಟ್ಟದಲ್ಲಿ ಹೆಸರುವಾಸಿಯಾಗಿದ್ದವರು. ಸ್ಥಳೀಯವಾಗಿ ಸಿಗುವ ಸಂಪನ್ಮೂಲಗಳನ್ನು ಬಳಸಿಕೊಂಡು ವೈವಿಧ್ಯಮಯವಾಗಿ ಟಿ.ಎಲ್.ಎಂ ಗಳನ್ನು ತಯಾರಿಸಿ ತಮ್ಮ ಶಾಲೆ ಹಾಗೂ ಇತರ ಶಾಲೆಯ ಶಿಕ್ಷಕರಿಗೆ ನೀಡುತ್ತಿದವರು. ತಾಲ್ಲೂಕು ಮಟ್ಟದ ಹಾಗೂ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದು ಒಬ್ಬ ಮಾದರಿ ಶಿಕ್ಷಕನಾಗಿ ತಾನು ಬೆಳೆಯುತ್ತಾ ಇತರರನ್ನು ಬೆಳೆಸಿದವರು.

ಶಿಕ್ಷಕ ವೃತ್ತಿಯ ಜೊತೆಗೆ ಸಾಹಿತ್ಯದಲ್ಲೂ ಆಸಕ್ತಿ ಮೂಡಿಸಿಕೊಂಡು ಬಿಡುವಿನ ಸಮಯದಲ್ಲಿ ಕಥೆ, ಕವನ, ನಾಟಕಗಳನ್ನು ಬರೆಯುತ್ತಿದ್ದರು. ತಮ್ಮ ಬರಹದಲ್ಲಿ ಯುವ ಶಕ್ತಿಯು ಋಜು ಪಥದಲ್ಲಿ ಸಾಗದೇ ಜಾತಿ ಧರ್ಮ ಎಂಬ ಸಂಕಷ್ಟಗಳಿಗೆ ಸಿಲುಕಿ ಅನಾಹುತಕ್ಕೆ ಸಿಲುಕತ್ತಿರುಹುದನ್ನೇ ಬಿಂಬಿಸುತ್ತ, ದೇಶದ ಅಭಿವೃದ್ಧಿ ಅಥವಾ ಅವನತಿಯಲ್ಲಿ ಯುವಶಕ್ತಿಯ ಪಾತ್ರ ಏನೆಂಬುದನ್ನು ತಿಳಿಸಿದ್ದಾರೆ. ಸಾಹಿತಿ ಕುಮಾರ್ ಅವರ ಸೂಕ್ಷ್ಮ ಬುದ್ಧಿ, ವಿಮರ್ಶಾ ಶಕ್ತಿ, ರಾಷ್ಟ್ರಭಕ್ತಿ, ಹಾಗೂ ಯುವಶಕ್ತಿಯ ಆಲೋಚನೆ ಕುರಿತು ಈ ಕೃತಿಯಲ್ಲಿ ಅವರು ಅನಾವರಣಗೊಳಿಸಿರುವುದನ್ನು ಕಾಣಬಹುದು. ಆಕಾಶದಲ್ಲಿ ಪ್ರಕಾಶಮಾನವಾಗಿ ಮಿನುಗಿ ಮರೆಯಾಗುವ ನಕ್ಷತ್ರದಂತೆ ಬೌದ್ಧಿಕವಾಗಿ ನಮ್ಮಿಂದ ಮರೆಯಾದ ಕುಮಾರ್ ಅವರ ಬರಹಗಳನ್ನು ಅವರ ಶ್ರೀಮತಿ ನಾಗು ರವರು ಹಾಗೂ ಕುಟುಂಬಸ್ಥರು ಮುದ್ರಿಸಿ ಹೊರ ತರುತ್ತಿರುವುದು ಸಾಹಿತ್ಯ ಕ್ಷೇತ್ರಕ್ಕೆ ಕೊಡುತ್ತಿರುವ ಕೊಡುಗೆ ಎಂದು ಅಭಿನಂದಿಸುತ್ತೇನೆ.



## ಹೆಣ್ಣಿಲ್ಲದಿರೆ ಬದುಕು ಬರಡು

• ಗುಜ್ಜರ್, ದಾವಣಗೆರೆ

ಹಲವು ಬಾರಿ ಯೋಚಿಸುತ್ತೇವೆ
ಹೆಣ್ಣೊಬ್ಬಳೇ
ಸಕಲ ಜೀವ ಸೃಷ್ಟಿಗೆ
ಕಾರಣಳು, ಇದು ಸತ್ಯ...
ಸಂಕಷ್ಟದಲಿ ತಾಳ ತಪ್ಪದ
ಸಂತೋಷದಲ್ಲಿ ಮೇರೆ ಮೀರದ
ನಗುಮುಖದ ಬಣ್ಣ ಹೊತ್ತು
,ನೋಡುಗರಿಗೆ
ನಾ ಸುಖಿ ಎಂದು
ಸಾರಿ ಹೇಳುವ
ಜೀವದ ಸಖಿ,
ಮೊದಲು ತಾಯಿ
ಮಡದಿ,ಸಹೋದರಿ,
ಮಗಳು,ಹೀಗಾವಳ
ವಿಧ ವಿಧ ರೂಪ...
ಭೋಜನೇಶು ಮಾತ
ಸಲಹೇಶು ಮಂತ್ರಿ
ಶಯನೇಶು ರಂಭ
ರಕ್ಷಣೇಶು ಸಹೋದರಿ
ಇನ್ನೂ ಅನೇಕ ರೂಪಗಳ
ಹೊತ್ತು ಜೀವ ಸವೆಸುವಳು
ಸರಿ ಸಾಟಿ ಇಹುದೇ ಇವಳ
ಜೀವನ ಚಕ್ರಕೆ...
ಬಲ ಇರುವವರೆಗೂ
ಭವದ ಬವಣೆಗೆ ಭುಜ
ಕೊಡುವಳು ಹೆಣ್ಣು
ಇದ್ದರೂ ಸಾವಿರ ಕಷ್ಟ
ಸಾಗುವಳು ಕವಚಾವೃತವಾಗಿ...
ನಾ ಹೆತ್ತೆನು, ಹೊತ್ತೆನು
ಸಾಕಿ ಸಲಹಿದೆ, ಕಲಿಸಿದೆ
ಗಂಡು ಹೆಣ್ಣೆಂಬ ತಾರತಮ್ಯವಿಲ್ಲದೆ
ಸಂಗಾತಗೊಳಿಸಿ ಎಲ್ಲರ
ಕಣ್ಣೀರ ಒರೆಸಿ
ಜಗದ ಮರು ಜೀವಕೆ
ಸಾಕ್ಷಿಯಾಗುವೆ...
ಹೇ...ಸೃಷ್ಟಿಯೇ ನೀ
ಸೃಷ್ಟಿಸದ್ದಿರೆ ಹೆಣ್ಣು
ಬರಡಾಗಿರುತ್ತಿತ್ತು
ಬದುಕು...
ಅಂತರಾಷ್ಟ್ರೀಯ ಮಹಿಳಾ
ದಿನಾಚರಣೆಗಾಗಿ ಬರೆದ
ವಿಶೇಷ ಕವನ , ನನ್ನ ನಿಮ್ಮ ತಾಯಿಯ
ನೆನೆದು

# ಮಹಿಳೆಯರ ಆರೋಗ್ಯದ ಬಗ್ಗೆ ಜಾಗೃತಿ

ಮಹಿಳೆಯರು ತಮ್ಮ ಆರೋಗ್ಯ ಬಗ್ಗೆ ಕಾಳಜಿ ವಹಿಸುವ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಆಲ್ಟಿಯಸ್ ಆಸ್ಪತ್ರೆಯ ನೇತೃತ್ವದಲ್ಲಿ ಮಹಿಳಾ ದಿನಾಚರಣೆ ಪ್ರಯುಕ್ತವಾಗಿ 3ನೇ ಆವೃತ್ತಿಯ ವುಮೆನ್ ಆಕಥಾನ್ ನನ್ನು ಆಯೋಜಿಸಲಾಗಿತ್ತು.



ಬೆಂಗಳೂರಿನ ಕಲ್ಯಾಣ ನಗರದ ಕೆಬಿಸಿ ಬ್ಯಾಸ್ಕೆಟ್ ಬಾಲ್ ಕೋರ್ಟ್‌ನಿಂದ ಬೆಳಗ್ಗೆ 6 ಗಂಟೆಗೆ ಪ್ರಾರಂಭಗೊಂಡ ವಾಕ ಥಾನ್‌ನನ್ನು ಆಲ್ಟಿಯಸ್ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ಪ್ರಿಯಾ ಎಸ್. ಪಿ. ಪಾಟೀಲ್ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಅವರು, ಕುಟುಂಬ ನಿರ್ವಹಣೆಯ ಜವಾಬ್ದಾರಿ ನಿಭಾಯಿಸುವ ಭರದಲ್ಲಿ ತಮ್ಮ ಆರೋಗ್ಯದ ಬಗ್ಗೆಯೇ ಮಹಿಳೆಯರು ನಿರ್ಲಕ್ಷಿಸುತ್ತಿದ್ದಾರೆ.

ಶೇ.70 ರಷ್ಟು ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸುತ್ತಿಲ್ಲ ಎಂದು ಅನೇಕ ಅಧ್ಯಯನಗಳು ತಿಳಿಸಿವೆ. ಇದರಿಂದ ಮಹಿಳೆಯರು ಅನೇಕ ಆರೋಗ್ಯ ಸಮಸ್ಯೆಗೆ ಒಳಗಾಗುತ್ತಿದ್ದಾರೆ.

ಮಹಿಳೆಯರೂ ಸಹ ಕುಟುಂಬ ನಿರ್ಹಣೆಯ ಜೊತೆ ಜೊತೆಗೆ ತಮ್ಮ ಆರೋಗ್ಯ ನಿಭಾಯಿಸಲು ಸಮಯ ಮೀಸಲಿಡಬೇಕು.

ನಿತ್ಯ ದೈಹಿಕ ವ್ಯಾಯಾಮ ಮಾಡುವುದು, ಪೌಷ್ಠಿಕಾಂಶಯುಕ್ತ ಆಹಾರ ಸೇವಿಸುವುದರ ಬಗ್ಗೆ ಗಮನವಹಿಸಬೇಕು ಎಂದರು.

ತಮ್ಮ ಆರೋಗ್ಯ ನಿರ್ಲಕ್ಷಿಸುವ ಮಹಿಳೆಯರು ಎಂಡೋಮೆಟ್ರಿಯಾಸಿಸ್, ಸರ್ವೈಕಲ್ ಕ್ಯಾನ್ಸರ್‌ನಂತಹ ಮಾರಕ ಕಾಯಿಲೆಗೆ ಒಳಗಾಗುತ್ತಿದ್ದಾರೆ, ಈ ಅಪಾಯಕಾರ ಕ್ಯಾನ್ಸರ್ ಬಗ್ಗೆ ಮಹಿಳೆ ಜಾಗೃತಿ ಹೊಂದಬೇಕು.

ಸರ್ವೈಕಲ್ ಕ್ಯಾನ್ಸರ್ ತಡೆಗಟ್ಟಲು ಇದೀಗ ಲಸಿಕೆ ಲಭ್ಯವಿದ್ದು, ಪ್ರತಿಯೊಬ್ಬರು ಇದರ ಪ್ರಯೋಜನ ಪಡೆದುಕೊಳ್ಳಲಿದೆ ಎಂದು ಹೇಳಿದರು.

# ಮಾಂಸ ಚೆನ್ನಾಗಿ ಬೇಯಿಸಿ ತಿಂದರೆ ಸೋಂಕು ತಗುಲುವುದಿಲ್ಲ

ಹಕ್ಕಿಜ್ವರ ಸಾಂಕ್ರಾಮಿಕ ರೋಗವಾಗಿದ್ದು, ಮುನ್ನೆಚ್ಚರಿಕೆ ವಹಿಸಿದರೆ ಸೋಂಕನ್ನು ತಡೆಯಬಹುದಾಗಿದೆ. ಹೀಗಾಗಿ ಕಾಯಿಲೆಯ ಲಕ್ಷಣಗಳು ಕೋಳಿಗಳಲ್ಲಿ ಕಾಣಿಸಿಕೊಂಡ ಕೂಡಲೇ ಹತ್ತಿರದ ಮಾಹಿತಿ ಕೇಂದ್ರ ಅಥವಾ ಪಶು ವೈದ್ಯಕೀಯ ಸಂಸ್ಥೆಗೆ ಮಾಹಿತಿ ನೀಡಬೇಕು.

ನೆರೆಯ ಆಂಧ್ರಪ್ರದೇಶ. ಮಹಾರಾಷ್ಟ್ರ ಮತ್ತು ಕರ್ನಾಟಕದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಹಕ್ಕಿ ಜ್ವರ ಪ್ರಕರಣಗಳು ಕಂಡುಬಂದಿರುವ ಹಿನ್ನೆಲೆಯಲ್ಲಿ ಎಲ್ಲೆಡೆ ಕೋಳಿ ಮಾಂಸ ಹಾಗೂ ಮೊಟ್ಟೆಯ ಸೇವನೆಯ ಬಗ್ಗೆ ಆತಂಕ ಶುರುವಾಗಿದೆ. ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ ಅವರು ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಪರಿಸ್ಥಿತಿ ಅವಲೋಕನ ನಡೆಸಿದರು. ಈ ವೇಳೆ ಹಕ್ಕಿ ಜ್ವರ ಹರಡದಂತೆ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸೂಚನೆ ನೀಡಿದರು.



ಪಕ್ಷಿಗಳು ಅಥವಾ ಕೋಳಿಗಳ ಯಾವುದೇ ಅನುಮಾನಾಸ್ಪದ, ಅಸಹಜ, ಹಠಾತ್ ಸಾವು ಕಂಡುಬಂದರೆ, ಹತ್ತಿರದ ಪಶುವೈದ್ಯಕೀಯ ಇಲಾಖೆಗೆ ತಿಳಿಸಿ ಎಂದು ತಿಳಿಸಿದರು. ಹಕ್ಕಿ ಜ್ವರ ಪತ್ತೆಯಾದ ಸ್ಥಳದಿಂದ 10 ಕಿ.ಮೀ ವ್ಯಾಪ್ತಿಯ ಸುತ್ತಲಿನ ನಿವಾಸಿಗಳು ಶೀತ, ಕೆಮ್ಮು, ಜ್ವರ, ತಲೆನೋವು, ಮೈ-ಕೈ ನೋವು, ಗಂಟಲು ನೋವು ಮತ್ತು ಇತರ ರೋಗಲಕ್ಷಣಗಳಿಂದ ಬಳಲುತ್ತಿದ್ದರೆ, ತಕ್ಷಣ ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬೇಕು. ಗ್ರಾಮ ಪಂಚಾಯಿತಿಗಳಲ್ಲಿ ಹಕ್ಕಿ ಜ್ವರದ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲು ಆರೋಗ್ಯ ಇಲಾಖೆಗೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದು ಹೇಳಿದರು.

### ಹಕ್ಕಿಜ್ವರದ ಲಕ್ಷಣಗಳೇನು?

**ಹಕ್ಕಿಜ್ವರದ ಲಕ್ಷಣಗಳು ಸಾಮಾನ್ಯವಾಗಿ ಎಚ್1ಎನ್1 ಜ್ವರದ ಲಕ್ಷಣಗಳಂತೆಯೇ ಇರುತ್ತದೆ. ಜ್ವರ, ಕೆಮ್ಮು, ಶೀತ, ತಲೆನೋವು, ಗಂಟಲು ಕೆರೆತ, ನೆಗಡಿ, ಸ್ನಾಯುಗಳಲ್ಲಿ ನೋವು, ಆಯಾಸ ಕಾಣಿಸಿಕೊಳ್ಳುತ್ತದೆ. ಕೆಲವೊಮ್ಮೆ ವಾಂತಿ ಮತ್ತು ಭೇದಿಯೂ ಆಗಬಹುದು. ಉಸಿರಾಟದಲ್ಲಿ ತೊಂದರೆಯೂ ಉಂಟಾಗಬಹುದು.**

**ಏನಿದು ಹಕ್ಕಿ ಜ್ವರ?:** ಹಕ್ಕಿಜ್ವರ ಸಾಂಕ್ರಾಮಿಕ ರೋಗವಾಗಿದ್ದು, ಮುನ್ನೆಚ್ಚರಿಕೆ ವಹಿಸಿದರೆ ಸೋಂಕನ್ನು ತಡೆಯಬಹುದಾಗಿದೆ. ಹೀಗಾಗಿ ಕಾಯಿಲೆಯ ಲಕ್ಷಣಗಳು ಕೋಳಿಗಳಲ್ಲಿ ಕಾಣಿಸಿಕೊಂಡ ಕೂಡಲೇ ಹತ್ತಿರದ ಮಾಹಿತಿ ಕೇಂದ್ರ ಅಥವಾ ಪಶು ವೈದ್ಯಕೀಯ ಸಂಸ್ಥೆಗೆ ಮಾಹಿತಿ ನೀಡಬೇಕು ಎಂದು ಆರೋಗ್ಯ ಇಲಾಖೆ ಸಾರ್ವಜನಿಕರಿಗೆ ಸೂಚಿಸಿದೆ.

**ಮುನ್ನೆಚ್ಚರಿಕಾ ಕ್ರಮಗಳೇನು?**

ಹಕ್ಕಿಜ್ವರ ಪೀಡಿತ ಕೋಳಿಗಳು, ಪಕ್ಷಿಗಳು ಹಾಗೂ ಬಾತುಕೋಳಿಗಳ ಸಂಪರ್ಕಕ್ಕೆ ಬರದಂತೆ ಎಚ್ಚರ ವಹಿಸಬೇಕು.

ಹಕ್ಕಿಜ್ವರ ಪೀಡಿತ ಫಾರಂಗಳಿಗೆ ಭೇಟಿ ನೀಡಬಾರದು.

ಹಕ್ಕಿಜ್ವರ ಹರಡಿರುವ ಫಾರಂನ ಸಂಪರ್ಕಕ್ಕೆ ಬಂದಲ್ಲಿ ತಕ್ಷಣ ಕೈಕಾಲು, ಮುಖ ತೊಳೆದುಕೊಂಡು ಬಟ್ಟೆ ಬದಲಾಯಿಸಿಕೊಳ್ಳಬೇಕು. ಕನಿಷ್ಠ 15 ಸೆಕೆಂಡುಗಳ ಕಾಲವಾದರೂ ಸೋಪ್ ಮತ್ತು ನೀರಿನಿಂದ ಕೈಗಳನ್ನು ತೊಳೆಯಿರಿ, ಒಂದು ವೇಳೆ ಜ್ವರದ ಲಕ್ಷಣ ಕಾಣಿಸಿದಲ್ಲಿ ತಕ್ಷಣ ವೈದ್ಯರನ್ನು ಕಾಣಬೇಕು. ಸೋಂಕಿತ ಸ್ಥಳದಲ್ಲಿ ಯಾವುದೇ ವಸ್ತು ಮುಟ್ಟಿದರೂ ಕೈಯನ್ನು ಸ್ವಚ್ಛಗೊಳಿಸಬೇಕು. ಹಕ್ಕಿಜ್ವರ ಪ್ರಕರಣಗಳು ವರದಿಯಾಗಿರುವ ಪ್ರದೇಶದ 3ರಿಂದ 10 ಕಿ.ಮೀ ವ್ಯಾಪ್ತಿಯ ಪ್ರದೇಶಗಳಲ್ಲಿ ಜ್ವರ, ಶೀತ ನೆಗಡಿಯ ರೋಗ ಲಕ್ಷಣ ಇರುವ ಬಗ್ಗೆ ವಾರಕ್ಕೊಮ್ಮೆ ಸಮೀಕ್ಷೆ ಮಾಡಬೇಕು ಮತ್ತು ಸೂಕ್ತ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಕೋಳಿ ಫಾರಂಗಳಿಂದ ಕೋಳಿಗಳನ್ನು ಸಾಗಣೆ ಮಾಡುವ ವಾಹನಗಳನ್ನು ಸೋಂಕು ನಿವಾರಕ ಸಿಂಪಡಿಸಿ ಸ್ವಚ್ಛಗೊಳಿಸಬೇಕು. ನಿಮ್ಮ ಸಾಕುಪ್ರಾಣಿಗಳಿಗೆ ಲಸಿಕೆ ಹಾಕಿಸಿ. ಕೋಳಿ ಮತ್ತು ಜಾನುವಾರುಗಳಿರುವ ಸ್ಥಳದಲ್ಲಿ ಕೆಲಸ ಮಾಡುವಾಗ ಕೈಗವಸುಗಳು, ಮುಖವಾಡ ಮತ್ತು ಕನ್ನಡಕಗಳನ್ನು ಧರಿಸಿ, ಆರೋಗ್ಯ ದುರ್ಬಲವಾಗಿರುವ ವ್ಯಕ್ತಿಗಳಿಗೆ ಲಸಿಕೆಗಳನ್ನು ಹಾಕಿಸಿ.



# ಪುರುಷರು ಪ್ರತಿಯೊಂದು ವಿಷ್ಯದಲ್ಲಿ ಮಹಿಳೆಯರ ಸಲಹೆ ಪಡೆಯಬೇಕು ಯಾಕೆ ಗೊತ್ತಾ?

ಪುರುಷರ ಜೀವನದಲ್ಲಿ ಮಹಿಳೆಯು ಮಹತ್ತರ ಪಾತ್ರ ವಹಿಸುತ್ತಾಳೆ. ಹೀಗಿರುವಾಗ ಆಕೆಯ ಅಭಿಪ್ರಾಯಕ್ಕೂ ಬೆಲೆ ನೀಡಬೇಕಾಗುತ್ತದೆ. ಪುರುಷರು ಯಾವುದೇ ಸಣ್ಣ ಪುಟ್ಟದಾಗಿರಲಿ ಅಥವಾ ಮಹತ್ತರದಾಗಿರಲಿ ನಿರ್ಧಾರ ತೆಗೆದುಕೊಳ್ಳುವಾಗ ಮಹಿಳೆಯರ ಅಭಿಪ್ರಾಯಕ್ಕೂ ಪ್ರಾಮುಖ್ಯತೆ ನೀಡುವುದು ಮುಖ್ಯ.

ಕಳೆದ ಕೆಲವು ವರ್ಷಗಳಲ್ಲಿ ಮಹಿಳೆಯರು ಬಹಳಷ್ಟು ಮುಂದುವರಿದಿದ್ದಾರೆ. ಅಡುಗೆಮನೆಯನ್ನು ನಿರ್ವಹಿಸುವುದರ ಜೊತೆಗೆ, ಕಚೇರಿಯಲ್ಲಿಯೂ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ.ಆದರೂ ಕೆಲವೊಮ್ಮೆ ಪುರುಷರು ತಮ್ಮ ಜೀವನದಲ್ಲಿ ಮಹಿಳೆಯರ ಅಭಿಪ್ರಾಯಗಳನ್ನು ಹೆಚ್ಚಾಗಿ ನಿರ್ಲಕ್ಷಿಸುತ್ತಾರೆ. ಅನೇಕ ಪುರುಷರು ಮಹಿಳೆಯರ ಅಭಿಪ್ರಾಯವನ್ನು ಕೇಳುವುದು ಅಗತ್ಯವೆಂದು ಪರಿಗಣಿಸುವುದಿಲ್ಲ. ನೀವೂ ಈ ರೀತಿ ಮಾಡುತ್ತಿದ್ದರೆ ಪುರುಷರು ಮಹಿಳೆಯ ಮಾತನ್ನು ಏಕೆ ಕೇಳಬೇಕು ಎನ್ನುವುದನ್ನು ಅಧ್ಯಯನವೊಂದು ತಿಳಿಸುತ್ತದೆ.

**ಅಧ್ಯಯನ ಏನು ಹೇಳುತ್ತದೆ?:** ಹಾರ್ವರ್ಡ್ ವಿಶ್ವವಿದ್ಯಾಲಯ ನಡೆಸಿದ ಅಧ್ಯಯನವು ಮಹಿಳೆಯರಿಂದ ಸಲಹೆ ಪಡೆಯುವುದರಿಂದ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಸುಧಾರಿಸುತ್ತದೆ ಎಂದು ಬಹಿರಂಗಪಡಿಸಿದೆ. ಅಧ್ಯಯನದ ಸಮಯದಲ್ಲಿ, ಮಹಿಳೆಯರಿಂದ ಸಲಹೆ ಪಡೆಯುವುದರಿಂದ ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯ ಸುಧಾರಿಸುತ್ತದೆ ಮತ್ತು ತಪ್ಪುಗಳನ್ನು ಮಾಡುವ ಸಾಧ್ಯತೆಗಳು ಕಡಿಮೆಯಾಗುತ್ತವೆ ಎಂದು ಸಂಶೋಧಕರು ಕಂಡುಕೊಂಡಿದ್ದಾರೆ. ಅದಕ್ಕಾಗಿಯೇ ಪುರುಷರು ಮಹಿಳೆಯರ ಮಾತನ್ನು ಕೇಳಬೇಕು ಎಂದು ಹೇಳಲಾಗುತ್ತದೆ.

**ಮಹಿಳೆಯ ದೃಷ್ಟಿಕೋನವು ಹೇಗೆ ಸಹಾಯ ಮಾಡುತ್ತದೆ:** ಮಹಿಳೆಯರ ವಿಷಯಕ್ಕೆ ಬಂದಾಗ, ಅವರು ಬಹು ದೃಷ್ಟಿಕೋನಗಳನ್ನು ಪರಿಗಣಿಸುತ್ತಾರೆ, ಸಹಯೋಗಕ್ಕೆ ಆದ್ಯತೆ ನೀಡುತ್ತಾರೆ ಎಂದು ಅಧ್ಯಯನ ಹೇಳುತ್ತದೆ. ಪುರುಷರಿಗಿಂತ ಹೆಚ್ಚು ಸಮತೋಲಿತ ದೃಷ್ಟಿಕೋನವನ್ನು ನೀಡುತ್ತವೆ, ಇದು ಹೆಚ್ಚಿದ ಯಶಸ್ಸಿಗೆ ಕಾರಣವಾಗುತ್ತದೆ. ಅವರ ಆಲೋಚನಾ ವಿಧಾನ ಪುರುಷರಿಗಿಂತ ಬಹಳ ಭಿನ್ನವಾಗಿದೆ. ಒಂದು ನಿರ್ದಿಷ್ಟ ನಿರ್ಧಾರವು ಯಾವ ಪರಿಣಾಮ ಬೀರುತ್ತದೆ ಎಂಬುದನ್ನು ಅವರು ಅಂದಾಜು ಮಾಡಲು ಸಮರ್ಥರಾಗಿದ್ದಾರೆ.

**ಅಧ್ಯಯನವು ಲಿಂಗ ಪಾತ್ರಗಳನ್ನು ಪ್ರಶ್ನಿಸುತ್ತದೆ**

ಈ ಅಧ್ಯಯನವು ಮಹಿಳೆಯರನ್ನು ತಾರ್ಕಿಕಕ್ಕಿಂತ ಹೆಚ್ಚು ಭಾವನಾತ್ಮಕವಾಗಿ ನೋಡುವ ಸಾಂಪ್ರದಾಯಿಕ ಲಿಂಗ ಪಾತ್ರಗಳನ್ನು ಪ್ರಶ್ನಿಸುತ್ತದೆ. ಆದರೆ ಪುರುಷರು ಮನೆಯಲ್ಲಿ ಮತ್ತು ಕೆಲಸದ ಸ್ಥಳದಲ್ಲಿ ಹೆಚ್ಚು ಸವಾಲಿನ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಈ ಅಧ್ಯಯನವು ಮನೆಯಲ್ಲಿ ಮತ್ತು ಕೆಲಸದ ಸ್ಥಳದಲ್ಲಿ ಮಹಿಳೆಯರ ದೃಷ್ಟಿಕೋನದ ಮಹತ್ವವನ್ನು ಎತ್ತಿ ತೋರಿಸುತ್ತದೆ. ಅವರ ಸಲಹೆಯನ್ನು ತೆಗೆದುಕೊಳ್ಳುವುದರಿಂದ ದೀರ್ಘಾವಧಿಯ ಯಶಸ್ಸಿಗೆ ಮಾತ್ರವಲ್ಲ, ಮಾನಸಿಕ ಆರೋಗ್ಯ ಮತ್ತು ಸಂತೋಷಕ್ಕೂ ಕಾರಣವಾಗಬಹುದು ಎಂದು ಹೇಳಿದೆ.

**ಪ್ರತಿ ನಿರ್ಧಾರದಲ್ಲೂ ಆಕೆಯನ್ನು ಸೇರಿಸಿಕೊಳ್ಳಿ:** ಮಕ್ಕಳ ಮುಂದೆ ಒಂದು ತಂಡವಾಗಿ ಇರಲು, ದಿನಸಿ ವಸ್ತುಗಳನ್ನು ಖರೀದಿಸುವಂತಹ ಸಣ್ಣ ವಿಷಯವಾಗಿರಬಹುದು ಅಥವಾ ಕಾರು ಖರೀದಿಸುವಂತಹ ದೊಡ್ಡ ವಿಷಯವಾಗಿರಬಹುದು, ಎಲ್ಲಾವನ್ನೂ ನೀವು ಮಾಡಬೇಕಾಗುತ್ತದೆ. ನೀವು ಎಲ್ಲಾದರ ಬಗ್ಗೆಯೂ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಬಹುದು. ಇದು ನಿಮ್ಮ ಹೆಂಡತಿಗೆ ನಿಮ್ಮ ಜೀವನದ ಪ್ರತಿಯೊಂದು ಅಂಶದಲ್ಲೂ ತಾನು ಸೇರಿದ್ದೇನೆ ಎಂಬ ಭಾವನೆ ಮೂಡಿಸುತ್ತದೆ.

### ಮಹಿಳೆಯ ಸಲಹೆ ಏಕೆ ಮುಖ್ಯ ?

**ನಿಮಗೆ ಮಕ್ಕಳಿದ್ದರೆ, ನೀವು ಅವರ ಮುಂದೆ ಒಂದು ತಂಡದಂತಿರುತ್ತೀರಿ. ಹೆಚ್ಚಾಗಿ ಮಕ್ಕಳ ಮುಂದೆ, ಪುರುಷರು ತಮ್ಮ ಹೆಂಡತಿಯರನ್ನು ಬೈಯುತ್ತಾರೆ, ಇದು ಅವರ ಸ್ವಾಭಿಮಾನವನ್ನು ಕಡಿಮೆ ಮಾಡುತ್ತದೆ. ಆದರೆ ನೀವು ಸಮಸ್ಯೆಗಳನ್ನು ಖಾಸಗಿಯಾಗಿ ಪರಿಹರಿಸಿಕೊಳ್ಳಬೇಕು. ನಿಮ್ಮ ಹೆಂಡತಿ ಗೃಹಿಣಿಯಾಗಿದ್ದರೂ ಸಹ, ಉಳಿತಾಯ ಅಥವಾ ಹೂಡಿಕೆಯ ಬಗ್ಗೆ ಹಣಕಾಸಿನ ನಿರ್ಧಾರಗಳಿಗಾಗಿ ನೀವು ಯಾವಾಗಲೂ ಅವರ ಬಳಿಯೇ ಹೋಗಬೇಕು.ಅವಳು ಅದರ ತಾಂತ್ರಿಕ ಅಂಶಗಳನ್ನು ವಿವರಿಸಲು ಸಾಧ್ಯವಾಗದಿದ್ದರೂ, ಅದನ್ನು ಹೇಗೆ ಮಾಡಬೇಕೆಂದು ಮತ್ತು ನೀವಿಬ್ಬರೂ ಕುಟುಂಬವಾಗಿ ಪ್ರತಿ ತಿಂಗಳು ಎಷ್ಟು ಉಳಿತಾಯ ಮಾಡಬೇಕು ಎಂಬುದನ್ನು ಅವಳು ನಿಮಗೆ ಹೇಳಲು ಸಾಧ್ಯವಾಗುತ್ತದೆ.**



### ಕುರುಬ ಸಮಾಜದ ಮೇಲೆ ಲಿಂಗಾಯತ ಸಮಾಜದವರಿಂದ ದಬ್ಬಾಳಿಕೆ, ಬೆದರಿಕೆ


# ಸೂಕ್ತ ಕ್ರಮಕ್ಕಾಗಿ ಹಣಮಂತ ಪೂಜಾರಿ ಆಗ್ರಹ

• **ಉದಯವಾಹಿನಿ, ಚಿಂಚೋಳಿ**

ಕುರುಬ ಸಮಾಜದ ಮೇಲೆ ಲಿಂಗಾಯತ ಸಮಾಜದವರು ಬೆದರಿಕೆ ದಬ್ಬಾಳಿಕೆಯನ್ನು ಆಳಂದ ತಾಲ್ಲೂಕಿನ ಖಾನಾಪುರ ಗ್ರಾಮದಲ್ಲಿ ಕುರುಬ ಸಮಾಜಕ್ಕೆ ಬಹಿಷ್ಕಾರ ಮಾಡಿದ್ದು ಲಿಂಗಾಯತ ಸಮಾಜದ ತಪ್ಪಿಸ್ಥರ ಮುಖಂಡರಿಗೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕುರುಬ ಸಮಾಜದ ಅಧ್ಯಕ್ಷ ಹಣಮಂತ ಪೂಜಾರಿ ಒತ್ತಾಯಿಸಿದರು.

ನಗರದ ತಹಶೀಲ್ ಕಛೇರಿ ಎದುರು ಕರ್ನಾಟಕ ಪ್ರದೇಶ ತಾಲ್ಲೂಕಾ ಕುರುಬ ಸಂಘದ ವತಿಯಿಂದ ಕಲಬುರ್ಗಿ ಜಿಲ್ಲೆ ಆಳಂದ ತಾಲ್ಲೂಕಿನ ಖಾನಾಪುರ ಗ್ರಾಮದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಸಂಗೋಳ್ಳಿ ರಾಯಣ ಮತ್ತು ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ರವರ ಭಾವಚಿತ್ರಗಳು ವೃತ್ತದ ಬ್ಯಾನರನಲ್ಲಿ ಅಳವಡಿಸಿಕೊಂಡು ಹಾಕಿಸಿದಕ್ಕೆ ವೀರಶೈವ ಲಿಂಗಾಯತ ಸಮಾಜದ ಮುಖಂಡರು ವಿರೋಧಿಸಿ ಖಾನಾಪೂರ ಗ್ರಾಮದ ಕುರುಬ ಸಮುದಾಯದವರನ್ನು ಬಹಿಷ್ಕಾರ ಮಾಡಿದ್ದಕ್ಕಾಗಿ ಸೂಕ್ತ ಕ್ರಮಕ್ಕೈಗೊಂಡು ಕುರುಬ ಸಮಾಜಕ್ಕೆ ಭದ್ರತೆ ಒದಗಿಸಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿಪತ್ರ ಸಲ್ಲಿಸಿ ಮಾತನಾಡಿದ ಅವರು,ಕುರುಬ ಸಮಾಜಕ್ಕೆ ಗ್ರಾಮದ ಅಂಗಡಿಗಳಿಂದ ಯಾವುದೇ ವಸ್ತುಗಳು ನೀಡದಂತೆ ಸಲೂನ್,ಹಿಟ್ಟಿನ ಗಿರಣಿ,ಹೋಟೆಲ್, ಸೇರಿದಂತೆ ಯಾವುದೇ ವಸ್ತುಗಳನ್ನು ಕೊಡದಂತೆ ಅಂಗಡಿ ಮಾಲೀಕರ ಮೇಲೆ ಲಿಂಗಾಯತ ಸಮುದಾಯದವರು ಒತ್ತಡ ಹೆರುತ್ತಿದ್ದಾರೆ. ಯುವ ಹೋರಾಟಗಾರ ಗೋಪಾಲ ಪೂಜಾರಿ ಗಾರಂಪಳ್ಳಿ ಮಾತನಾಡಿದ ಅವರು,ಕುರುಬ ಸಮಾಜವನ್ನು ಗ್ರಾಮದಲ್ಲಿ ಬಹಿಷ್ಕರಿಸಿ ಈಡಿ ದೇಶದ ಕುರುಬ ಸಮಾಜಕ್ಕೆ ಅವಮಾನಿಸಿದಂತಾಗಿದ್ದು,ಸಮಾಜಕ್ಕೆ ನೋವುಂಟು ಮಾಡಿದೆ,ಕೂಡಲೇ ಜಿಲ್ಲಾ,ಡಳಿತ ಮತ್ತು ರಾಜ್ಯ ಸರಕಾರ ಮಧ್ಯಸ್ಥಿಕೆ ವಹಿಸಿ ಕಾನೂನು ಸುವ್ಯವಸ್ಥೆ ಹದಗೆಡದಂತೆ ಕುರುಬ ಸಮುದಾಯಕ್ಕೆ ಸೂಕ್ತ ರಕ್ಷಣೆ ನೀಡಬೇಕು,ಅಂಗಡಿ ಹೋಟಲ್ ಸಲೂನ್ ಮತ್ತು ಇತರೆ ಅಂಗಡಿಗಳಿಂದ ವಸ್ತುಗಳನ್ನು ಖರೀದಿಸಲು ಅನುವು ಮಾಡಿಕೊಡಬೇಕು, ಸ್ವಾತಂತ್ರ್ಯ ಹೋರಾಟಗಾರ ಸಂಗೋಳಿ ರಾಯಣ ಮತ್ತು ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರುಗಳ ಚಿತ್ರಗಳನ್ನು ಅಳವಡಿಸದಂತೆ ಆಜ್ಞೆ ಮಾಡುತ್ತಿರುವ ಲಿಂಗಾಯತ ಸಮುದಾಯದ ಮುಖಂಡರುಗಳ ವಿರುದ್ಧ ಸೂಕ್ತ ಕಾನೂನು ಅಡಿ ಕ್ರಮಕೈಗೊಳ್ಳಬೇಕು, ಕುರುಬ ಸಮುದಾಯದವರು ಮೇಕೆ ಮೇಯಿಸುವವರಿಗೆ ಯಾವುದೇ ರೀತಿ ತೊಂದರೆ ಯಾಗದಂತೆ ಕ್ರಮವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ರೇವಣಸಿದ್ದಪ್ಪಾ ಅಣಕಲ್, ರವಿ ದಸ್ತಾಪೂರ,ರಾಜಕುಮಾರ ಕನಕಪೂರ,ತುಳಜಪ್ಪ,ಅಂಜಪ್ಪಾ,ಬಾಬು,ದೇವೀಂದ್ರಪ್ಪ, ನಾಗಪ್ಪ ಯಲ್ಮಾಡಗಿ,ಅನೇಕರಿದ್ದರು.



☛ ಉದಯವಾಹಿನಿ ಚಿತ್ರ

> ಕುರುಬ ಸಮುದಾಯದವರಿಗೆ ದಿನಸಿ ಸಾಮಾನುಗಳನ್ನು ನೀಡಿದರೆ ಅಂಗಡಿಗಳ ಮಾಲೀಕರಿಗೆ 10 ಸಾವಿರ ರೂ ದಂಡ ವಿಧಿಸಲಾಗುತ್ತದೆ ಎಂದು ದಬ್ಬಾಳಿಕೆ ಹೆದರಿಕೆ ಹಾಕಿದರಿಂದ ಕುರುಬ ಸಮುದಾಯದವರಿಗೆ ಯಾವೊಬ್ಬ ಅಂಗಡಿ ಮಾಲೀಕರು ದಿನಸಿಗಳು ನೀಡುತ್ತಿಲ್ಲ ಮತ್ತು ಸಲೂನ್ ಅಂಗಡಿಗಳಲ್ಲಿ ಕೂಡ ಕಟ್ಟಿಂಗ್ ಮತ್ತು ಹೋಟಲ್,ಹಾಲಿನ ಅಂಗಡಿ ಇತರೆ ಅಂಗಡಿಗಳಿಂದ ಯಾವುದೇ ವಸ್ತುಗಳನ್ನು ಕೊಡದಂತೆ ಆಜ್ಞೆ ಮಾಡಿದ್ದಾರೆ ಇದ್ದರಿಂದ ಖಾನಾಪೂರ ಗ್ರಾಮದ ಕುರುಬ ಸಮುದಾಯ ಕುಟುಂಬಗಳು ಭಯಭೀತರಾಗಿದ್ದಾರೆ -ಹಣಮಂತ ಪೂಜಾರಿ

---

## ಚನ್ನಬಸವ ಶಿವಯೋಗಿಗಳ ಇಂದು 74ನೇ ಜಾತ್ರಾ ಮಹೋತ್ಸವದ ರಥೋತ್ಸವ

• **ಉದಯವಾಹಿನಿ, ಚಿಂಚೋಳಿ**

ನಗರದ ಮುಲ್ಲಾಮಾರಿ ನದಿಯ ತೇರ ಮೈದಾನದಲ್ಲಿ ಪರಮಪೂಜ್ಯ ಲಿಂ.ಸದ್ಗುರು ಶ್ರೀ ಹಾರಕೂಡ ಚನ್ನಬಸವ ಶಿವಯೋಗಿಗಳವರ 74ನೇ ಜಾತ್ರಾ ಮಹೋತ್ಸವದ ರಥೋತ್ಸವವನ್ನು ಮಾ.09ರಂದು ಸಾಯಂಕಾಲ 6.30ಕ್ಕೆ ಅತ್ಯಂತ ವಿಜೃಂಭಣೆಯಿಂದ ಜರುಗಲಿದೆ ಸುತ್ತ ಮುತ್ತಲಿನ ಗ್ರಾಮಗಳ ಮತ್ತು ನಗರದ ಭಕ್ತರು ಆಗಮಿಸಿ ಪೂಜ್ಯರ ದರ್ಶನ ಪಡೆದುಕೊಳ್ಳಬೇಕು ಎಂದು ಮಠದ ಪೀಠಾಧಿಪತಿಗಳು ಪೂಜ್ಯ ಷ.ಬ್ರ.ಡಾ.ಚನ್ನವೀರ ಶಿವಾಚಾರ್ಯರು ತಿಳಿಸಿದ್ದಾರೆ.

ರಥೋತ್ಸವ ಮುಗಿದ ನಂತರ 7ಗಂಟೆಗೆ ಶಿವಾನುಭವ ಚಿಂತನ ಧಾರ್ಮಿಕ ಕಾರ್ಯಕ್ರಮ ಜರುಗಲಿದೆ, ಕಾರ್ಯಕ್ರಮದಲ್ಲಿ ಉಪ್ಪಿನಬೆಟಗೇರಿಯ ಮ.ನಿ.ಪ್ರ. ಕುಮಾರ ವೀರೂಪಾಕ್ಷ ಮಹಾಸ್ವಾಮಿಗಳು,ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ,ಬೀದರ ಸಂಸದ ಸಾಗರ ಖಂಡ್ರೆ,ಸ್ಥಳೀಯ ಶಾಸಕ ಡಾ.ಅವಿನಾಶ ಜಾಧವ, ಮಾಜಿ ಸಂಸದ ಡಾ ಉಮೇಶ ಜಾಧವ,ಪುರಸಭೆ ಅಧ್ಯಕ್ಷ ಆನಂದಕುಮಾರ ಟೈಗರ್,ಕಲಬುರ್ಗಿ ಗ್ರಾಮೀಣ ಶಾಸಕ ಬಸವರಾಜ ಮುತ್ತಿಮೂಡ,ಡಾ.ವಿಕ್ರಮ್ ಪಾಟೀಲ,ಕೆಪಿಸಿಸಿ ಉಪಾಧ್ಯಕ್ಷ ಸುಭಾಷ್ ರಾಠೋಡ್,ಜೆಡಿಎಸ್ ಮುಖಂಡ ಸಂಜೀವನ್ ಯಾಕಾಪೂರ,ಅನೇಕ ಗಣ್ಯಮಾನ್ಯರು ಆಗಮಿಸಲಿದ್ದಾರೆ. ಕಾರ್ಯಕ್ರಮದಲ್ಲಿ ವಿಶೇಷ ಸತ್ಕಾರ ಶಕುಂತಲಾ ಬಸವರಾಜ ಹೊಸಪೇಟ ದಂಪತಿಗಳಿಗೆ, ಬೀರನಳ್ಳಿ ಸಾವಿತ್ರಿ ಸುರೇಶ ಮೇದಾ ದಂಪತಿಗಳಿಗೆ ವಿಶೇಷ ಸತ್ಕಾರ ಮಾಡಲಾಗುವುದು.

**ಚನ್ನಶ್ರೀ ಪ್ರಶಸ್ತಿ ಪುರಸ್ಕಾರ:-** ಪ್ರತಿ ವರ್ಷದಂತೆ ಈ ವರ್ಷವು ಕೂಡ ಪರಮಪೂಜ್ಯ ಷ.ಬ್ರ.ಡಾ.ಚನ್ನವೀರ ಶಿವಾಚಾರ್ಯರು ನಾಲ್ಕು ಜನರಿಗೆ ಅಬ್ಬೆತುಮಕೊರಿನ ತೋಟಯ್ಯ ಶಾಸ್ತ್ರೀಗಳು,ಗದಗದ ದೇಶರಾಜ ಯರಕಿಹಾಳ, ಕೊಡೇಗಲ ಸುರೇಶ ಹೂಗಾರ,ಬಸವರಾಜ ಕೊನೇಕ ಚನ್ನಶ್ರೀ ಪ್ರಶಸ್ತಿ ಫಲಕ ಸೇರಿದಂತೆ 05ಗ್ರಾಂ.ಬಂಗಾರ ಪ್ರಧಾನ ಮಾಡಿ ಸನ್ಮಾನಿಸಲಾಗುವುದು ಎಂದರು.

**ಸಾಯಂಕಾಲ:-** 06ಗಂಟೆಗೆ ಸಂಗೀತ ರಸಮಂಜರಿ ಮತ್ತು ನಗೆ ಹಬ್ಬ ಕಾರ್ಯಕ್ರಮ ಹಮ್ಮಿಕೊಂಡಿದ್ದು ಕಾರ್ಯಕ್ರಮ ಡಿವೈಎಸ್ಪಿ ಸಂಗಮನಾಥ ಹಿರೆಮಠ ಉದ್ಘಾಟನೆ ಮಾಡಲಿದ್ದಾರೆ,ತಹಶೀಲ್ದಾರ್ ಸುಬ್ಬಣ್ಣ ಜಮಖಂಡಿ, ದೀಪಕನಾಗ್ ಪುಣ್ಯಶೆಟ್ಟಿ, ಚಂದ್ರಶೇಖರ್ ಗುತ್ತೇದಾರ, ಅಜೀತಪಾಟೀಲ, ಗಣ್ಯರು ಪಾಲ್ಗೊಳ್ಳುತ್ತಾರೆ ಎಂದರು.


☛ ಉದಯವಾಹಿನಿ ಚಿತ್ರ

**ಮಾ.10ರಂದು ಜಂಗಿ ಕುಸ್ತಿ**

ಬೆಳಿಗ್ಗೆ 08ಗಂಟೆಗೆ ತೇರ್ ಮೈದಾನದಲ್ಲಿ ರಾಜ್ಯ ಅಂತರಾಜ್ಯದಿಂದ ಆಗಮಿಸುವ ಕುಸ್ತಿಪಟ್ಟುಗಳಿಂದ ಜಂಗಿ ಕುಸ್ತಿ ನಡೆಯಲಿದೆ ಕಾರ್ಯಕ್ರಮವನ್ನು ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಜಗನ್ನಾಥ ಗುತ್ತೇದಾರ ಉದ್ಘಾಟನೆ ಮಾಡಲಿದ್ದಾರೆ,ಷ.ಬ್ರ.ಡಾ. ಚನ್ನವೀರ ಶಿವಾಚಾರ್ಯರು ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಕೊನೆಯ ಜಂಗಿ ಕುಸ್ತಿ ಗೆಲುವು ಸಾಧಿಸಿದ ಕುಸ್ತಿಪಟ್ಟುವಿಗೆ 05ತೋಲೆ ಬೆಳ್ಳಿ ಖಡ್ಗ ನೀಡಲಾಗುವುದು.

---

## ಬಜೆಟ್ ಕಲ್ಯಾಣಕ್ಕೆ ಕೊಡುಗೆ: ಸಂತಸ

• **ಉದಯವಾಹಿನಿ, ಬಸವಕಲ್ಯಾಣ**

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ ಶಿವಕುಮಾರ ಅವರಿಗೆ ಬಸವಕಲ್ಯಾಣ ಕ್ಷೇತ್ರದಲ್ಲಿ ಕೆಲವು ಬೇಡಿಕೆಗಳನ್ನು ಇಟ್ಟದ್ದೆವು. ನಮ್ಮ ಕ್ಷೇತ್ರದ ಬೇಡಿಕೆಗಳು ಈಡೇರಿದ್ದಕ್ಕೆ ತುಂಬಾ ಹರ್ಷವಾಗಿದೆ ಎಂದು ಮಾಜಿ ಎಂಎಲಿ ವಿಜಯಸಿಂಗ್ ಬಜೆಟ್ ಮಂಡನೆ ಬಗ್ಗೆ ಸಂತಸ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು, ಕಲ್ಯಾಣ ಕರ್ನಾಟಕ ಸಂಪೂರ್ಣ ಆರೋಗ್ಯ ಅಭಿವೃದ್ಧಿ ಯೋಜನೆಯಡಿ ಬಸವಕಲ್ಯಾಣದ ತಾಲ್ಲೂಕು ಆಸ್ಪತ್ರೆಯನ್ನು ಜಿಲ್ಲಾ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಅಲ್ಲದೇ ತಾಲ್ಲೂಕಿನ ಕೊಂಗಳಿ ಕೆರೆ ತುಂಬಿಸುವ ಯೋಜನೆ ಘೋಷಣೆ ಮಾಡಲಾಗಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ 24 ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 7 ನಗರ ಆರೋಗ್ಯ ಕೇಂದ್ರಗಳ ಆರಂಭಿಸಲಾಗುತ್ತಿದೆ. ಅಲ್ಲದೇ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ 10 ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ. ಇದರಿಂದ ಬಡವರಿಗೆ ಉತ್ತಮ ಆರೋಗ್ಯ ಸೌಲಭ್ಯ ದೊರೆಯಲಿದೆ ಎಂದರು.

ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿರುವ ಬಜೆಟ್ ಸಮಾಜಮುಖಿ ಬಜೆಟ್ ಆಗಿದೆ. ಎಲ್ಲಾ ವರ್ಗಗಳು, ಸಮುದಾಯಕ್ಕೂ ಅನುದಾನ ಕೊಟ್ಟಿದ್ದಾರೆ. ಕಲ್ಯಾಣ ಕರ್ನಾಟಕ ಭಾಗಕ್ಕೆ ಅನೇಕ ಯೋಜನೆ ಘೋಷಣೆ ಮಾಡಿದ್ದಾರೆ.

ಗ್ಯಾರಂಟಿ ಯೋಜನೆಗಳು ಇದ್ದರೂ ಇಷ್ಟು ದೊಡ್ಡ ಮೊತ್ತದ ಬಜೆಟ್ ನೀಡಿರುವ ಸಿದ್ದರಾಮಯ್ಯ ಅವರು ರಾಜ್ಯಕ್ಕೆ ಬರೋಬ್ಬರಿ 4.09 ಲಕ್ಷ ಕೋಟಿ ಬಜೆಟ್ ಕೊಟ್ಟಿದ್ದಾರೆ.

ಕ.ಕ ಭಾಗದಲ್ಲಿ 5,267 ಶಿಕ್ಷಕರ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳುವುದು. ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ 5 ಸಾವಿರ ಕೋಟಿ ಘೋಷಣೆ ಮಾಡಿದ್ದಾರೆ. ಕೃಷಿ ಕ್ಷೇತ್ರ, ಶಿಕ್ಷಣ, ಆರೋಗ್ಯ ಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರಕ್ಕೆ ಅನುದಾನ ನೀಡಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

## ಮಿನಿ ನ್ಯೂಸ್

### ಅಕ್ರಮ ಅಕ್ಕಿ ಬುಲೆರೋ ವಾಹನ ಡಿಕ್ಕಿ ಬೈಕ್ ಸವಾರ ಸ್ಥಳದಲ್ಲಿಯೇ ಸಾವು

• **ಉದಯವಾಹಿನಿ, ವಡಗೇರಾ**

ತಾಲ್ಲೂಕಿನ ಗೋನಾಲ ಶಿವಪೂರ ಮಧ್ಯೆ ಬೆಳಗ್ಗೆ ಭೀಕರ ಅಪಘಾತ ಸ್ಥಳದಲ್ಲಿ ಯುವಕ ಸಾವು ಈ ಘಟನೆಯು ಶನಿವಾರ ಬೆಳಗ್ಗೆ 9. ಗಂಟೆ ಸುಮಾರಿಗೆ ಯುವಕ ಶಿವಪುರ ಗ್ರಾಮದಿಂದ ಗೋನಾಲ ಗ್ರಾಮದ ಕಡೆ ಬರುತ್ತಿರುವಾಗ ಅಕ್ರಮ ಅಕ್ಕಿ ಸಾಗಾಣಿ ಮಾಡುತ್ತಿದ್ದ ಅಪರಿಚಿತ ಬುಲೆರೋ ವಾಹನವು ಎದುರಿಗೆ ಬರುತ್ತಿದ್ದ ಯುವಕನಿಗೆ ರಭಸವಾಗಿ ಗುದ್ದಿರುವುದರಿಂದ ಶಿವಪುರ ಗ್ರಾಮದ ಸೈದಪ್ಪ ತಂದೆ. ಶೇಖಪ್ಪ ವಯಸ್ಸು 20.ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ ಈ ಘಟನೆಗೆ ಪ್ರಮುಖ ಕಾರಣ ಬುಲೆರೋ ವಾಹನದ ಚಾಲಕನ ಅಜಾಗುರುಕತೆ ಚಾಲನೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಚಾಲಕ ತಪ್ಪಿಸಿಕೊಂಡು ಹೋಗುತ್ತಿರುವ ಸಂದರ್ಭದಲ್ಲಿ ಅವನನ್ನು ಬೆನ್ನು ಹತ್ತಿ ಹಿಡಿದು ಗಾಡಿಯನ್ನು ನಿಲ್ಲಿಸಿದ್ದಾರೆ. ಆದರೆ ಚಾಲಕ ತಪ್ಪಿಸಿಕೊಂಡು ಓಡಿ ಹೋಗಿದ್ದಾನೆ ಎಂದು ಅಲ್ಲಿನ ಸಾರ್ವಜನಿಕರು ತಿಳಿಸಿದ್ದಾರೆ. ಈ ಘಟನೆ ಕುರಿತು ವಡಗೇರಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ತನಿಖೆ ಕೈಗೊಂಡಿದ್ದಾರೆ



☛ ಉದಯವಾಹಿನಿ ಚಿತ್ರ

### ನಿರಾಸೆ ಮೂಡಿಸಿದ ಬಜೆಟ್

• **ಉದಯವಾಹಿನಿ, ಬೀದರ್**



ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಶುಕ್ರವಾರ ಮಂಡಿಸಿದ ರಾಜ್ಯ ಬಜೆಟ್‌ನಲ್ಲಿ ಹಿಂದುಳಿದ ಬೀದರ್ ಜಿಲ್ಲೆಗೆ ಸಂಪೂರ್ಣ ಕಡೆಗಣಿಸಲಾಗಿದೆ. ಗಡಿ ಜಿಲ್ಲೆ ಜನರ ನಿರೀಕ್ಷೆಗಳೆಲ್ಲವೂ ಈ ಬಜೆಟ್ ಹುಸಿಗೊಳಿಸಿದೆ.

ಬೀದರ್ ಜಿಲ್ಲೆಯ ಅಭಿವೃದ್ಧಿಗೆ ಪೂರಕವಲ್ಲದ ಬಜೆಟ್ ಇದಾಗಿದೆ ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿ, ದಕ್ಷಿಣಕ್ಷೇತ್ರದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಬೇಸರ ವ್ಯಕ್ತಪಡಿಸಿದ್ದಾರೆ. ಜಿಲ್ಲೆಯಲ್ಲಿ ಅನೇಕ ಅಭಿವೃದ್ಧಿ ಕೆಲಸ ಆಗಬೇಕಿವೆ. ಹಲವಾರು ಹೊಸ ಯೋಜನೆ ಮೂಲಕ ಸಮಗ್ರ ವಿಕಾಸಕ್ಕೆ ಉತ್ತೇಜನ ನೀಡಬೇಕಿತ್ತು. ಆದರೆ ಏನೇನೂ ಸಿಕ್ಕಿಲ್ಲ. ಜಿಲ್ಲೆಯ ಪಾಲಿಗೆ ವಿಶೇಷವಾಗಿ ಸಂಪೂರ್ಣ ಹಳ್ಳಿಗಳಿಂದ ಕೂಡಿದ ಹಾಗೂ ಅಭಿವೃದ್ಧಿಯಲ್ಲಿ ಅತೀ ಹಿಂದುಳಿದ ನನ್ನ ಮತಕ್ಷೇತ್ರ ಬೀದರ್ದಕ್ಷಿಣ ವಿಧಾನ ಸಭೆ ಕ್ಷೇತ್ರದ ಪಾಲಿಗೆ ಈ ಬಜೆಟ್ ಕಹಿ ನೀಡಿದೆ ಎಂದು ತಿಳಿಸಿದ್ದಾರೆ.

### ತರಬೇತಿ ಕಾರ್ಯಾಗಾರ

• **ಉದಯವಾಹಿನಿ, ಧಾರವಾಡ**

ಬೆಂಗಳೂರು ಮಕ್ಕಳ ರಕ್ಷಣಾ ನಿರ್ದೇಶನಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಶಾಲಾ ಮುಖ್ಯೋಪಾಧ್ಯಾಯರಿಗೆ, ವಸತಿ ನಿಲಯದ ನಿಲಯ ಪಾಲಕರಿಗೆ ಮಕ್ಕಳ ರಕ್ಷಣೆಗಾಗಿ ಇರುವ ಮಕ್ಕಳ ರಕ್ಷಣಾ ನೀತಿ-2016, ಬಾಲ ನ್ಯಾಯ ಕಾಯ್ದೆ-2015, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ನಿಷೇಧ ಕಾಯ್ದೆ-2012, ಬಾಲ್ಯ ವಿವಾಹ ನಿಷೇದ ಕಾಯ್ದೆ-2006, ಹಾಗೂ ಮಕ್ಕಳಿಗೆ ಸಂಬಂಧಪಟ್ಟ ವಿವಿಧ ಕಾನೂನುಗಳ ಕುರಿತು ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಆಲೂರು ವೆಂಕಟರಾವ್ ಸಭಾ ಭವನದಲ್ಲಿ ಆಯೋಜಿಸಲಾಗಿತ್ತು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಪರಶುರಾಮ ಎಫ್. ದೊಡ್ಡಮನಿ ಅವರು ಸಸಿಗೆ ನೀರೆರೆಯುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

---

## ಜನಪರ ಹಾಗೂ ಅಭಿವೃದ್ಧಿ ಬಜೆಟ್

• **ಉದಯವಾಹಿನಿ, ಸೇಡಂ**



ಮಹಿಳೆಯರು, ಬಡವರು, ಮಧ್ಯಮ ವರ್ಗ ಹಾಗೂ ರೈತರು ಸೇರಿದಂತೆ ಎಲ್ಲರಿಗೂ ಅನುಕೂಲ ಕಲ್ಪಿಸಿದ ಬಜೆಟ್, ರಾಜ್ಯದ ಅಭಿವೃದ್ಧಿಗೆ ಪೂರಕವಾಗಿದ್ದು, ಪ್ರಗತಿಯ ಸಂಕೇತವಾಗಿದೆ. ಉದ್ಯೋಗ ಸೃಷ್ಟಿ ಮಾಡಲು ಸಹಾಯಕ, ಔದ್ಯೋಗಿಕ ಬೆಳವಣಿಗೆಗೆ ಪೂರಕ, ಕಾರ್ಮಿಕರ ಕಲ್ಯಾಣದ ಬಜೆಟ್ ಆಗಿದೆ,ಪರಿಣಾಮಕಾರಿಯಾಗಿ ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಜೊತೆಗೆ ರಾಜ್ಯದ ಅಭಿವೃದ್ಧಿಗೂ ಮನ್ನಣೆ ಸಿಕ್ಕಿದೆ, ಆಶಾದಾಯಕ, ಬಡವರ ಕಲ್ಯಾಣ, ನಾಡಿನ ಸರ್ವಾಂಗೀಣ ಅಭಿವೃದ್ಧಿಯ ಬಜೆಟ್ ಎಂದು ಸೋನಿಯಾ ಗಾಂಧಿ ಬ್ರಿಗೇಡ್ ಆಲ್ ಇಂಡಿಯಾ ಕಾರ್ಯಧ್ಯಕ್ಷರು ಕರ್ನಾಟಕ, ಹಾಗೂ ಗ್ಯಾರಂಟಿ ಯೋಜನೆ ಸಮಿತಿ ಸದಸ್ಯರಾದ ಮಹಿಮುದಸಾಬ ಮದನಾ ರವರು ಪತ್ರಿಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತೊಗರಿ, ಹತ್ತಿ ಬೆಳೆಗೆ ಬೆಂಕಿ

• **ಉದಯವಾಹಿನಿ, ನವಲಗುಂದ**

ಪಟ್ಟಣದ ಹೊರವಲಯ ಮುರಾರ್ಜಿ ವಸತಿ ಶಾಲೆ ಪಕ್ಕ ಇರುವ ಪ್ರಕಾಶ ಶಿಗ್ಲಿ ಅವರ 3ಎಕರೆ ಜಮೀನಿನಲ್ಲಿ ಸಂಗ್ರಹಿಸಿಟ್ಟದ್ದ ಹೊಟ್ಟಿನ ಬಣವಿ ಹಾಗೂ ತೊಗರಿಬೇಳೆ, ಹತ್ತಿಬೇಳೆ ಶುಕ್ರವಾರ ಮಧ್ಯಾಹ್ನ ಬೆಂಕಿಗಾವುತಿಯಾಗಿದೆ. ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳೀಯ ಯುವಕರ ಗುಂಪು ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.


☛ ಉದಯವಾಹಿನಿ ಚಿತ್ರ

---

### ರಾಜಕಾರಣ ಮಾಡಬೇಕಾದರೆ ನಾನು ಎಲ್ಲರ ಬಳಿ ಹೋಗಬೇಕಲ್ಲ: ಶ್ರೀರಾಮುಲು

# ಪಕ್ಷ ವಿರೋಧಿಸುವುದಾರೆ ಅದು ಪಕ್ಷದ ನಿರ್ಧಾರ

• **ಉದಯವಾಹಿನಿ, ಬಳ್ಳಾರಿ**

ರಾಜ್ಯದ ಪ್ರಸಕ್ತ ಬಜೆಟ್ ನಲ್ಲಿ ಸಿಎಂ ಸಿದ್ದರಾಮಯ್ಯ ಅವರು ಅಲ್ಪ ಸಂಖ್ಯಾತರಿಗೆ ಶೇ 20ಮೀಸಲು ಮಾಡಿರುವುದನ್ನು ನಾನು ವಿರೋಧಿಸಲ್ಲ. ನಾನು ಎಲ್ಲರನ್ನೂ ಸಮಾನರಾಗಿ ನೋಡುವೆ. ವಿಶಾಲವಾದ ಹೃದಯ ಇರಬೇಕು. ಇದನ್ನು ನಮ್ಮಪಕ್ಷದವರು ವಿರೋಧಿಸಿದರೆ ಅದು ಅವರ ವಯಕ್ತಿಕ ವಿಚಾರ. ಪಕ್ಷ ವಿರೋಧಿಸುವುದಾರೆ ಅದು ಪಕ್ಷದ ನಿರ್ಧಾರ ನಾನು ಆ ಬಗ್ಗೆ ಉತ್ತರಿಸಲ್ಲ.

ರಾಜಕಾರಣ ಮಾಡಬೇಕಾದರೆ ನಾನು ಎಲ್ಲರ ಬಳಿ ಹೋಗಬೇಕಲ್ಲವೆ ಎಂದು ಬಿಜೆಪಿ ನಾಯಕ ಮಾಜಿ ಬಿ.ಶ್ರೀರಾಮುಲು ಹೇಳಿದ್ದಾರೆ.

ಅವರಿಂದು ಇಲ್ಲಿನ ತಮ್ಮ ನಿವಾಸದಲ್ಲಿ ಮಾಧ್ಯಮ ಗೋಷ್ಠಿ ನಡೆಸಿ ಮಾತನಾಡುತ್ತಿದ್ದರು. ರಾಜ್ಯದಲ್ಲಿ ಹಣಕಾಸಿನ ಪರಿಸ್ಥಿತಿ ದಿವಾಳಿಯಾಗಿದೆ. ಆದಾಯ ಕ್ರೂಡೀಕರಣದಲ್ಲಿ ವಿಫಲರಾಗಿದ್ದಾರೆ. ಬಳ್ಳಾರಿಯಲ್ಲಿ ಹಳೇ ಯೋಜನೆಗಳನ್ನು ಪೂರ್ಣಗೊಳಿಸಲು ಆಗಿಲ್ಲ ಎಂದರು.

ನಾಲ್ಕು ಲಕ್ಷ ಕೋಟಿ ರೂಗಳ ಬೃಹತ್ ಬಜೆಟ್ ಮಂಡಿಸಿದರೂ, ರಾಜಕೀಯ, ಸ್ವಾರ್ಥಕ್ಕಾಗಿ ಇದು ಅಭಿವೃದ್ಧಿ ರಹಿತವಾಗಿದೆ. ಬಡವರಿಗೆ ಅನುಕೂಲ ಇಲ್ಲ. 51 ಸಾವಿರ ಕೋಟಿ ರೂ ಗ್ಯಾರಂಟಿ ಯೋಜನೆಗೆ ಮೀಸಲಿರಿಸಿದ್ದಾರೆ.

ಆದರೂ ಶಕ್ತಿಯೋಜನೆಯ ಬಾಬತ್ತನ್ನು ನೀಡದೆ. ಇಲಾಖೆಯ ಸಿಬ್ಬಂದಿಗೆ ನೀಡಬೇಕಾದ 900 ಕೋಟಿ ರೂ ಪಿಎಫ್. ಹಣವನ್ನು ಸಹ ಪಾವತಿಮಾಡಿಲ್ಲ. ಹೊಸ ಬಸ್ ಖರೀದಿ ಮಾಡಿಲ್ಲ, ಹಳೇ ಬಸ್ ಗಳನ್ನೇ ಓಡಿಸುತ್ತಿದೆ.

ಕೃಷಿ, ಆರೋಗ್ಯ ಇಲಾಖೆಯಲ್ಲಿ ಸೌಲಭ್ಯಗಳ ಕೊರತೆ ಕಾಡುತ್ತಿದೆ. ಸಾಂಕ್ರಾಮಿಕ ರೋಗಗಳು ಉಲ್ಬಣಗೊಳ್ಳುತ್ತಿವೆಂದರು. ಎಐಸಿಸಿ ನಾಯಕ ರಾಹುಲ್ ಗಾಂಧಿ ಭರವಸೆ ನೀಡಿದ್ದ ಜೀನ್ಸ್ ಅಪರೆಲ್ ಪಾರ್ಕ್ ಆಗಲಿಲ್ಲ, ಬಜೆಟ್ ನಲ್ಲಿ ಪ್ರಸ್ತಾಪ ಇಲ್ಲ, ಜಮೀನು ಗುರುತಿಸಿದೆ ಎನ್ನುವುದಾದರೆ ಇಷ್ಟು ಸಾಕೆ. ಯೋಜನೆಯನ್ನು ಜಾರಿಗೆ ತರಲು ನಾಯಕರಿಗೆ ಹಿಡಿತವಿದ್ದಂತೆ ಕಾಣುತ್ತಿಲ್ಲವೆಂದರು. ಸಮಾನಾಂತರ ಜಲಾಶಯ ವಿಷಯವೂ ಬರೀ ಚರ್ಚೆಗೆ ಸೀಮಿತವಾ ಗಿದೆ. ಬೆಂಬಲ ಬೆಲೆಯ ಖರೀದಿ ಕೇಂದ್ರಗಳ ಆರಂಭವಾಗಿಲ್ಲ. ಒಣ ಮೆಣಸಿನಕಾಯಿ ಮಾರುಕಟ್ಟೆ ಆಗಲಿಲ್ಲ.

**ಮಂತ್ರಿಯಾಗಿ ಬರ್ತಾರಂತೆ:** ಗ್ರಾಮೀಣ ಕ್ಷೇತ್ರದ ಶಾಸಕರು ಅದ್ಯಾವುದೋ ಕಾರಣಕ್ಕೆ ಸಚಿವ ಸ್ಥಾನ ಕಳೆದುಕೊಂಡರು. ಮಂತ್ರಿ ಆಗುವವರೆಗೆ ಕ್ಷೇತ್ರಕ್ಕೆ ಬರಲ್ಲವಂತೆ. ಅಲ್ಲಿಯವರೆಗೆ ಕ್ಷೇತ್ರದ ಜನರ ಪರಿಸ್ಥಿತಿ ಏನು. ನಾನಂತೂ ಓಡಾಡುವೆ. ಜಿಲ್ಲಾ ಮಂತ್ರಿ ಸಹ ಬರಲ್ಲ.

ಆಡಳಿತ ಪಕ್ಷ ಸಂಪೂರ್ಣ ವಿಫಲವಾಗಿದೆಂದರು. ಸುದ್ದಿಗೋಷ್ಟಿಯಲ್ಲಿ ಬಿಜೆಪಿ ಮುಖಂಡ ಎಸ್. ಗುರುಲಿಂಗನಗೌಡ, ಬುಡಾ ಮಾಜಿ ಅಧ್ಯಕ್ಷ ಪಿ.ಪಾಲಣ್ಣ, ಪಾಲಿಕೆ ಸದಸ್ಯರಾದ ಎಂ.ಗೋವಿಂದರಾಜುಲು. ಕೆ.ಹನುಂಮತಪ್ಪ ಮೊದಲಾದವರು ಇದ್ದರು.

**ರದ್ದು ಮಾಡಬೇಕು**

ಎಸ್ಸಿ ಎಸ್ಟಿಯ ಮೀಸಲಿನ 25 ಸಾವಿರ ಕೋಟಿ ರೂ ಹಣವನ್ನು ಬಳಕೆ ಮಾಡಿಕೊಂಡಿದ್ದಾರೆ. ಈ ಬಜೆಟ್ ನಲ್ಲಿ ಸಹ 15 ಸಾವಿರ ಕೋಟಿ ರೂ ಎಸ್ಸಿಪಿ ಎಸ್ಟಿಪಿ ಹಣವನ್ನು ಗ್ಯಾರಂಟಿ ಯೋಜನೆಗೆ ಬಳಸಿಕೊಂಡಿದ್ದಾರೆ. ಇದರಿಂದ ಎಸ್ಸಿ, ಎಸ್ಟಿಗಳಿಗೆ ಭಾರಿ ಅನ್ಯಾಯವಾಗಿದೆ. 7ಸಿಯನ್ನು ರದ್ದು ಮಾಡಬೇಕು ಎಂದರು.


☛ ಉದಯವಾಹಿನಿ ಚಿತ್ರ

**ಹೆಚ್ಚಿದ ಸಾಲದ ಗಾತ್ರ**

ರಾಜ್ಯ ಸರ್ಕಾರದ ಸಾಲ 7 ಲಕ್ಷ ಕೋಟಿಗೆ ಹೆಚ್ಚಿದೆ. ರಾಜ್ಯದ ಪ್ರತಿಯೊಬ್ಬರ ತಲೆ ಮೇಲೆ ಒಂದು ಲಕ್ಷ ರೂ ಸಾಲ ಹೊರಿಸಲಾಗಿದೆ. ಸಾಲ ಮಾಡಿ ತುಪ್ಪ ತಿಂದಂತೆ ಇದೆಂದರು.

**ಮುಂದಿನ ದಿನದಲ್ಲಿ**

ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ನಿನ್ನೆ ಬೆಂಗಳೂರಿಗೆ ಬಂದಾಗ ಭೇಟಿಮಾಡಲು ಆಗಿಲ್ಲ. ನಾನು ರಾಷ್ಟ್ರೀಯ ನಾಯಕರ ಜೊತೆ ಸಂಪರ್ಕದಲ್ಲಿರುವ. ದೆಹಲಿಗೆ ಹೋಗಲೇ ಬೇಕು ಎಂದೇನಿಲ್ಲ. ನಿನ್ನೆ ಅವರು ಯಾರನ್ನು ಭೇಟಿ ಮಾಡಿಲ್ಲ. ಮುಂದಿನ ದಿನದಲ್ಲಿ ದೆಹಲಿಗೆ ಹೋಗಿ ಭೇಟಿ ಮಾಡುವೆ. ಜನಾರ್ಧನರೆಡ್ಡಿ ಭೇಟಿ ಮಾಡಿದ್ದರೆಂದರೆ. ಅವರು ಶಾಸಕರಾಗಿದ್ದಾರೆ ಭೇಟಿ ಯಾಗಿರಬಹುದೆಂದರು.

---

• **ಉದಯವಾಹಿನಿ, ವಡಗೇರಾ**

### ತಾಲ್ಲೂಕಿಗೆ ಅನುದಾನ ತರವಲ್ಲಿ ಶಾಸಕರು ವಿಫಲ

# ಅಭಿವೃದ್ಧಿ ಶೂನ್ಯ: ಶರಣು ಆರೊಪ

ನೂತನ ವಡಗೇರಾ ತಾಲ್ಲೂಕಿನ ಅಭಿವೃದ್ಧಿಗೆ ಅನುದಾನ ತರುವಲ್ಲಿ ಹಾಗೂ ತಾಲ್ಲೂಕಿಗೆ ಸಂಬಂಧಿಸಿದ ವಿವಿಧ ತಾಲ್ಲೂಕು ಕಚೇರಿಗಳು ಶಾಲಾ ಕಾಲೇಜು ಮಂಜೂರು ಮಾಡಿಸುವಲ್ಲಿ ಶಾಸಕರು ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎಂದು ರಾಜ್ಯ ರೈತ ಸಂಘದ ತಾಲೂಕು ಗೌರವಾಧ್ಯಕ್ಷ ಶರಣು ಜಡಿ ಆರೊಪಿಸಿದ್ದಾರೆ.

ಈಗಾಗಲೇ ತಾಲ್ಲೂಕು ಕೇಂದ್ರ ಎಂದು ಘೋಷಣೆಯಾಗಿ ಸುಮಾರು ಏಳು ವರ್ಷಗಳ ಕಳೆದಿವೆ ಆದರೆ ಅಭಿವೃದ್ಧಿ ಮಾತ್ರ ಶೂನ್ಯ ಜನರಿಂದ ಆಯ್ಕೆಯಾದ ಶಾಸಕರುಗಳು ಮಾತ್ರ ತಮ್ಮ ಅಭಿವೃದ್ಧಿಯನ್ನೇ ಮಾಡಿಕೊಂಡಿದ್ದಾರೆ ಹೊರೆತು ತಾಲೂಕಿನ ಅಭಿವೃದ್ಧಿಗೆ ಯಾರು ಮುಂದಾಗಿಲ್ಲ ತಾಲ್ಲೂಕು ಕೇಂದ್ರದಲ್ಲಿ ಪದವಿಪೂರ್ವ ಮತ್ತು ಪದವಿ ಮಾಹಾವಿದ್ಯಾಲಯವೆ ಇಲ್ಲ ಶೈಕ್ಷಣಿಕವಾಗಿ ತಾಲ್ಲೂಕು ಅತ್ಯಂತ ಹಿಂದುಳಿದಿದೆ ಗ್ರಾಮೀಣ ಭಾಗದಲ್ಲಿ ಶಾಲಾ ಕಟ್ಟಡಗಳ ಕೊರತೆ ಶಿಕ್ಷಕರ ಕೊರತೆ ತುಂಬಾ ಇದೆ ಗ್ರಾಮೀಣ ಭಾಗದಲ್ಲಿ ಹದಗೆಟ್ಟ ರಸ್ತೆಗಳು ಕುಡಿಯುವ ನೀರಿನ ಸಮಸ್ಯೆ ಕಾಡುತ್ತಿದೆ ಆದರೆ ಶಾಸಕರು ಬರಿ ಬಾಯಿ ಮಾತಲ್ಲಿ ತಾಲ್ಲೂಕು ಅಭಿವೃದ್ಧಿ ಮಾಡುತ್ತೇನೆ.

ತಾಲ್ಲೂಕು ಕಚೇರಿಗಳು ಆರಂಭಿಸಲು ಪ್ರಯತ್ನಿಸುತ್ತೇನೆ ಅಂತ ಹೇಳುತ್ತಿದ್ದಾರೆ ಹೊರತು ಇಲ್ಲಿಯವರೆಗೆ ಯಾವುದೇ ಕೆಲಸ ಕಾರ್ಯಗಳು ಆಗಿಲ್ಲ ಪ್ರಜಾಸೌಧ ಕಟ್ಟಡಕ್ಕೆ ಅಸ್ತು ಎಂದು ಹೇಳಿದ್ದಾರೆ ಅಂತಾರೆ ಅದು ಇನ್ನು ಆರಂಭವಾಗುವುದು ಯಾವಾಗ ಗೊತ್ತಿಲ್ಲ ತಾತ್ಕಾಲಿಕವಾಗಿ ತಾಲ್ಲೂಕು ಕಚೇರಿಗಳನ್ನು ಖಾಸಗಿ ಕಟ್ಟಡಗಳು ಅಥವಾ ಯುಕೆಪಿ ಕಟ್ಟಡಗಳಲ್ಲಿ ಆರಂಭಿಸಲು ಕ್ರಮ ಕೈಗೊಳ್ಳಬೇಕು ಶಾಸಕರು ತಾಲ್ಲೂಕಿನ ಜನತೆಯ ಮುಗ್ದತೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ.

ನೂತನ ತಾಲ್ಲೂಕು ಹುಣಸಗಿ, ಗುರುಮಿಟ್ಕಲನಲ್ಲಿ ಈಗಾಗಲೇ ಕೆಲವು ತಾಲ್ಲೂಕು ಕಚೇರಿಗಳು ಆರಂಭವಾಗಿವೆ.


☛ ಉದಯವಾಹಿನಿ ಚಿತ್ರ

> ಆದರೆ ವಡಗೇರಾ ತಾಲ್ಲೂಕಿಗೆ ಮಾತ್ರ ಮಲತಾಯಿ ಧೋರಣೆ ಸರಿಯಲ್ಲ ಶಾಸಕರು ತಾಲ್ಲೂಕಿಗೆ ಹೆಚ್ಚಿನ ಅನುದಾನ ತಂದು ಅಭಿವೃದ್ಧಿ ಪಡಿಸುತ್ತಾರೆ ಎಂಬ ನಿರೀಕ್ಷೆಯಲ್ಲಿದ್ದ ತಾಲ್ಲೂಕಿನ ಜನತೆಗೆ ನಿರಾಸೆಯಾಗಿದೆ ಶಾಸಕರು ಖುದ್ದಾಗಿ ಗ್ರಾಮೀಣ ಪ್ರದೇಶಗಳಿಗೆ ತೆರಳಿ ಜಲವಂತ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಕೆಲಸಕ್ಕೆ ಮುಂದಾಗ ಬೇಕಿದೆ ಆದಷ್ಟು ಬೇಗನೆ ತಾಲ್ಲೂಕಿಗೆ ಸಂಬಂಧಿಸಿದ ಕಚೇರಿಗಳನ್ನು ಆರಂಭಿಸಲು ಮುಂದಾಗಬೇಕು ಒಂದು ವೇಳೆ ನಿರ್ಲಕ್ಷ್ಯ ವಹಿಸಿದ್ದಲ್ಲಿ ರಾಜ್ಯ ರೈತ ಸಂಘ ಹಸಿರು ಸೇನೆ ವತಿಯಿಂದ ಶಾಸಕರ ವಿರುದ್ಧ ಉಗ್ರ ಹೋರಾಟ ಮಾಡಬೇಕಾಗುತ್ತದೆ
> -ಶರಣು ಜಡಿ, ತಾಲ್ಲೂಕು ಗೌರವಾಧ್ಯಕ್ಷ

## ಮಳಿಗೆಗಳ ಹರಾಜು ಪ್ರಕ್ರಿಯೆ ರದ್ದುಗೊಳಿಸಲು ಆಗ್ರಹ

• **ಉದಯವಾಹಿನಿ ಚಿತ್ತಾಪುರ**

ಪಟ್ಟಣದ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಎಪಿಎಂಸಿ ವಾಣಿಜ್ಯ ಮಳಿಗೆಗಳನ್ನು ಮೊದಲು ಅವುಗಳನ್ನು ಖಾಲಿ ಮಾಡಿಸಿ ನಂತರ ಹರಾಜು ಪ್ರಕ್ರಿಯೆ ನಡೆಸಬೇಕು ಅಲ್ಲಿಯವರೆಗೆ ಈ ಪ್ರಕ್ರಿಯೆಯನ್ನು ರದ್ದುಪಡಿಸಬೇಕೆಂದು ಆಗ್ರಹಿಸಿ ಕರವೇ ಟಿ ಎನ್ ನಾರಾಯಣಗೌಡರ ಬಣದ ತಾಲ್ಲೂಕಾಧ್ಯಕ್ಷ ಚಂದರ ಚವ್ಹಾಣ ಅವರು ಎಪಿಎಂಸಿ ಕಾರ್ಯದರ್ಶಿಗೆ ಮನವಿ ಪತ್ರ ಸಲ್ಲಿಸಿದ್ದರು. ಚಿತ್ತಾಪುರ ಪಟ್ಟಣದ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವಾಣಿಜ್ಯ ಮಳಿಗೆಗಳು ಹಂಚಿಕೆ , ಹರಾಜು ಪ್ರಕ್ರಿಯೆ ನಡೆಯುತ್ತಿದೆ ಅಂಗಡಿಗಳ ಸಂಖ್ಯೆ 3,7,8 ಅಂಗಡಿಗಳು ಸರ್ಕಾರದ ನಿಯಮದ ವಿರುದ್ಧ ಅಂಗಡಿಗಳನ್ನು ಖಾಲಿ ಮಾಡಲಾರದೆ ಹರಾಜು ಪ್ರಕ್ರಿಯೆ ಮಾಡುತ್ತಿರುವುದು ಖಂಡನೆ ಎಂದು ಹೇಳಿದರು. ಅಂಗಡಿ ಮುಂಭಾಗ ಶೆಡ್ಡಿನಲ್ಲಿ ಯಥಾವ ತ್ತಾಗಿ ನಡೆಯುತ್ತಿರುವ ಹೋಟೆಲ್‌ಗಳನ್ನು ಸಂಪೂರ್ಣ ಬಂದ್ ಮಾಡಿಸಿ ಹರಾಜು ಪ್ರಕ್ರಿಯೆಯನ್ನು ಮುಂದುವರಿಸಬೇಕು. ಮತ್ತು ಹರಾಜು ಪ್ರಕ್ರಿಯೆ ಮುಗಿದ ಮೇಲೆ ಹರಾಜು ಮಾಡಿದ ಬಿಡುಗಾರರಿಗೆ ಅಂಗಡಿಯ ಬೀಗ ಕೊಡುವವರೆಗೆ ಯಾವುದೇ ತರದ ಅಂಗಡಿಯ ಅಂಗಳದಲ್ಲಿ ಹೋಟೆಲ್ ಆಗಲಿ ಮತ್ತು ಇನ್ನಿತರ ಯಾವುದೇ ಪ್ರಕ್ರಿಯೆ ಮಾಡದೆ ತಡೆಹಿಡಿದು ಅಂಗಡಿಗಳ ಬೀಗ ಕೊಟ್ಟ ನಂತರ ಬಿಡುಗಾರರು ತಮ್ಮ ಅಂಗಡಿಗಳನ್ನು ಪ್ರಾರಂಭ ಮಾಡಬೇಕು ಎಂದು ತಿಳಿಸಿದರು.

---

## ಕುಂಬಾರರಿಗೆ ಆರ್ಥಿಕ ಭದ್ರತೆ ದೊರೆಯಲಿ

• **ಉದಯವಾಹಿನಿ, ಕಲಬುರಗಿ**

ದೇಶದ ಗೃಹ ಕೈಗಾರಿಕೆಯಲ್ಲಿ ಕುಂಬಾರಿಕೆ ಒಂದು. ಈ ವೃತ್ತಿಗೆ ಮಣ್ಣೆ ಆಧಾರ. ಮಣ್ಣಿನೊಂದಿಗೆ ಬೆರೆತು ಮಾಡುವ ಪವಿತ್ರ ಕಾಯಕ ಕುಂಬಾರಿಯಾಗಿದೆ. ಆಧುನಿಕತೆಯಿಂದಾಗಿ ಕುಂಬಾರಿಕೆಗೆ ವೃತ್ತಿಗೆ ತೊಂದರೆಯಾಗುತ್ತಿದೆ. ಕಷ್ಟದ ಸ್ಥಿತಿಯಲ್ಲಿಯೂ ವೃತ್ತಿಯನ್ನು ಕಾಪಾಡಿಕೊಂಡು ಬರುತ್ತಿರುವ ವೃತ್ತಿ ಕುಂಬಾರರಿಗೆ ಆರ್ಥಿಕ ಭದ್ರತೆಯ ಯೋಜನೆಗಳು ಸಮರ್ಪಕವಾಗಿ ದೊರೆಯಬೇಕಾಗಿದೆ ಎಂದು ಸಮಾಜ ಸೇವಕ ಎಚ್.ಬಿ.ಪಾಟೀಲ ಹೇಳಿದರು.

ನಗರದ ಆಳಂದ ರಸ್ತೆಯ ಶೆಟ್ಟಿ ಟಾಕೀಸ್ ಸಮೀಪವಿರುವ ವೃತ್ತಿ ಕುಂಬಾರ ಶಿವಶರಣಪ್ಪ ಕುಂಬಾರ ಅವರಲ್ಲಿ ಅವರಿಗೆ 'ಬಸವೇಶ್ವರ ಸಮಾಜ ಸೇವಾ ಬಳಗದ ವತಿಯಿಂದ ಶನಿವಾರ ಜರುಗಿದ ಗೌರವ ಸತ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು. ಈಗಾಗಲೇ ಬಿಸಿಲಿನ ಪ್ರಖರತೆ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ತಂಪಾದ ನೀರು ಸೇವಿಸಬೇಕು ಎಂಬು ಎಲ್ಲರ ಬಯಕೆಯಾಗುತ್ತದೆ. ಫ್ರಿಜ್‌ನಲ್ಲಿ ಸೇಖರಿಸಿ ಸೇವಿಸಿದ ನೀರು ದೇಹಕ್ಕೆ ಹಿತಕರವಲ್ಲ. ಬದಲಿಗೆ ಮಣ್ಣಿನ ಮಡಿಕೆಯಲ್ಲಿನ ನೀರು ಸೇವಿಸಬೇಕು. 'ಬಡವರ ಫ್ರಿಜ್' ಎಂದು ಕರೆಸಿಕೊಳ್ಳುವ ಮಡಿಕೆಗಳು ಕಡಿಮೆ ಬೆಲೆಗೆ ದೊರೆಯುತ್ತವೆ. ಇವುಗಳನ್ನು ಖರೀದಿ ಮಾಡುವುದರಿಂದ ಕುಂಬಾರಿಕೆ ವೃತ್ತಿಗೆ ಸಹಾಯ ಮಾಡಿದಂತಾಗುತ್ತದೆ. ಹಿಂದಿನ ಕಾಲದಲ್ಲಿ ಹಿರಿಯರು ಅಡಿಗೆ ಮಾಡಲು, ನೀರು ಕಾಯಿಸಲು, ನೀರು ಕುಡಿಯಲು ಮಡಿಕೆಗಳನ್ನು ಬಳಸುತ್ತಿದ್ದರು. ಇದರಿಂದ ಅವರು ಆರೋಗ್ಯವಾಗಿದ್ದರು ಎಂದರು.

ಕಾರ್ಯಕ್ರಮದಲ್ಲಿ ಶಿವಶರಣಪ್ಪ ಕುಂಬಾರ, ಸಮಾಜ ಸೇವಕ ಶಿವಯೋಗೆಪ್ಪಾ ಎಸ್.ಬಿರಾದಾರ, ಪ್ರಮುಖರಾದ ಚಂದ್ರಕಾಂತ ಸಾವಳಗಿ, ದಿಲಿಪ ಕಿರಸಾವಳಗಿ, ಮಹಾಂತೇಶ ಹರವಾಳ, ಅಪ್ಪು ಸೇರಿದಂತೆ ಇನ್ನಿತರರಿದ್ದರು.

---

### ಒಂದು ವಾರ ಹತ್ತು ದಿನ ಕಾಯಬೇಕಿಲ್ಲಾ ಒಂದೇ ದಿನದಲ್ಲಿ ಟಿಸಿ ರಿಪೇರಿ ಮಾಡಿಕೊಡುತ್ತಾರೆ: ಸಿ.ಎಸ್ ನಾಡಗೌಡ

# ವಿದ್ಯುತ್ ಪರಿವರ್ತಕಗಳ ದುರಸ್ತಿ ಹಾಗೂ ಪರೀಕ್ಷಣ ಕೇಂದ್ರ ಲೋಕಾರ್ಪಣೆ

• **ಉದಯವಾಹಿನಿ, ಮುದ್ದೇಬಿಹಾಳ**

ರೈತರಿಗೆ ಉಪಯೋಗವಾಗುವ ನಿಟ್ಟಿನಲ್ಲಿ ಮುದ್ದೇಬಿಹಾಳದಲ್ಲಿ ವಿದ್ಯುತ್ ಪರಿವರ್ತಕಗಳ ದುರಸ್ತಿ ಹಾಗೂ ಪರೀಕ್ಷಣಾ ಕೇಂದ್ರ ಉದ್ಘಾಟನೆ ಮಾಡಲಾಗಿದೆ.

ಇನ್ನೂ ರೈತರು ವಿಜಯಪುರ ಬಾಗೇವಾಡಿಗೆ ಹೋಗಿ ಒಂದು ವಾರ ಹತ್ತು ದಿನ ಕಾಯಬೇಕಿಲ್ಲಾ ಒಂದೇ ದಿನದಲ್ಲಿ ಟಿಸಿ ರಿಪೇರಿ ಮಾಡಿಕೊಡುತ್ತಾರೆ ಎಂದು ಶಾಸಕ ಕೆಎಸ್ಡಿ ನಿಗಮದ ಅಧ್ಯಕ್ಷ ಸಿ.ಎಸ್ ನಾಡಗೌಡ ಅಪ್ಪಾಜಿ ಹೇಳಿದರು.

ಅವರು ಶನಿವಾರ ಪಟ್ಟಣದ ಹೆಸ್ಕಾಂ ಕಚೇರಿಯಲ್ಲಿ ವಿದ್ಯುತ್ ಪರಿವರ್ತಕಗಳ ದುರಸ್ತಿ ಪರೀಕ್ಷಣ ಕೇಂದ್ರ ಉದ್ಘಾಟಿಸಿ ಮಾತನಾಡಿದರು.

ರೈತರು ಸೋಲಾರ ಅಳವಡಿಸಿಕೊಳ್ಳಲು ಸರಕಾರ ಸಬ್ಸಿಡಿ ನೀಡುತ್ತಿದೆ ಈ ಬಾರಿಯ ಬಜೆಟ್‌ನಲ್ಲಿ ನೀರಾವರಿಗೆ ಹೆಚ್ಚು ಒತ್ತು ನೀಡಲಾಗಿದೆ, ಎಲ್ಲಾ ವರ್ಗರಹಿತ ಎಲ್ಲರಿಗೂ ಅನುಕೂಲವಾಗುವ ಸಮಾಜಹಿತ ಕಾರ್ಯಕ್ರಮಗಳನ್ನು ಸರಕಾರ ನೀಡಿದೆ ಈ ಹಿಂದೆ ತಾಲ್ಲೂಕಿಗೆ ಕೃಷಿ ಸಂಶೋಧನಾ ಕೇಂದ್ರ ತಂದಿದ್ದೆ ನಾನು ಸೋತ ನಂತರ ಅದನ್ನು ಕೈ ಬಿಟ್ಟರು ಈಗ ಮತ್ತೆ ಕೃಷಿ ಸಂಶೋಧನಾ ಕೇಂದ್ರ ಪುನಃ ಬಜೆಟ್ ನಲ್ಲಿ ಮಂಡನೆಯಾಗಿದೆ.

ಶೀಘ್ರ ಸಂಶೋಧನ ಕೇಂದ್ರ ಆರಂಭವಾಗುತ್ತದೆ ಅದಕ್ಕೆ 70 ಎಕರೆ ನಿವೇಶನದ ಅನ್ವೇಷಣೆ ನಡೆದಿದೆ ಎಂದರು.

ಬಾಗೇವಾಡಿ ಕಾರ್ಯನಿರ್ವಾಹಕ ಅಭಿಯಂತರ ಸಿದ್ದರಾಮ ಬಿರಾದಾರ ಮಾತನಾಡಿ ಪ್ರತಿ ಮನೆಗೆ 1 ಕೆಜಿ ವ್ಯಾಟ್ ವಿದ್ಯುತ್ ಪಡೆಯಲು ಸೋಲಾರ್ ವ್ಯವಸ್ಥೆ ಮಾಡಿಕೊಳ್ಳಲು 60 ಸಾವಿರ ರೂ ತುಂಬಿದರೆ 30 ಸಾವಿರ ರೂ ಸಬ್ಸಿಡಿ ಇದೆ ಎಂದು ಮಾಹಿತಿ ನೀಡಿದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರು ತಾರನಾಳ, ಶಿವಶಂಕರಗೌಡ ಹಿರೇಗೌಡರ, ಸಿ ಬಿ ಅಸ್ಕಿ, ವೈ ಹೆಚ್ ವಿಜಯಕರ,ಬಾಪುರಾವ ದೇಸಾಯಿ,ಪ್ರಭುರಾಜ ಕಲಬುರಗಿ ,ಪಿಂಟು ಸಾಲಿಮನಿ,ಶರಣು ಸಜ್ಜನ, ವಿದ್ಯುತ್ ಇಲಾಖೆಯ ಆರ್ ಎನ್ ಹಾದಿಮನಿ, ಎಂಎಸ್ ತೆಗ್ಗಿನಮಠ, ಬಿ ಎಸ್ ಯಲಗೋಡ, ಎಸ್ ಎಂ ಆರೆಶಂಕರ ಅಯ್ಯನಗೌಡ ಬಿರಾದಾರ ಸೇರಿದಂತೆ ವಿದ್ಯುತ್ ಇಲಾಖೆಯ ಗುತ್ತಿಗೆದಾರ ಸಂಘದ ಪದಾಧಿಕಾರಿಗಳು ಹೆಸ್ಕಾಂ ನೌಕರರು ಉಪಸ್ಥಿತರಿದ್ದರು.



☛ ಉದಯವಾಹಿನಿ ಚಿತ್ರ

**ಶಾಸಕರಿಂದ ಕ್ಷೌರಿಕ ವೃತ್ತಿಗೆ ಅಪಮಾನ**

ಶಾಸಕರು ಭಾಷಣದ ವೇಳೆ ನಾವು ವಿದ್ಯುತ್‌ಗೆ ಅವಲಂಬಿತರಾಗಿದ್ದೇವೆ ಇಂದು ಆಸ್ಪತ್ರೆಗೆ ಹೋದರು ಚೆಕಪ್ ಮಾಡಲು ವಿದ್ಯುತ್ ಬೇಕು ಹಾಗೆ ಕ್ಷೌರಿಕ ಅಂಗಡಿಗೆ ಹೋದರು ವಿದ್ಯುತ್ ಬೇಕು ಎನ್ನುವ ಬದಲು ಹಜಾಮತಿ ಅಂಗಡಿಗೆ ಹೋದರು ಹಜಾಮತಿ ಮಾಡಲು ಕರೆಂಟ್ ಬೇಕು ಎನ್ನುವ ಮೂಲಕ ಕ್ಷೌರಿಕ ವೃತ್ತಿಗೆ ಅವಮಾನಕರ ಪದಬಳಕೆ ಮಾಡಿದರು ಇದನ್ನು ಗೌರವಯುತ ಕ್ಷೌರಿಕ ವೃತ್ತಿ ಮಾಡುವರಿಗೆ ಇದರಿಂದ ನೋವಾಗಿದೆ ಎಂದು ಸವಿತಾ ಸಮಾಜದ ಅಧ್ಯಕ್ಷ ರವಿ ತೇಲಂಗಿ ಮಾಧ್ಯಮಗಳಿಗೆ ಮುಂದೆ ಶಾಸಕರು ಈ ಬಗ್ಗೆ ಕ್ಷಮೆಯಾಚಿಸಬೇಕು ಕ್ಷೌರಿಕ ವೃತ್ತಿಗೆ ಅಪಮಾನ ಪದ ಬಳಕೆ ಶಾಸಕರು ಮಾಡಿದ್ದು ತಪ್ಪು ಅವರನ್ನು ಅನುಸಿರಿಸುವ ಜನರು ನಾಳೆ ಹಾಗೆ ನಮ್ಮನ್ನು ನಮ್ಮ ವೃತ್ತಿಯನ್ನು ಹಿಯ್ಯಾಳಿಸುತ್ತಾರೆ ಕ್ಷೌರಿಕ ವೃತ್ತಿಗೆ ತನ್ನದೆಯಾದ ಇತಿಹಾಸವಿದೆ ಸರಕಾರ ಗಜೆಟ್‌ನಲ್ಲಿ ಹಜಾಮ ಪದಬಳಕೆ ತಗೆದು ಹಾಕಿದೆ ಇತ್ತಿಚೆಗೆ ಜನಪ್ರತಿನಿಧಿಗಳು ಸೇರಿದಂತೆ ಹಲವರು ಕುಲವೃತ್ತಿಗೆ ಅಪಮಾನ ಮಾಡುತ್ತಿದ್ದಾರೆ ಶಾಸಕರು ಬಸವತತ್ವ ಪಾಲಿಸುವವರು ಅವರಿಂದ ಇದನ್ನು ನೀರಿಕ್ಷೆ ಮಾಡಿರಲಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಸಾಯಂಕಾಲ | 04:30 ರಿಂದ 06:00 |
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ಇಂದು ನೀವು ಮನೆಯ ಕಿರಿಯ ಸದಸ್ಯರೊಂದಿಗೆ ಗಾಸಿಪ್ ಮಾಡುವ ಮೂಲಕ ಉಚಿತ ಸಮಯವನ್ನು ಚೆನ್ನಾಗಿ ಬಳಸಿಕೊಳ್ಳಬಹುದು. ನಿಮ್ಮ ವೈವಾಹಿಕ ಜೀವನದಲ್ಲಿ ಇಂದು ವಿಷಯಗಳು ಸುಂದರವಾಗಿರುತ್ತವೆ.

**ವೃಷಭ** ಪ್ರೀತಿಯ ಜೀವನ ಇಂದು ನಿಜವಾಗಿಯೂ ಸುಂದರವಾಗಿ ಅರಳುತ್ತದೆ. ವಿಚಾರಗೋಷ್ಠಿಗಳು ಮತ್ತು ಪ್ರದರ್ಶನಗಳು ನಿಮಗೆ ಹೊಸ ಜ್ಞಾನ ಮತ್ತು ಸಂಪರ್ಕಗಳನ್ನು ಒದಗಿಸುತ್ತವೆ.

**ಮಿಥುನ** ಅಸಾಧ್ಯವಾದ ಅನಗತ್ಯ ಚಿಂತನೆಯಲ್ಲಿ ನಿಮ್ಮ ಶಕ್ತಿ ವ್ಯರ್ಥ ಮಾಡುವ ಬದಲು ಅದನ್ನು ಸರಿಯಾದ ದಿಕ್ಕಿನಲ್ಲಿ ಬಳಸಿ. ಕೆಲವರಿಗೆ ಪ್ರಯಾಣದ ಗಡಿಬಿಡಿ ಮತ್ತು ಒತ್ತಡದಿಂದ ಕೂಡಿರುತ್ತವೆ . ಆರ್ಥಿಕವಾಗಿ ಲಾಭದಾಯಕವಾಗಿರುತ್ತವೆ.

**ಕರ್ಕಾಟಕ** ನಿಮ್ಮ ಪ್ರೇಮಿ ಅಥವಾ ಪ್ರೇಮಿಕ ಇಂದು ತುಂಬಾ ಕೋಪದಲ್ಲಿ ಕಾಣ ಬಹುದು, ಇದರಿಂದಾಗಿಅವರ ಮನೆಯ ಪರಿಸ್ಥಿತಿ ಇರುತ್ತದೆ. ಅವರು ಕೋಪದಲ್ಲಿದ್ದರೆ , ಅವರನ್ನು ಸಮಾಧಾನಗೊಳಿಸಲು ಪ್ರಯತ್ನಿಸಿ.

**ಸಿಂಹ** ನಿಮ್ಮ ಭರವಸೆ ಒಂದು ಪರಿಮಳಯುಕ್ತ ಮತ್ತು ಬೆರಗು ಗೊಳಿಸುವ ಹೂವಿನ ಹಾಗೆ ಅರಳುತ್ತದೆ. ಹೆಚ್ಚುವರಿ ಹಣವನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಬೇಕು. ಕೌಟುಂಬಿಕ ಜವಾಬ್ದಾರಿಗಳು ಹೆಚ್ಚಾಗುತ್ತವೆ.

**ಕನ್ಯಾ** ಲೋನ್ ತೆಗೆದುಕೊಂಡಿರುವ ಜನರಿಗೆ ಲೋನ್ ನ ಮೊತ್ತವನ್ನು ಮರುಪಾವತಿಸುವಲ್ಲಿ ತೊಂದರೆಗಳು ಉಂಟಾಗಬಹುದು. ನಿಮ್ಮ ಆಕರ್ಷಣೆ ಹಾಗೂ ವ್ಯಕ್ತಿತ್ವ ನೀವು ಹೊಸ ಸ್ನೇಹಿತರನ್ನು ಗಳಿಸಲು ಸಹಾಯ ಮಾಡುತ್ತದೆ.

**ತುಲಾ** ನಿಮ್ಮ ಆತ್ಮವಿಶ್ವಾಸವನ್ನು ಇಂದು ಚೆನ್ನಾಗಿ ಬಳಸಿಕೊಳ್ಳಲು ಪ್ರಯತ್ನಿಸಿ. ಒತ್ತಡದ ದಿನದ ಹೊರತಾಗಿಯೂ ನೀವು ನಿಮ್ಮ ಚೈತನ್ಯವನ್ನು ಮರಳಿ ಪಡೆಯಲು ಸಾಧ್ಯವಾಗುತ್ತದೆ. ಬಾಕಿಯಿರುವ ವಿಷಯಗಳು ರಹಸ್ಯಮಯವಾಗುತ್ತವೆ.

**ವೃಶ್ಚಿಕ** ಕ್ರೀಡೆಗಳು ಸಾರ್ವಕಾಲಿಕ ಯೌವನದ ರಹಸ್ಯವಾಗಿದ್ದರಿಂದ ಯಾವುದಾದರೂ ಆಟಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಹೆಚ್ಚುವರಿ ಹಣವನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಬೇಕು.

**ಧನಸ್ಸು** ದೈಹಿಕ ಲಾಭಕ್ಕಾಗಿ ಧ್ಯಾನ ಮತ್ತು ಯೋಗ ಪ್ರಾರಂಭಿಸಿ. ಇಂದು ನೀವು ಯಾವುದೇ ಅಜ್ಞಾತ ಮೂಲಗಳಿಂದ ಹಣವನ್ನು ಪಡೆಯಬಹುದು, ಇದರಿಂದ ನಿಮ್ಮ ಅನೇಕ ಆರ್ಥಿಕ ಸಮಸ್ಯೆಗಳು ದೂರವಾಗುತ್ತವೆ.

**ಮಕರ** ನೀವು ಕೆಲವು ಆಘಾತಗಳನ್ನು ಎದುರಿಸುವುದರಿಂದ ನೀವು ಬಹಳ ಧೈರ್ಯ ಹಾಗೂ ಶಕ್ತಿಯನ್ನು ಪ್ರದರ್ಶಿಸುವ ಅಗತ್ಯವಿದೆ. ನೀವು ನಿಮ್ಮ ಆಶಾವಾದಿ ನಿಲುವಿನಿಂದ ಇವುಗಳಿಂದ ಸುಲಭವಾಗಿ ಹೊರಬರಬಹುದು.

**ಕುಂಭ** ನಿಮ್ಮ ನಾಲಗೆ ನಿಮ್ಮ ಅಜ್ಜ ಅಜ್ಜಿಯಂದಿರ ಭಾವನೆಗಳಿಗೆ ಘಾಸಿ ಮಾಡುವುದರಿಂದ ನಿಮ್ಮ ಭಾಷೆಯನ್ನು ನಿಯಂತ್ರಿಸಿ. ಹರಟೆ ನಿಮ್ಮ ಸಮಯ ವ್ಯರ್ಥ ಮಾಡುವುದಕ್ಕಿಂತ ಸುಮ್ಮನಿರುವುದು ಉತ್ತಮ.

**ಮೀನ** ಆರೋಗ್ಯ ಚೆನ್ನಾಗಿರುತ್ತದಾದರೂ ನಿಮ್ಮ ಬದುಕನ್ನು ಲಘುವಾಗಿ ತೆಗೆದುಕೊಳ್ಳಬೇಡಿ ಹಾಗೂ ಜೀವನದ ರಕ್ಷಣೆ ನಿಮ್ಮ ನಿಜವಾದ ಹೊಣೆಗಾರಿಕೆಯೆಂದು ಅರ್ಥ ಮಾಡಿಕೊಳ್ಳಿ.

## ನಗರಸಭೆ ವತಿಯಿಂದ ಕಸ ಗೊಬ್ಬರವನ್ನು ವಿಂಗಡಿಸುವ ಯಂತ್ರಕ್ಕೆ ಚಾಲನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ಅರಸೀಕೆರೆ

ಅರಸೀಕೆರೆ ನಗರಸಭೆ ವತಿಯಿಂದ ಘನತಾಜ್ಯ ನಿರ್ವಹಣೆಯ ಘಟಕಕ್ಕೆ ಕಸ ಮತ್ತು ಗೊಬ್ಬರವನ್ನು ವಿಂಗಡಿಸುವ ಯಂತ್ರಕ್ಕೆ ನಗರಸಭೆ ಅಧ್ಯಕ್ಷರಾದ ಎಂ ಶಮಿವುಲ್ಲಾ ಚಾಲನೆ ನೀಡಿದರು. ನಗರದ ಯಾದಾಪುರ ರಸ್ತೆಯಲ್ಲಿರುವ ನಗರ ಸಭೆಯ ಘನ ತ್ಯಾಜ್ಯ ನಿರ್ವಹಣಾ ಘಟಕದಲ್ಲಿ ಹೊಸದಾಗಿ ಅಳವಡಿಸಿರುವ ಕಸ ಮತ್ತು ಗೊಬ್ಬರವನ್ನು ವಿಂಗಡಿಸುವ ನೂತನ ಯಂತ್ರಗಳಿಗೆ ಚಾಲನೆ ನೀಡಲಾಯಿತು

ನಗರಸಭೆ ಉಪಾಧ್ಯಕ್ಷರಾದ ಮನೋಹರ್ ಮೇಸ್ತ್ರಿ ನಗರಸಭೆ ಆಯುಕ್ತರಾದ ಕೃಷ್ಣಮೂರ್ತಿ ಪರಿಸರ ಸಹಾಯಕ ಕಾರ್ಯ ಪಾಲಕ ಅಭಿಯಂತರು ಸೇರಿದಂತೆ ಇನ್ನೂ ಹಲವು ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಯೋಗ ಸಾಧಕಿಯರಿಂದ ಅಂತರಾಷ್ಟ್ರೀಯ ಮಹಿಳಾ ದಿನ ಆಚರಣೆ



ಉದಯವಾಹಿನಿ ಚಿತ್ರ

• ಉದಯವಾಹಿನಿ ಚಿತ್ರದುರ್ಗ

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ 2025 ಅಂಗವಾಗಿ ಭಾರತೀಯ ಯೋಗ ಶಿಕ್ಷಣ ಸಂಸ್ಥೆ ಚಿತ್ರದುರ್ಗ ವತಿಯಿಂದ ಶನಿವಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಯೋಗ ಸಂಸ್ಥೆಯ ಸಾಧಕಿಯರು ಕೇಕ್ ಕತ್ತರಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು ನಂತರ ಪರಸ್ಪರ ಸಿಹಿ ಹಂಚಿ ಮಹಿಳಾ ದಿನಾಚರಣೆಯ ಶುಭಾಶಯಗಳನ್ನು ಕೋರಿದರು. ಮಹಿಳಾ ಯೋಗ ಸಾಧಕಿಯರಾದ ಶ್ರೀಮತಿ ರೇಣುಕಾದೇವಿ ನಳಿನ ರೂಪ ಭಾಗ್ಯಲಕ್ಷ್ಮಿ ಸುಕನ್ಯಾ, ರಮಾ ಅನಿತಾ ಅರುಣ ಹೇಮಲತಾ ಹಾಗೂ ಇನ್ನೂ ಅನೇಕ ಯೋಗ ಆಸಕ್ತರು ಪಾಲ್ಗೊಂಡಿದ್ದರು.

## 8 ಗಂಟೆಯಲ್ಲಿ ಆರೋಪಿಗಳ ಬಂಧನ

• ಉದಯವಾಹಿನಿ ಕಲಬುರಗಿ

ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಸ್ಟೇಷನ್ ಗಾಣಗಾಪೂರ-ಚೌಡಾಪೂರ ರಾಜ್ಯ ಹೆದ್ದಾರಿಯಲ್ಲಿರುವ ರೈಲ್ವೆ ಬ್ರಿಡ್ಜ್ ಹತ್ತಿರ ನಡೆದ ಸಲಿಗೆ ಪ್ರಕರಣವನ್ನು 8 ಗಂಟೆಗಳಲ್ಲಿ ಪತ್ತೆ ಮಾಡಿ ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಆಳಂದ ತಾಲ್ಲೂಕಿನ ಧುತ್ತರಗಾಂವ ಗ್ರಾಮದ ಸುಧಾಕರ ತಂದೆ ಗುಂಡಪ್ಪ ಮದಗುಣಕಿ (26) , ಭಟ್ಟರಗಾ ಗ್ರಾಮದ ರಾಹುಲ ತಂದೆ ರೇವಣಸಿದ್ದಪ್ಪ ತೋಳನೂರ (19) ಎಂಬುವವರನ್ನು ಬಂಧಿಸಿ 1.50 ಲಕ್ಷ ರೂ.ಮೌಲ್ಯದ ಬೈಕ್ ಜಪ್ತಿ ಮಾಡಿದ್ದಾರೆ. ಈ ಇಬ್ಬರು ಆರೋಪಿಗಳ ವಿರುದ್ಧ ಕೊಲೆ, ಹೊಡೆದಾಟ ಮತ್ತು ಅತ್ಯಾಚಾರದಂತಹ ಪ್ರಕರಣಗಳು ದಾಖಲಾಗಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ವೃತ್ತಿಗೆ ಗೌರವವನ್ನು ಕೂಡಿಸುವ ಕೆಲಸ ಶಾಸಕರು ಮಾಡಬೇಕಿತ್ತು ಅವಮಾನವಲ್ಲ

• ಉದಯವಾಹಿನಿ ಮುದ್ದೇಬಿಹಾಳ

ನಾಗರಿಕ ಸಮಾಜದ ನಿರ್ಮಾಣದಲ್ಲಿ ಕುಲವೃತ್ತಿದಾರರ ಕೊಡುಗೆ ಅಪಾರವಾಗಿದೆ ಅದೇ ರೀತಿ ಕ್ಷೌರಿಕ ವೃತ್ತಿ ಸಹ ತನ್ನದೆಯಾದ ಕೊಡುಗೆ ಸುಂದರವಾಗಿ ಕಾಣಲು ನೀಡುತ್ತಿದೆ. ಇಂದು ಕ್ಷೌರಿಕ ವೃತ್ತಿಗೆ ಅವಮಾನ ಮಾಡುವ ಮೂಲಕ ಇಂದು ಜನಪ್ರತಿನಿಧಿಗಳಾದವರು ಬುರುಡೆ ಜ್ಯೋತಿಷಿಗಳು ಮಾಡುತ್ತಿದ್ದಾರೆ.



ಇದನ್ನು ಸರಿಮಾಡಬೇಕಾದವರೇ ವೃತ್ತಿಗೆ ಅವಮಾನ ಮಾಡುತ್ತಿರುವುದು ದುರದೃಷ್ಟಕರ ಶನಿವಾರ ಪಟ್ಟಣದ ಕೆಇಬಿ ಯಲ್ಲಿ ನಡೆದ ಸಮಾರಂಭದಲ್ಲಿ ಶಾಸಕ ಕೆಎಸ್‌ಡಿ ನಿಗಮದ ಅಧ್ಯಕ್ಷ ಸಿ.ಎಸ್ ನಾಡಗೌಡ ಅಪ್ಪಾಜಿ ಅವರು ವಿದ್ಯುತ್ ಇಲ್ಲದೆ ಏನು ನಡೆಯವುದಿಲ್ಲವೆಂಬ ಮಾತಿನ ಭರದಲ್ಲಿ ಹಜಾಮತಿ ' ಅಂಗಡಿಗಳು ಸಹ ನಡೆಯುವುದಿಲ್ಲವೆಂದು ಕ್ಷೌರಿಕ ವೃತ್ತಿಗೆ ಅಪಮಾನ ಮಾಡಿದ್ದಾರೆ ಶಾಸಕರು ಕಟಿಂಗ್ ಅಂಗಡಿ ಅಥವಾ ಹೇರ ಸಲೂನ ಅಂತ ಪದಬಳಕೆ ಮಾಡಬಹುದಿತ್ತು ಅದನ್ನು ಹಜಾಮತಿ ಅಂಗಡಿ ಎನ್ನುವ ಮೂಲಕ ಪವಿತ್ರ ಕ್ಷೌರಿಕ ವೃತ್ತಿಗೆ ಅಪಮಾನ ಮಾಡಿದ್ದಾರೆ ಇಂದು ಕ್ಷೌರಿಕ ಸಮಾಜದಲ್ಲಿ ಶಾಲೆ ಕಲಿತ ಮಕ್ಕಳು ಕುಲವೃತ್ತಿ ಕ್ಷೌರಿಕ ವೃತ್ತಿಯತ್ತ ಬರದೆ ಇರಲು ಕಾರಣ ಕ್ಷೌರಿಕ ವೃತ್ತಿಗೆ ಅಪಮಾನ ಮಾಡುವ ಪದಬಳಕೆಯಿಂದ ಹಜಾಮ

> ತುಂಬಿದ ಸಭೆಯಲ್ಲಿ ಸರಕಾರಿ ಕಾರ್ಯಕ್ರಮದಲ್ಲಿ ನಮ್ಮ ವೃತ್ತಿಗೆ ಹಿಯ್ಯಾಳಿಸುವ ಪದಬಳಕೆ ಮಾಡಬಾರದಿತ್ತು, ಜನಪ್ರತಿನಿಧಿಗಾಳಾಗಿ ಕ್ಷೌರಿಕ ವೃತ್ತಿಗೆ ಗೌರವವನ್ನು ಕೊಡುವಂತ ಕೆಲಸವನ್ನು ಮಾಡಬೇಕು ಈ ಪ್ರಮಾದವನ್ನು ಸರಿಪಡಿಸಲು ಕ್ಷಮೆಯಾಚಿಸಬೇಕು ಕ್ಷೌರಿಕ ವೃತ್ತಿಗೆ ಅಪಮಾನ ಅವಮಾನಕರ ಪದಬಳಕೆ ಮಾಡದಂತೆ ಜನತೆಗೆ ತಿಳಿಸಬೇಕು ಮತ್ತು ಅವಮಾನ ಮಾಡುವವರ ಮೇಲೆ ಕಾನೂನು ಕ್ರಮ ಜರುಗಿಸಲು ಸರಕಾರದ ಮೇಲೆ ಒತ್ತಡ ಹಾಕಬೇಕು -ರವಿ ತೇಲಂಗಿ ( ಹಡಪದ) ತಾಲ್ಲೂಕು ಸವಿತಾ ಸಮಾಜದ ಅಧ್ಯಕ್ಷರು

ಹಜಾಮತಿ ಅಂತ ಸಂಭೋದನೆಗೆ ಮನನೊಂದು ಈ ವೃತ್ತಿ ಗೂಡುವೆ ಬೇಡ ಅಂತ ಬೇರೆ ಕೆಲಸ ಅರಸಿ ಪಟ್ಟಣ ಪ್ರದೇಶಗಳತ್ತ ಮುಖ ಮಾಡುತ್ತಿದ್ದಾರೆ ಮಾನ್ಯ ಶಾಸಕರಾದವರು ಜನಪ್ರತಿನಿಧಿಗಳು ಸರಕಾರ ಗೆಜೆಟ್‌ನಲ್ಲಿ ಹಜಾಮ ಪದ ತಗೆದು ಹಾಕಿದೆ ಮತ್ತು ಅವಮಾನಕರ ವಾಗಿ ಕ್ಷೌರಿಕ ವೃತ್ತಿಗೆ ಮಾಡಬಾರದೆಂದು ಹೇಳಿದೆ ಇದನ್ನು ಶಾಸಕರು ಅರಿಯಬೇಕು.

### ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಅಭಿಯಂತರ ಬಸನಗೌಡ ಪಾಟೀಲ್

## ಜಲಜೀವನ್ ಮಿಷನ್ ಅನುಷ್ಠಾನ, ಕಾರ್ಯಾಚರಣೆ, ನಿರ್ವಹಣೆ ಜವಾಬ್ದಾರಿಯುತವಾಗಿರಲಿ

• ಉದಯವಾಹಿನಿ ಚಿತ್ರದುರ್ಗ

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಅಧ್ಯಕ್ಷರು ಮತ್ತು ಇಲಾಖೆಯವರು ಒಟ್ಟಾಗಿ ಪಂಚಾಯಿತಿ ಮಟ್ಟದಲ್ಲಿ ಜಲ ಜೀವನ್ ಮಿಷನ್ ಅನುಷ್ಠಾನ ಮತ್ತು ಕಾರ್ಯಚರಣೆ, ನಿರ್ವಹಣೆ ಜವಾಬ್ದಾಯುತವಾಗಿ ಮಾಡಬೇಕು ಎಂದು ಗ್ರಾಮೀಣ ಕುಡಿಯುಬ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಅಭಿಯಂತರ ಬಸನಗೌಡ ಪಾಟೀಲ್ ಹೇಳಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಈಚೆಗೆ ಜಿಲ್ಲಾ ಪಂಚಾಯತ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಜಲ ಜೀವನ್ ಮಿಷನ್ ಮತ್ತು ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಗಳನ್ನು ಉತ್ತಮ ಅನುಷ್ಠಾನಕ್ಕಾಗಿ ವಾಶ್ ಕಾರ್ಯಕ್ರಮಗಳ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳು, ತಾಲ್ಲೂಕು ಮಟ್ಟದ ಅಧಿಕಾರಿಗಳು ಮತ್ತು ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸಾಮರ್ಥ್ಯ ಅಭಿವೃದ್ಧಿಗೊಳಿಸುವ ಕುರಿತು ಒಂದು ದಿನದ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.



ಉದಯವಾಹಿನಿ ಚಿತ್ರ

ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ ಸಭೆಗಳನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಮಾಡಿ ಅದರ ನಡಾವಳಿಯನ್ನು ಜಿಲ್ಲಾ ಪಂಚಾಯಿತಿ ಕಛೇರಿಗೆ ಸಲ್ಲಿಸಬೇಕು.

ಮುಂದಿನ ದಿನಗಳಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ 24★7 ನೀರು ಸರಬರಾಜು ಮಾಡುವ ನಿಟ್ಟಿನಲ್ಲಿ ಕ್ರಮ ವಹಿಸಬೇಕು ಎಂದು ತಿಳಿಸಿದರು.

ತರಬೇತಿಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ದಯಾನಂದ ಸ್ವಾಮಿ, ಲಿಂಗರಾಜು, ಕಿರಿಯ ಅಭಿಯಂತರರಾದ ಕಾರ್ತಿಕ್, ಭಾರತಿ, ತಿಪ್ಪೇಸ್ವಾಮಿ, ಎಎಒ ಜಿಲ್ಲಾ ವ್ಯವಸ್ಥಾಪಕರಾದ ಮುಂಜುನಾರ್ ನಾಡರ್,

> ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿಗಳ ಪುನರ್ ರಚನೆ ಮತ್ತು ಖಾತೆಗಳನ್ನು ತೆರೆಯುವುದು ಮತ್ತು ತಾಂತ್ರಿಕ ಕೌಶಲ್ಯಗಳನ್ನು ಉಪಯೋಗಿಸಿಕೊಂಡು ಐಇಸಿ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಗ್ರಾಮೀಣ ಸಮುದಾಯದಲ್ಲಿ ವ್ಯಾಪಕವಾದ ಅರಿವು ಮೂಡಿಸಬೇಕಾಗಿದೆ
> -ಸಿ ಎನ್ ಗಾಯಿತ್ರಿ
> ಜಿ.ಪಂ ಮುಖ್ಯ ಯೋಜನಾಧಿಕಾರಿ

ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯ ಜಿಲ್ಲಾ ಸಮಾಲೋಚಕರಾದ ಬಿ.ಸಿ. ನಾಗರಾಜ್, ವಿನಯ್ ಕುಮಾರ್, ಶಶಿಧರ್ ಮತ್ತು ಪ್ರಮೀಳ, ಲೆಕ್ಕ ಸಹಾಯಕರಾದ ಶೃತಿ. ಬಿ.ಜೆ ಕರ್ನಾಟಕ ಸುಸ್ಥಿರ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ ಸಮಾಲೋಚಕ, ಕಿರಣ್ ಪಾಟೇಲ್, ಚಂದ್ರಕಾಂತ್, ಯಲ್ಲಪ್ಪ, ಗೀತಾಲಕ್ಷೀ ಇದ್ದರು.

### ಮಳೆ ನೀರು ಕೊಯ್ಲು ಮತ್ತು ನಿರ್ವಹಣೆ ಬಗ್ಗೆ ಮಾಹಿತಿ

ರಾಜ್ಯ ಸಂಪನ್ಮೂಲ ವ್ಯಕ್ತಿಯಾದ ಜೋಸೆಫ್ ಜಿ.ಎಂ ರೆಬೆಲ್ಲೋ ಅವರು ವಿಡಬ್ಲ್ಯೂಎಸ್‌ಸಿ ಸಮಿತಿ, ಜಲ ಮೂಲಗಳ ಸಂರಕ್ಷಣೆ, ಘನ ದ್ರವ ತ್ಯಾಜ್ಯಗಳ ನಿರ್ವಹಣೆ, ಕಾರ್ಯಚರಣೆ, ಶೌಚಾಲಯದ ಮಹತ್ವ, ನೀರಿನ ಮಹತ್ವ, ಶುಚಿತ್ವ ಬೂದು ನೀರು ನಿರ್ವಹಣೆ ಮಳೆ ನೀರು ಕೊಯ್ಲು ಜಲ ಸಂಪನ್ಮೂಲ ಮತ್ತು ಜಲ ಕ್ಷಾಮ ನೀರಿನ ಶುದ್ಧತೆ ಮತ್ತು ನೀರಿನ ಮಲಿನತೆ ನೀರಿನ ದುರ್ಬಳಕೆ ಮತ್ತು ಸದ್ಬಳಕೆ ಬಾವಿ ಕೆರೆ ನದಿ ಮತ್ತು ಕೊಳವೆ ಬಾವಿ ನೀರಿನ ವ್ಯತ್ಯಾಸ. ಜಲ ಸಂರಕ್ಷಣಾ ವಿಧಾನಗಳು ಮತ್ತು ಪ್ರಾಮುಖ್ಯತೆ. ಬೂದು ನೀರು ಮತ್ತು ಕಪ್ಪು ನೀರು ಸಮಸ್ಯೆ ಮತ್ತು ಪರಿಹಾರ ನೀರಿನ ಸುಸ್ಥಿರತೆ ಕಾಪಾಡುವಲ್ಲಿ ಸಮುದಾಯ ಸಹಬಾಗಿತ್ವ ಮಳೆ ನೀರು ಕೊಯ್ಲು ವೈಜ್ಞಾನಿಕ ರಚನೆ ಮತ್ತು ನಿರ್ವಹಣೆ ಮುಂತಾದ ವಿಷಯಗಳ ಬಗ್ಗೆ ಮಾಹಿತಿ ನೀಡಿದರು.

**ಅಗತ್ಯ ಸಿದ್ಧತೆ**

ಪ್ರತಿ ಮನೆ-ಮನೆಗೂ ನಳ ಸಂಪರ್ಕದ ಮೂಲಕ ಶುದ್ಧ ಕುಡಿಯುವ ನೀರು ಪೂರೈಕೆ ಮಾಡುವುದು ಸರ್ಕಾರದ ಉದ್ದೇಶವಾಗಿದೆ ಈ ನಿಟ್ಟಿನಲ್ಲಿ ಎಲ್ಲಾ ಕಡೆಯಲ್ಲೂ ಒವರ್ ಹೆಡ್ ಟ್ಯಾಂಕ್‌ಗಳ ನಿರ್ಮಾಣ ಸೇರಿದಂತೆ ಜಲ ಜೀವನ್ ಮಿಷನ್‌ನಿಂದ ಅಗತ್ಯ ಸಿದ್ದತೆ ಕೈಗೊಳ್ಳಲಾಗಿದ್ದು, ಪೂರ್ಣಗೊಂಡ ಕಾಮಗಾರಿಗಳನ್ನು ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಿಸಬೇಕು ಬಳಿಕ ನಿರ್ವಹಣೆ ಮಾಡಲು ಅಗತ್ಯ ಕೈಗೊಳ್ಳಬೇಕೆಂದು ತಿಳಿಸಿದರು.

### ಭೀಮಾ ಭಾಗದ ಸಾಹಿತ್ಯದ ಹಿರಿಮೆ ಗರಿಮೆ ಜನರಿಗೆ ತಲುಪಿಸುವ ಕಾರ್ಯವಾಗಬೇಕು

## ಭೀಮೆಗೆ ವಿಕಾರತೆ ಮತ್ತು ಭಾವನೆ ಹುಟ್ಟು ಹಾಕುವ ಪದ ಬಳಕೆ ಬೇಡ

• ಉದಯವಾಹಿನಿ ಇಂಡಿ

ಭೀಮಾ ನದಿಗೆ ಭೀಮಾ ತೀರದ ಹಂತಕರು ಎಂದು ವಿಕಾರತೆ ಹುಟ್ಟು ಹಾಕುವ ಭಾವನೆ ಹುಟ್ಟು ಹಾಕುವ ಪದ ಬಳಕೆ ಬೇಡ ಎಂದು ಶಾಸಕ ಯಶವಂತ ರಾಯಗೌಡ ಪಾಟೀಲರು ಹೇಳಿದರು. ಅವರು ಪಟ್ಟಣದ ಕರ್ನಾಟಕ ಬಿಈಡಿ ಮಹಾವಿದ್ಯಾಲಯದಲ್ಲಿ ಭೀಮಾಂತರಂಗ ಸಾಹಿತ್ಯಿತ ಸಾಂಸ್ಕೃತಿಕ ಜಗಲಿ ವತಿಯಿಂದ ನಡೆದ ಭೀಮಾಂತರಂಗ ಕೃತಿ ಲೋಕಾರ್ಪಣೆ ಮಾಡಿ ಮಾತನಾಡಿದರು.

ಭೀಮಾ ತೀರದಲ್ಲಿ ಅನೇಕ ಯುಗ ಪುರುಷರು, ಸಾಹಿತಿಗಳು, ಸಮಾಜದ ಚಿಂತಕರು ಕಾರ್ಯ ಮಾಡಿದ್ದಾರೆ. ಮಾಡುತ್ತಿದ್ದಾರೆ. ಭೀಮಾತೀರ ನಮ್ಮ ಅಂತರಂಗದ ಶಬ್ದವಾಗಬೇಕು.

ಭೀಮಾ ಭಾಗದ ಸಾಹಿತ್ಯದ ಹಿರಿಮೆ ಗರಿಮೆ ಜನರಿಗೆ ತಲುಪಿಸುವ ಕಾರ್ಯವಾಗಬೇಕಾಗಿದೆ. ಈ ದಿಶೆಯಲ್ಲಿ ಭೀಮಾಂತರಂಗ ಜಗುಲಿ ಮಾಡುತ್ತಿರುವ ಕಾರ್ಯ ಪ್ರಶಂಸನೀಯ. ಭೀಮಾಂತರಂಗ ಸಾಹಿತ್ಯವನ್ನು ಯುವ ಜನಾಂಗಕ್ಕೆ ತಲುಪಿಸುವ ಸ್ಫೂರ್ತಿಸುವ


ಉದಯವಾಹಿನಿ ಚಿತ್ರ

ಕಾರ್ಯ ಮಾಡುತ್ತಿದ್ದು ಮತ್ತು ಭೀಮಾ ನದಿ ಒಳ್ಳೆಯ ಇತಿಹಾಸ ಪರಂಪರೆ ಹೊಂದಿದ್ದು ಭಾವನಾತ್ಮಕವಾಗಿ ಭೀಮೆಗೆ ಕೆಟ್ಟ ಪದಗಳನ್ನು ಬಳಕೆ ಬೇಡ . ಈ ದಿಶೆಯಲ್ಲಿ ಎಲ್ಲರೂ ಕೆಲಸಮಾಡಬೇಕಾಗಿದೆ ಎಂದರು.

ಕರ್ನಾಟಕ ವಿದ್ಯಾವರ್ಧಕ ಸಂಸ್ಥೆಯ ಅಧ್ಯಕ್ಷ ಬಸವರಾಜ ಸಾಹುಕಾರ ಕುಮಸಗಿ, ಸಂಪಾದಕ ಸಿ.ಎಂ.ಬಂಡಗರ, ಪ್ರಧಾನ ಸಂಪಾದಕ ರಾಘವೇಂದ್ರ ಕುಲಕರ್ಣಿ, ವಾಯ್.ಜಿ.ಬಿರಾದಾರ, ಗೀತಯೋಗಿ, ಶ್ರೀಧರ ಹಿಪ್ಪರಗಿ, ಸಂತೋಷ ಬಂಡೆ, ಶ್ರೀಮತಿ ಬಿ.ಸಿ.ಭಗವಂತಗೌಡರ, ಸರೋಜಿನಿ ಮಾವಿನಮರದ ಮಾತನಾಡಿದರು. ವೇದಿಕೆಯ ಮೇಲೆ ಖ್ಯಾತ ಸಾಹಿತಿ

> ಗುರುದತ್ತ ಮಹಾರಾಜರು ಪಾದುಕೆ ಹರಿಸಿದ ಭೀಮೆ, ಘತ್ತರಗಿ ಭಾಗಮ್ಮಳ ಭೀಮೆ ಪುಣ್ಯಕ್ಷೇತ್ರಗಳ ಪವಿತ್ರ ನದಿ,ನೆಲ,ಜಲ. ಭೀಮೆಗೆ ವಿಕಾರತೆಯ ಪದಗಳನ್ನು ಬಳಸುವದು ನಡೆದಿದ್ದು ನದಿಯ ಸಂಸ್ಕೃತಿ ಮಾನವ ಸಂಸ್ಕೃತಿಯ ಪ್ರತೀಕವಾಗಿದ್ದು ಈ ನೆಲದಲ್ಲಿ ರಾಷ್ಟ್ರ ರಾಜ್ಯ ಮಟ್ಟದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಗುರುತಿಸುವ ಕಾರ್ಯವಾಗುತ್ತಿದ್ದು ಭೀಮೆಗೆ ಇತಿಹಾಸ ಮತ್ತು ಭವಿಷ್ಯ ರೂಪಿಸುವ ಪದಗಳ ಬಳಕೆಯಾಗಬೇಕು
> -ಡಾ.ಬಾಳಾಸಾಹೇಬ ಲೋಕಾಪುರ
> ಅಥಣಿಯ ಖ್ಯಾತ ಕಾದಂಬರಿಕಾರ

ಡಿ.ಎನ್.ಅಕ್ಕಿ, ಕ್ಷೇತ್ರಶಿಕ್ಷಣಾಧಿಕಾರಿ ಟಿ.ಎಸ್. ಅಲಗೂರ,ಪಿ.ಬಿ.ಕತ್ತಿ, ಸಂಗಣ್ಣ ಈರಾಬಟ್ಟೆ, ಎಸ್.ಎಂ. ಕಡಕೋಳ, ಪ್ರಾಚಾರ್ಯಡಾ. ಸುಧಾ ಸುಣಗಾರ ಮತ್ತಿತರಿದ್ದರು.


## ಮಾ.13ರಂದು ನೇರ ನೇಮಕಾತಿ ಸಂದರ್ಶನ

• ಉದಯವಾಹಿನಿ ಚಿತ್ರದುರ್ಗ

ಚಿತ್ರದುರ್ಗ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ವತಿಯಿಂದ ಇದೇ ಮಾರ್ಚ್ 13ರಂದು ಬೆಳಿಗ್ಗೆ 10 ರಿಂದ 3 ರವರೆಗೆ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೇರ ನೇಮಕಾತಿ ಸಂದರ್ಶನ ನಡೆಯಲಿದೆ.

ಸಂದರ್ಶನದಲ್ಲಿ ಪಿಎಸ್‌ಐ ಅವೆಟೆಕ್ ಬೆಂಗಳೂರು ಹಾಗೂ ಮುಂತಾದ ಕಂಪನಿಗಳು ತಮ್ಮ ಸಂಸ್ಥೆಯಲ್ಲಿ ಖಾಲಿ ಇರುವ ಟ್ರೈನಿ ಮುಂತಾದ ಹುದ್ದೆಗಳಿಗೆ ಕಾರ್ಯನಿರ್ವಹಿಸಲು ಪುರುಷ ಮತ್ತು ಮಹಿಳೆ ಅಭ್ಯರ್ಥಿಗಳನ್ನು ನೇರವಾಗಿ ಆಯ್ಕೆ ಮಾಡಿಕೊಳ್ಳುವ ಸಂಬಂಧ ಭಾಗವಹಿಸಲಿವೆ.

ಬಿಇ, ಬಿಟೆಕ್ ಹಾಗೂ ಡಿಪ್ಲೊಮಾ, ಐಟಿಐ, ಎಲೆಕ್ಟ್ರೀಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿದ್ಯಾರ್ಹತೆ ಹೊಂದಿರುವ 100 ಟ್ರೈನಿ ಇಂಜಿನಿಯರ್ ಹಾಗೂ 100 ಜೂನಿಯರ್ ಟ್ರೈನಿ ಇಂಜಿನಿಯರ್ ಹುದ್ದೆಗಳು ಖಾಲಿ ಇದ್ದು, ಬೆಂಗಳೂರಿನಲ್ಲಿ ಕೆಲಸ ನಿರ್ವಹಿಸಬೇಕಾಗಿದೆ. ಟ್ರೈನಿ ಇಂಜಿನಿಯರ್ ಹುದ್ದೆಗೆ ಮಾಸಿಕ 18 ಸಾವಿರ ವೇತನ ನಿಗಧಿಪಡಿಸಿದ್ದು, ಜೂನಿಯರ್ ಟ್ರೈನಿ ಇಂಜಿನಿಯರ್‌ಗೆ ಮಾಸಿಕ 16 ಸಾವಿರ ನಿಗಧಿಪಡಿಸಲಾಗಿದೆ. ಅಭ್ಯರ್ಥಿಗಳು ಅಗತ್ಯ ದಾಖಲೆಗಳಾದ ಬಯೋಡಾಟಾ ಪ್ರತಿಗಳು, ಫೋಟೋಸ್, ವಿದ್ಯಾರ್ಹತೆಯ ಜೆರಾಕ್ಸ್ ಪ್ರತಿಗಳೊಂದಿಗೆ ಭಾಗವಹಿಸಬೇಕು.


ಉದಯವಾಹಿನಿ ಚಿತ್ರ

ಹೆಚ್ಚಿನ ಮಾಹಿತಿಗಾಗಿ ನಗರದ ಹಳೇ ವೈಶಾಲಿ ಗೇಟ್ ಹತ್ತಿರ, ಸ್ಟೇಡಿಯಂ ತಿರುವು, ಉದ್ಯೋಗ ವಿನಿಮಯ ಕೇಂದ್ರ ಕಚೇರಿ, ಚಿತ್ರದುರ್ಗ ದೂರವಾಣಿ ಸಂಖ್ಯೆ 7022459064, 8105619020 ಗೆ ಸಂಪರ್ಕಿಸಬಹುದು ಎಂದು ಉದ್ಯೋಗಾಧಿಕಾರಿ ಡಿ.ರವೀಂದ್ರ ತಿಳಿಸಿದ್ದಾರೆ.

## ಅಂಚೆ ಇಲಾಖೆಯಿಂದ ಮಹಿಳಾ ದಿನ ಆಚರಣೆ

• ಉದಯವಾಹಿನಿ ಬೀದರ್

ಇಲ್ಲಿಯ ಅಂಚೆ ಇಲಾಖೆಯು ನಾರಿ ಶಕ್ತಿ ಸಪ್ತಾಹದೊಂದಿಗೆ ಈ ಬಾರಿ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ವಿಶಿಷ್ಟವಾಗಿ ಆಚರಿಸಿತು.

ಸಪ್ತಾಹದ ಅಂಗವಾಗಿ ಹಮ್ಮಿಕೊಂಡಿದ್ದ ವಿವಿಧ ಕಾರ್ಯಕ್ರಮಗಳು ನಗರದ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಸಮಾರೋಪಗೊಂಡವು.

ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅಂಚೆ ಅಧೀಕ್ಷಕ ವಿ.ಎಲ್. ಚಿತಕೋಟೆ ಅವರು, ಅಂಚೆ ಇಲಾಖೆಗೆ ಮಹಿಳೆಯರ ಕೊಡುಗೆ ಅಪಾರವಾಗಿದೆ ಎಂದು ಹೇಳಿದರು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಈ ಸಲ ನಾರಿ ಶಕ್ತಿ ಸಪ್ತಾಹ ಹಮ್ಮಿಕೊಂಡು ಮಹಿಳೆಯರನ್ನು ಗೌರವಿಸಲಾಗಿದೆ. ಸಪ್ತಾಹದಲ್ಲಿ ಮಹಿಳೆಯರಿಗೆ ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಮಹಿಳಾ ಅಂಚೆ ಪಾಲಕರು, ಅಂಚೆ ಪೇದೆಗಳು, ಡಾಕ್ ಸೇವಕಿಯರನ್ನು ಸತ್ಕರಿಸಲಾಗಿದೆ ಎಂದು ತಿಳಿಸಿದರು. ಪ್ರಸ್ತುತ ಬಹು


ಉದಯವಾಹಿನಿ ಚಿತ್ರ

ತೇಕ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶಗಳು ಇವೆ. ಮಹಿಳೆಯರು ಅವುಗಳ ಸದುಪಯೋಗ ಪಡೆದುಕೊಳ್ಳಬೇಕು. ಶ್ರದ್ಧೆಯಿಂದ ಕಾರ್ಯ ನಿರ್ವಹಿಸಿ ಜೀವನದಲ್ಲಿ ಪ್ರಗತಿ ಸಾಧಿಸಬೇಕು ಎಂದು ಪ್ರಧಾನ ಅಂಚೆ ಕಚೇರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಮಂಗಲಾ ಭಾಗವತ್ ಹೇಳಿದರು. ಸಫಾಯಿ ಮಿತ್ರ ಮಹಿಳಾ ಕಾರ್ಮಿಕರಾದ ಲಕ್ಷ್ಮಿಬಾಯಿ, ಸವಿತಾ ಹಾಗೂ ಜಗದೇವಿ ಅವರನ್ನು ಸನ್ಮಾನಿಸಲಾಯಿತು. ಕಂಪ್ಲೆಂಟ್ ಇನ್‌ಸ್ಪೆಕ್ಟರ್ ಶ್ರೀಧರ ಬಗಾಡೆ, ಶ್ರುತಿ ಸ್ವಾಮಿ ಹಾಗೂ ಅಂಚೆ ಇಲಾಖೆಯ ಸಿಬ್ಬಂದಿ ಹಾಜರಿದ್ದರು.

## ಸರ್ವರ ಹಿತ ರಕ್ಷಣೆ ಬಜೆಟ್

• ಉದಯವಾಹಿನಿ ವಿಜಯಪುರ

ಸರ್ವರಿಗೂ ಸಮ ಬಾಳು ಸಮ ಪಾಲು ಎನ್ನುವ ಧ್ಯೇಯ ವಾಕ್ಯವನ್ನು ಅಕ್ಷರ ಸಹ ತಮ್ಮ ಬಜೆಟ್ ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅನುಷ್ಠಾನಕ್ಕೆ ತಂದಿದ್ದಾರೆ. ನಾಡಿನ ಸಮಸ್ತ ಜನತೆಯ ಎಲ್ಲಾ ವರ್ಗದ ಜನರ ಆಶೋತ್ತರಗಳಿಗೆ ಸ್ಪಂದಿಸುವ ಬಜೆಟ್ ಇದಾಗಿದ್ದು ಅವರ ದೂರದೃಷ್ಟಿತ್ವ ಮತ್ತು ಬದ್ಧತೆಗೆ ಹಿಡಿದ ಕೈಗನ್ನಡಿಯಾಗಿದೆ.



ನಾಡಿನ ರೈತರ, ವಿದ್ಯಾರ್ಥಿಗಳ, ಶ್ರೀಸಾಮಾನ್ಯರ ಹಾಗೂ ಎಲ್ಲಾ ವರ್ಗದ ಜನರ ಅಶೋತ್ತರಗಳಿಗೆ ಸ್ಪಂದಿಸಿರುವ ಮುಖ್ಯಮಂತ್ರಿಗಳಿಗೆ ನಾವೆಲ್ಲರೂ ಚಿರಋಣಿ. ಆದರೆ ಮಕ್ಕಳು ನಾಡಿನ ನಾಳಿನ ಭವಿಷ್ಯದ ಭರವಸೆಯ ಆಶಾ ಕಿರಣಗಳಾಗಿರುವುದರಿಂದ ಮುಂಬರುವ ದಿನಗಳಲ್ಲಿ ಮಕ್ಕಳಿಗಾಗಿಯೇ ಪ್ರತ್ಯೇಕವಾದ '' ಮಕ್ಕಳ ಬಜೆಟ್''ಮಂಡಿಸುವಂತಾಗಲಿ ಎನ್ನುವದು ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಅಧ್ಯಕ್ಷನಾಗಿ ನನ್ನ ಮತ್ತು ಈ ನಾಡಿನ ಮಕ್ಕಳ ಸದಾಶಯವಾಗಿದೆ ಎಂದು ಸಂಗಮೇಶ ಬಬಲೇಶ್ವರ ಅವರು ಹೇಳಿದರು.

### ಹುಡುಗಿಯರು ಉನ್ನತ ವ್ಯಾಸಾಂಗ ಮಾಡಲೇಬೇಕು

## ಬಾಲ್ಯವಿವಾಹ ಪಿಡುಗನ್ನು ಹೋಗಲಾಡಿಸಲು ಕರೆ

• ಉದಯವಾಹಿನಿ ಬಳ್ಳಾರಿ

ವಿದ್ಯಾರ್ಥಿಗಳು ಅದರಲ್ಲಿ ಹುಡುಗಿಯರು ಉನ್ನತ ವ್ಯಾಸಂಗ ಮಾಡಿ ಬಾಲ್ಯ ವಿವಾಹ ಎಂಬ ಸಾಮಾಜಿಕ ಪಿಡುಗನ್ನು ಹೋಗಲಾಡಿಸಬೇಕೆಂದು ಬಳ್ಳಾರಿ ಜಿಲ್ಲಾ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪ ನಿರ್ದೇಶಕರಾದ ಬಿ.ಉಮಾದೇವಿ ಕರೆನೀಡಿದರು. ತಾಲ್ಲೂಕಿನ ಸಂಜೀವರಾಯನಕೋಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಶಾರದಾ ಪೂಜೆ ಹಾಗೂ ಎಂಟನೇ ತರಗತಿ ಮಕ್ಕಳಿಗೆ ಬೀಳ್ಕೊಡುಗೆ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಮಾತನಾಡಿದರು.

ಹಳ್ಳಿಗಳಲ್ಲಿ ಹತ್ತನೇ ತರಗತಿ ಓದಿದರೆ ಸಾಕು ಮದುವೆ ಮಾಡುವ ಪರಿಪಾಠ ರೂಢಿಸಿಕೊಂಡಿದ್ದಾರೆ.ಅದು ಬಾಲ್ಯ ವಿವಾಹ ಎಂದು ತಿಳಿದು ತಪ್ಪು ಮಾಡುತ್ತಿದ್ದಾರೆ. ಅದರಿಂದ ಮುಕ್ತರಾಗಿ ಹೊರಬರಬೇಕಾದರೆ ಹುಡುಗಿಯರು ಉನ್ನತ ವ್ಯಾಸಾಂಗ ಮಾಡಲೇಬೇಕು. ಆಗ


ಉದಯವಾಹಿನಿ ಚಿತ್ರ

ನೀವು ಕೂಡ ಶಿಕ್ಷಕಿ, ವೈದ್ಯೆ,ಡಿಸಿ,ಎಸಿ,ಎಸ್ಪಿ ಆಗಿ ಸಮಾಜಕ್ಕೆ ಮಾದರಿಯಾಗುತ್ತೀರಿ ಎಂದು ಹೇಳುದರು. ನಂತರ ವಿಜ್ಞಾನ ವಸ್ತು ಪ್ರದರ್ಶನ ವೀಕ್ಷಿಸಿ ಪ್ರಶಂಸೆ ವ್ಯಕ್ತಪಡಿಸಿದರು.

ಶಾಲೆಯ ಮುಖ್ಯ ಗುರುಗಳಾದ ರವಿಚೇಳ್ಳಗುರ್ಕಿ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ ವಿದ್ಯೆಗೆ ಅಧಿಪತಿ ಶಾರದೆ.ಅಂತಹ ಶಾರದೆಯನ್ನು ಪ್ರತಿಯೊಬ್ಬರು ಪ್ರತಿ ದಿನ, ಪ್ರತಿ ವರ್ಷ ಶಾಲೆ, ಕಾಲೇಜುಗಳಲ್ಲಿ ಪೂಜೆ ಮಾಡುವುದು ಭಾರತೀಯ ಸಂಸ್ಕೃತಿ. ಶಾರದೆಹೊಲಿದು ನಿಮ್ಮ ಜ್ಞಾನ,ಜ್ಞಾಪಕಶಕ್ತಿ ಹೆಚ್ಚಲಿ ಎಂದು ಹೇಳಿದರು.

### ಮಹಿಳೆಯರಿಗೆ ಸಾಮಾಜಿಕ,ಆರ್ಥಿಕ ಮತ್ತು ರಾಜಕೀಯ ಸಬಲೀಕರಣದ ಅಗತ್ಯ: ಯಶವಂತರಾಯ ಅಷ್ಠಗಿ

## ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ

• ಉದಯವಾಹಿನಿ ಕಲಬುರಗಿ

ದಿನವಿಡಿ ವಿಶ್ರಾಂತಿ ಇಲ್ಲದೇ ದುಡಿದರೂ ಮಹಿಳೆಯಾವತ್ತೂ ಸಹನೆ ಕಳೆದುಕೊಳ್ಳದೆ ಸಂಸಾರದ ಭಾರವನ್ನು ಸರಿದೂಗಿಸುತ್ತಾಳೆ ಆದ್ದರಿಂದ ಮಹಿಳೆಯರಿಗೆ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಸಬಲೀಕರಣದ ಅಗತ್ಯವಿದೆ ಎಂದು ಕೃಷಿ ಶ್ರೀ ಪ್ರಶಸ್ತಿ ಪುರಸ್ಕೃತ ಲೇಖಕ ಪ್ರೊ.ರ ಯಶವಂತರಾಯ ಅಷ್ಠಗಿ ಅಭಿಪ್ರಾಯಪಟ್ಟರು.

ನಗರದ ಅಕ್ಕಮಹಾದೇವಿ ವಿದ್ಯಾವರ್ಧಕ ಸಂಘದ ವೃದ್ಧಾಶ್ರಮದಲ್ಲಿ ಕರ್ನಾಟಕ ಸಮತಾ ಸೈನಿಕ ದಳ ಜಿಲ್ಲಾ ಘಟಕ, ಸಮತಾ ಸೈನಿಕ ದಳದ ಮಹಿಳಾ ಘಟಕ ಹಾಗೂ ಹಾಗೂ ಕು. ಅಕ್ಷತಾ ಈರಣ್ಣ ಜಾನೆ ಗ್ರೂಪ್ ವತಿಯಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ ಮಾತನಾಡಿದರು.

ಮುಂದುವರೆದು ಮಾತನಾಡಿದ ಅವರು, ಮಾತೆ ರಮಾಬಾಯಿ ಅಂಬೇಡ್ಕರ್ ಹಾಗೂ

> ಅಂತಾರಾಷ್ಟ್ರೀಯ ಮಹಿಳಾ ದಿನವು, ಬದುಕಿನ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಸಾಧನೆಗಳು, ಹೋರಾಟಗಳು ಮತ್ತು ಸ್ಥಿತಿಸ್ಥಾಪಕತ್ವವನ್ನು ಗುರುತಿಸುವ ಜಾಗತಿಕ ಚಳುವಳಿಯಾಗಿದೆ.
> -ಪ್ರೊ. ಯಶವಂತರಾಯ ಅಷ್ಠಗಿ
> ಕೃಷಿ ಶ್ರೀ ಪ್ರಶಸ್ತಿ ಪುರಸ್ಕೃತ ಲೇಖಕ, ಕಲಬುರಗಿ

ಅಕ್ಕರದವ್ವ ಸಾವಿತ್ರಿಬಾಯಿ ಫುಲೆ, ಕಿತ್ತೂರು ರಾಣಿ ಚೆನ್ನಮ್ಮ ಸೇರಿದಂತೆ ಅನೇಕ ವೀರ ಮಹಿಳೆಯರು ದೇಶಕ್ಕೆ ನೀಡಿದ ಅಪಾರ ಕೊಡುಗೆ ಮತ್ತು ಉದಾತ್ತ ಮೌಲ್ಯಗಳ ಕುರಿತು ಹೆಚ್ಚಿನ ಮಾಹಿತಿ ನೀಡಿದರು.

ಎಚ್ ಕೆ ಇ ಸಂಸ್ಥೆ ಆಡಳಿತ ಮಂಡಳಿ ಸದಸ್ಯ ಡಾ ಶರಣಪ್ಪಗಿರಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸಮತಾ ಸೈನಿಕ ದಳದ ವಿಭಾಗೀಯ


ಉದಯವಾಹಿನಿ ಚಿತ್ರ

> ಎಲ್ಲಿ ಹೆಣ್ಣು ಮಕ್ಕಳನ್ನು ಗೌರವಿಸುತ್ತಾರೋ ಅಲ್ಲಿ ದೇವತೆಗಳು ನೆಲೆಸುತ್ತಾರೆ ಎಂಬ ಮಾತಿದೆ. ಪವಿತ್ರ ಮಾತೆಯರ ನೆನಪಿನ ಈ ದಿನ ಕೇವಲ ಮಾರ್ಚ್ 8ಕ್ಕೆ ಸೀಮಿತವಾಗದೆ ವರ್ಷದ 365 ದಿನಗಳು ಮಹಿಳೆಯರ ಸಂತೋಷದ ದಿನಗಳಾದಾಗ ಮಾತ್ರ ಮಹಿಳಾ ದಿನಾಚರಣೆ ಅರ್ಥಪೂರ್ಣವಾದೀತು
> -ಹುಲೇಪ್ಪ ಹೇರೂರ, ಮತ್ತು ಗೀತಾ ಭರಣಿ, ನಿವೃತ್ತ ಸರಕಾರಿ ಅಭಿಯೋಜಕ

ಅಧ್ಯಕ್ಷ, ಸಂಜೀವ ಟಿ ಮಾಲೆ ಹಾಗೂ ಜಿಲ್ಲಾಧ್ಯಕ್ಷ ಈರಣ್ಣ ಜಾನೆ ಮಾತನಾಡಿ,ಆಧುನಿಕ ಸಮಾಜದಲ್ಲಿ ಮಹಿಳೆ ಪುರುಷನಷ್ಟೇ ಪ್ರಬುದ್ಧಳಾದರೂ ಸಹ ಹಲವಾರು ಕ್ಷೇತ್ರಗಳಲ್ಲಿ ಪುರುಷನಷ್ಟೇ ಸಮಾನವಾದ ಅವಕಾಶ ಸಿಗುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.

ಸಮಾಜ ಸೇವಕಿ ಹಾಗೂ ನಾಲ್ಕು ಚಕ್ರ ತಂಡದ ಮುಖ್ಯಸ್ಥೆ ಮಾಲಾ ಕಣ್ಣಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಹೆಣ್ಣು ಭ್ರೂಣಹತ್ಯೆ, ಹೆಣ್ಣು ಮಕ್ಕಳ ಮಾರಾಟ, ಅತ್ಯಾಚಾರ ಪ್ರಕರಣಗಳು ಹೆಚ್ಚುತ್ತಿದ್ದು ಪ್ರತಿ ಹೆಣ್ಣುಮಕ್ಕಳ ಪೋಷಕರು ಜಾಗೃತರಾಗಬೇಕು ಕಿವಿಮಾತು ಎಂದರು.

ಜಾನಪದ ಕಲಾವಿದ ಎಂ ಎನ್ ಸುಗಂಧಿ , ವೀರಣ್ಣ ಪಾಟೀಲ್ ಜಗತಿ, ಮಹಾದೇವ ನಾಟೀಕರ್, ಖಿತಲಪ್ಪ ಕಟ್ಟಿಮನಿ , ಸೋಮಶೇಖರ್ ಸಾಹುಕಾರ, ಗುಂಡಪ್ಪ ಮಾಳಗೆ, ಮಿಲಿಂದ್ ಕಣಮಸ, ಮಲ್ಲಿಕಾರ್ಜುನ ಇಟೀಕರ್, ಸಿದ್ಧಾರ್ಥ ಕಣಮಸ್, ಶಿವರಾಯ ಖಣಗೆ, ಮಣಮಂತ ಜಾನೆ, ಸಾಯಬಣ್ಣ ಬೆಳಮಗಿ ಸೇರಿದಂತೆ ವೃದ್ಧಾಶ್ರಮದ ಸಿಬ್ಬಂದಿ ವರ್ಗ ಹಾಗೂ ಕರ್ನಾಟಕ ಸಮತಾ ಸೈನಿಕ ದಳದ ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಮಹಿಳಾಪರವಾದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ದಿ. ಕು.ಅಕ್ಷತಾ ಈರಣ್ಣ ಜಾನೆ ಅವರ ಜನ್ಮದಿನ ಆಚರಿಸಿ ಅನ್ನದಾಸೋಹ ಮಾಡಲಾಯಿತು.

# ಲೋಕಸಭಾ ಕ್ಷೇತ್ರ ಪುನರ್ ವಿಂಗಡಣೆ ವಿರುದ್ಧ ಹೋರಾಟಕ್ಕೆ ಕೈಜೋಡಿಸುವಂತೆ ಸ್ಟಾಲಿನ್ ಪತ್ರ

**ಚೆನ್ನೈ:** ಲೋಕಸಭಾ ಕ್ಷೇತ್ರ ಪುನರ್ ವಿಂಗಡಣೆ ಪ್ರಕ್ರಿಯೆ ಅನ್ಯಾಯಯುತವಾಗಿದ್ದು, ಈ ವಿಚಾರ ದಲ್ಲಿ ರಾಜಿಯಾಗದೆ ಹೋರಾಡಲು ತಮಿಳುನಾಡು ಜೊತೆ ಕೈ ಜೋಡಿಸಲು, ಜಂಟಿ ಕ್ರಿಯಾ ಸಮಿತಿ ಭಾಗವಾಗಲು ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಅವರು ಕರ್ನಾಟಕ ಸೇರಿದಂತೆ ಏಳು ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಆಹ್ವಾನಿಸಿದ್ದಾರೆ. ಕೇರಳ, ಕರ್ನಾಟಕ, ತೆಲಂಗಾಣ, ಪಶ್ಚಿಮ ಬಂಗಾಳ, ಪಂಜಾಬ್, ಒಡಿಶಾ ಮುಖ್ಯಮಂತ್ರಿಗಳು, ಪಕ್ಷದ ಮುಖ್ಯಸ್ಥರಿಗೆ ಪತ್ರ ಬರೆದಿರುವ ಸ್ಟಾಲಿನ್, ಮಾರ್ಚ್ 22ರಂದು ಚೆನ್ನೈನಲ್ಲಿ ಜಂಟಿ ಕ್ರಿಯಾ ಸಮಿತಿಯ ಉದ್ಘಾಟನಾ ಸಭೆ ನಡೆಯಲಿದ್ದು, ಒಗ್ಗಟ್ಟಿನಿಂದ ಮುಂದೆ ಸಾಗಲು ಅದರಲ್ಲಿ ಪಾಲ್ಗೊಳ್ಳುವಂತೆ ಒತ್ತಾಯಿಸಿದ್ದಾರೆ. ಜನಸಂಖ್ಯೆ ಆಧಾರದಲ್ಲಿ ಎರಡು ವಿಧಾನದಲ್ಲಿ ಕ್ಷೇತ್ರ ಪುನರ್ ವಿಂಗಡಣೆ ಪ್ರಕ್ರಿಯೆ ಮಾಡ ಲಾಗುತ್ತಿದ್ದು, ಮೊದಲ ಹಂತದಲ್ಲಿ ಈಗ ಇರುವ 543 ಕ್ಷೇತ್ರಗಳನ್ನು ರಾಜ್ಯಗಳ ನಡುವೆ ಪುನರ್ ಹಂಚಲಾಗುತ್ತದೆ. ಎರಡನೇ ಹಂತದಲ್ಲಿ ಕ್ಷೇತ್ರಗಳ ಸಂಖ್ಯೆಯನ್ನು 800ಕ್ಕೂ ಮೀರಿ ಹೆಚ್ಚಿಸಲಾಗುತ್ತದೆ. 2026ರ ನಂತರದ ಜನಸಂಖ್ಯೆಯ ಆಧಾರದ ಮೇಲೆ ಕ್ಷೇತ್ರ ಪುನರ್ ವಿಂಗಡಣೆ ಪ್ರಕ್ರಿಯೆ ನಡೆದರೆ, ಜನ ಸಂಖ್ಯಾ ನಿಯಂತ್ರಣ ಕ್ರಮಗಳನ್ನು



ಯಶಸ್ವಿಯಾಗಿ ಜಾರಿಗೊಳಿಸಿದ ಎಲ್ಲಾ ರಾಜ್ಯಗಳು ಗಮನಾರ್ಹವಾಗಿ ಕ್ಷೇತ್ರಗಳನ್ನು ಕಳೆದು ಕೊಳ್ಳುತ್ತವೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ. ಜನ ಸಂಖ್ಯೆಯ ಬೆಳವ ಣಿಗೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು, ರಾಷ್ಟ್ರೀಯ ಅಭಿವೃದ್ಧಿ ಗುರಿ ಸಾಧಿಸಲು ನಾವು ದಂಡನೆಗೆ ಒಳಗಾಗಬಾರದು ಎಂದು ಪತ್ರ ದಲ್ಲಿ ತಿಳಿಸಿದ್ದಾರೆ. ಇಂತಹ ಮಹ ತ್ವದ ವಿಚಾರಗಳ ಬಗ್ಗೆ ಕೇಂದ್ರ ಸರ್ಕಾರ ಯಾವುದೇ ಸ್ಪಷ್ಟತೆ ನೀಡುತ್ತಿಲ್ಲ ಅಥವಾ ಕಳವಳವನ್ನು ಬಗೆ ಹರಿಸುತ್ತಿಲ್ಲ.

> **ಕೇರಳ, ಆಂಧ್ರಪ್ರದೇಶ, ತೆಲಂಗಾಣ, ಕರ್ನಾಟಕ, ಪಶ್ಚಿಮ ಬಂಗಾಳ, ಒಡಿಶಾ, ಪಂಜಾಬ್‌ನ ಪಕ್ಷಗಳ ಮುಖ್ಯಸ್ಥರಿಗೂ ಪತ್ರ ಬರೆದಿದ್ದು, ಈ ಅನ್ಯಾಯದ ವಿರುದ್ಧ ರಾಜಿಯಿಲ್ಲದ ಹೋರಾಟಕ್ಕೆ ಕರೆ ನೀಡಿದ್ದಾರೆ. ಮಾರ್ಚ್ 22ರಂದು ಚೆನ್ನೈನಲ್ಲಿ ಮೊದಲ ಜೆಎಸಿ ಸಭೆ ನಡೆಯಲಿದ್ದು, ನಾವು ಪ್ರತ್ಯೇಕ ರಾಜಕೀಯ ಘಟಕಗಳಾಗಿರದೆ ನಮ್ಮ ಜನರ ಭವಿಷ್ಯದ ರಕ್ಷಕರಾಗಿ ಒಟ್ಟಾಗಿ ನಿಲ್ಲೋಣ ಎಂದು ಸ್ಟಾಲಿನ್ ಕರೆ ನೀಡಿದ್ದಾರೆ.**

ಪ್ರಜಾಪ್ರಭುತ್ವದ ತಳಪಾಯ ಅಲುಗಾಡುತ್ತಿರುವಾಗ, ನಮ್ಮ ರಾಜ್ಯಗಳ ಭವಿಷ್ಯ ತೂಗುಯ್ಯಾಲೆಯಲ್ಲಿರುವಾಗ ಪಾರದರ್ಶಕ ಮಾತುಕತೆಗೆ ನಾವು ಅರ್ಹತೆ ಹೊಂದಿಲ್ಲವೇ? ಎಂದು ಅವರು ಪ್ರಶ್ನಿಸಿದ್ದಾರೆ.

ಕೇಂದ್ರ ಸರ್ಕಾರದ ಕ್ಷೇತ್ರ ಪುನರ್ ವಿಂಗಡಣೆ ಯೋಜನೆ ಒಕ್ಕೂಟ ವ್ಯವಸ್ಥೆ ಮೇಲಿನ ಘೋರ ದಾಳಿ ಎಂದಿರುವ ಸ್ಟಾಲಿನ್, ಜನಸಂಖ್ಯೆ ನಿಯಂತ್ರಣ ಸಾಧಿಸಿ, ಉತ್ತಮ ಆಡಳಿತ ಹೊಂದಿರುವ ರಾಜ್ಯಗಳನ್ನು ಶಿಕ್ಷಿಸುತ್ತಿದ್ದಾರೆ. ಈ ಪ್ರಜಾಸತ್ತಾತ್ಮಕ ಅನ್ಯಾಯಕ್ಕೆ ಅವಕಾಶ ಕೊಡು ವುದಿಲ್ಲ ಎಂದು ಕೇರಳ, ಕರ್ನಾಟಕ, ತೆಲಂ ಗಾಣ, ಪಶ್ಚಿಮ ಬಂಗಾಳ, ಒಡಿಶಾ, ಪಂಜಾಬ್ ಸಿಎಂಗಳಿಗೆ ಪತ್ರ ಬರೆದಿರುವುದಾಗಿ ಹೇಳಿದ್ದಾರೆ.

### ಕೊನೆಗೂ ಭಾರತಕ್ಕೆ ತಪ್ಪಿನ ಅರಿವಾಗಿದೆ। ಯಾರೋ ಅವರ ತಪ್ಪನ್ನು ಬಯಲಿಗೆ ಎಳೆದಿದ್ದಾರೆ
### ಭಾರತಕ್ಕೆ ತನ್ನ ದುಬಾರಿ ತೆರಿಗೆ ಪದ್ಧತಿಯ ತಪ್ಪು ಅರಿವಾಗಿದೆ। ಕೊನೆಗೂ ಅದನ್ನು ಅವರು ಒಪ್ಪಿಕೊಂಡಿದ್ದಾರೆ

# ಭಾರತ ಸುಂಕ ಕಡಿತಗೊಳಿಸಲು ನಿರ್ಧರಿಸಿದೆ: ಟ್ರಂಪ್

**ವಾಷಿಂಗ್ಟನ್:** ಅಧ್ಯಕ್ಷಗಾದಿಗೆ ಏರಿದ ನಂತರ ಸದಾ ಒಂದಲ್ಲಾ ಒಂದು



ಕಾರಣಕ್ಕೆ ಸುದ್ದಿಯಲ್ಲಿರುವ ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಐತಿಹಾಸಿಕ ಘೋಷಣೆಯೊಂದನ್ನು ಮಾಡಿದ್ದಾರೆ.

ಅಮೆರಿಕಾದ ವಸ್ತುಗಳ ಮೇಲಿನ ಆಮದು ತೆರಿಗೆ ಗಳನ್ನು ಗಣನೀಯವಾಗಿ ಇಳಿಸಲು ಭಾರತ ಒಪ್ಪಿಕೊಂಡಿದೆ ಎಂದು ಟ್ರಂಪ್ ಘೋಷಿಸಿದ್ದಾರೆ.

ಟ್ರಂಪ್ ಅವರ ಪ್ರಕಾರ, ಭಾರತವು ಸ್ವತಃ ತೆರಿಗೆಯನ್ನು ಕಡಿತಗೊಳಿಸಲು ನಿರ್ಧರಿಸಿದ್ದಾರೆ. ಏಪ್ರಿಲ್ 2ರಿಂದ ಅನ್ವಯವಾಗುವಂತೆ ಅಮೆರಿಕಾವು ಭಾರತಕೆ ಪ್ರತಿಫಲ ತೆರಿಗೆಯನ್ನು ವಿಧಿಸಲಿದೆ. ಭಾರತವು ಅಮೆರಿಕದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲಿನ ತೆರಿಗೆಗಳನ್ನು ಕಡಿಮೆ ಮಾಡಲು ಒಪ್ಪಿಕೊಂಡಿದೆ ಎನ್ನುವ ಹೇಳಿಕೆಯನ್ನು ನೀಡಿದ್ದಾರೆ.

> **ವಿಶ್ವದಲ್ಲಿನ ಪ್ರತಿಯೊಂದು ದೇಶಗಳು ಅಮೆರಿಕಾವನ್ನು ಲೂಟಿ ಮಾಡಿವೆ, ಇನ್ನು ಮುಂದೆ ಹಾಗಾಗಲು ನಾನು ಬಿಡುವುದಿಲ್ಲ, ಭಾರತವು ವಿಶ್ವದಲ್ಲೇ ಅತಿ ಹೆಚ್ಚು ತೆರಿಗೆ ಹೊಂದಿರುವ ದೇಶಗಳಲ್ಲಿ ಒಂದಾಗಿದೆ. ಭಾರತ ಇದನ್ನು ಮರುಪರಿಶೀಲಿಸಬೇಕು, ಇಲ್ಲದಿದ್ದರೆ ನಮ್ಮ ಮತ್ತು ಭಾರತದ ನಡುವಿನ ಸಂಬಂಧವನ್ನು ಮರುಚಿಂತಿಸಬೇಕಾಗುತ್ತದೆ**
>
> **– ಹೊವಾರ್ಡ್ ಲುಟ್ನಿಕ್**
> **ಅಮೆರಿಕಾ ವಾಣಿಜ್ಯ ಕಾರ್ಯದರ್ಶಿ**

ಭಾರತಕ್ಕೆ ತನ್ನ ದುಬಾರಿ ತೆರಿಗೆ ಪದ್ಧತಿಯ ತಪ್ಪು ಅರಿವಾಗಿದೆ, ಕೊನೆಗೂ ಅದನ್ನು ಅವರು ಒಪ್ಪಿಕೊಂಡಿದ್ದಾರೆ. ಯಾರೋ ಅವರ ತೆರಿಗೆ ಪದ್ಧತಿಯ ತಪ್ಪನ್ನು ಬಯಲಿಗೆ ಎಳೆದಿದ್ದಾರೆ.

ಹಾಗಾಗಿ, ವಸ್ತುಗಳ ಮೇಲಿನ ತೆರಿಗೆ ಗಳನ್ನು ಕಡಿಮೆ ಮಾಡಲು ಮೋದಿ ಸರ್ಕಾರ ಒಪ್ಪಿಕೊಂಡಿದೆ ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಅಮೆರಿಕಾದ ವ್ಯಾಪಾರ ನೀತಿಗೆ ವಿರುದ್ಧವಾಗಿ ಭಾರತದ ವ್ಯಾಪಾರ ನೀತಿಗಳಿವೆ ಎಂದು ಆರೋಪಿಸಿ, ಏಪ್ರಿಲ್ 2ರಿಂದ ಅನ್ವಯವಾಗುವಂತೆ, ಹೊಸ ತೆರಿಗೆ ಪದ್ಧತಿಯ ಘೋಷಣೆಯನ್ನು ಟ್ರಂಪ್ ಮಾಡಿದ್ದರು. ಕೊನೆಗೂ ಭಾರತಕ್ಕೆ ಅವರ ತಪ್ಪಿನ ಅರಿವಾಗಿದೆ ಎಂದು ಟ್ರಂಪ್ ಹೇಳಿದ್ದಾರೆ.

ಭಾರತದಲ್ಲಿ ಅಮೆರಿಕಾ ವ್ಯಾಪಾರ ನಡೆಸಲು ಸಾಧ್ಯವಾಗದಷ್ಟು ತೆರಿಗೆ ಪದ್ಧತಿಯಿದೆ. ಇದನ್ನು ಕೊನೆಗೂ ಅವರು ಒಪ್ಪಿಕೊಂಡಂತಾಗಿದೆ. ಅಮೆರಿಕಾದಿಂದ ಆಮದು ಮಾಡಿಕೊಳ್ಳಲಾಗುವ ಹಲವು ವಸ್ತುಗಳ ತೆರಿಗೆಯನ್ನು ಭಾರತ ಕಮ್ಮಿ ಮಾಡಲಿದೆ ಎನ್ನುವ ಸುದ್ದಿ ಹರಿದಾಡುತ್ತಿತ್ತು.

ಇದಕ್ಕೆ ಪೂರಕ ಎನ್ನುವಂತೆ ಡೊನಾಲ್ಡ್ ಟ್ರಂಪ್ ಘೋಷಣೆಯನ್ನು ಮಾಡಿದ್ದಾರೆ. ತಮ್ಮ ವ್ಯಾಪರ ವಹಿವಾಟುಗಳು ಏನೂ ಧಕ್ಕೆಯಿಲ್ಲದಂತೇ ಸಾಗಲು, ವಿಶ್ವದ ಹಲವು ವಲಯಗಳ ಬೃಹತ್ ಕಂಪೆನಿಗಳು, ಅಮೆರಿಕ ಸರ್ಕಾರದ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ. ಅದರಲ್ಲಿ ಪ್ರಮುಖವಾಗಿ, ಆಟೋಮೊಬೈಲ್, ಎಲೆಕ್ಟ್ರಾನಿಕ್ಸ್, ಗಾರ್ಮೆಂಟ್ಸ್

**ತೆರಿಗೆ ಕಡಿಮೆ ಮಾಡಲು ಮೋದಿ ಸರ್ಕಾರ ಒಪ್ಪಿಕೊಂಡಿದೆ**



> **ಸದಾ ಸುದ್ದಿಯಲ್ಲಿರುವ ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಭಾರತವು ತನ್ನ ತೆರಿಗೆ ಪದ್ಧತಿಯಲ್ಲಿ ಕೆಲವೊಂದು ಬದಲಾವಣೆಯನ್ನು ತರಲು ಒಪ್ಪಿಕೊಂಡಿದೆ. ಯಾರೋ ಅವರ ತೆರಿಗೆ ಪದ್ಧತಿಯ ತಪ್ಪನ್ನು ಬಯಲಿಗೆ ಎಳೆದಿದ್ದಾರೆ. ಹಾಗಾಗಿ, ವಸ್ತುಗಳ ಮೇಲಿನ ತೆರಿಗೆಗಳನ್ನು ಕಡಿಮೆ ಮಾಡಲು ಮೋದಿ ಸರ್ಕಾರ ಒಪ್ಪಿಕೊಂಡಿದೆ ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಭಾರತವು ನಮ್ಮ ವಸ್ತುಗಳ ಮೇಲೆ ಶೇ.100ಕ್ಕಿಂತ ಹೆಚ್ಚು ತೆರಿಗೆಯನ್ನು ವಿಧಿಸುತ್ತಿದೆ. ಇದು, ಚೀನಾವು ನಮ್ಮ ಮೇಲೆ ವಿಧಿಸುವ ತೆರಿಗೆಗಿಂತ ಎರಡು ಪಟ್ಟು, ದಕ್ಷಿಣ ಕೊರಿಯಾಗಿಂತ ನಾಲ್ಕು ಪಟ್ಟು ಹೆಚ್ಚಾಗಿದೆ. ಹಾಗಾಗಿ, ನಾವು ಕೂಡಾ ಭಾರತಕ್ಕೆ ಹೊಸ ತೆರಿಗೆಯನ್ನು ಏಪ್ರಿಲ್ 2ರಿಂದ ಜಾರಿಗೆ ತರಲಿದ್ದೇವೆ ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದರು.**

ಮುಂತಾದ ಪ್ರಮುಖ ಉದ್ಯಮಗಳಿವೆ.


ಅವರು ಏನು ನಮಗೆ ತೆರಿಗೆ ವಿಧಿಸುತ್ತಿದ್ದಾರೋ ಅದಕ್ಕೆ ಕೌಂಟರ್ ಆಗಿ ನಾವು ಅವರಿಗೆ ಟ್ಯಾಕ್ಸ್ ಹಾಕುತ್ತೇವೆ. ಏಪ್ರಿಲ್ 1 ಮೂರ್ಖರ ದಿನವಾಗಿದ್ದರಿಂದ, ಏ.2ರಿಂದ ಹೊಸ ಪದ್ಧತಿ ಜಾರಿಗೆ ತರುತ್ತಿದ್ದೇನೆ. ಅಮೆರಿಕಾ ಇದುವರೆಗೆ ಕಂಡು ಕೇಳರಿಯದಷ್ಟು ಹೊಸ ಉದ್ಯೋಗಳು ಸೃಷ್ಟಿಯಾಗಲಿವೆ ಎಂದರು.

## ಲಲಿತ್ ಮೋದಿ ಪಾಸ್ಪೋರ್ಟ್ ಸರೆಂಡರ್

**ಲಂಡನ್:** ಬಂಧನದ ಭೀತಿಯಿಂದಾಗಿ ದೇಶ ಬಿಟ್ಟು ಪರಾರಿಯಾಗಿರುವ ಬಹುಕೋಟಿ ವಂಚಕ ಇಂಡಿಯನ್ ಪ್ರೀಮಿಯರ್ ಲೀಗ್ನ ಮಾಜಿ ಮುಖ್ಯಸ್ಥ ಲಲಿತ್ ಮೋದಿ ಅವರು ತಮ್ಮ ಭಾರತೀಯ ಪಾಸ್ಪೋರ್ಟ್ ಅನ್ನು ಲಂಡನ್ನಲ್ಲಿರುವ ಭಾರತೀಯ ಹೈಕಮೀಷನ್‌ಗೆ ಒಪ್ಪಿಸಿದ್ದಾರೆ. ಭಾರತೀಯ ತನಿಖಾ ಸಂಸ್ಥೆಗಳು ಆರ್ಥಿಕ ಅಪರಾಧಿ ಎಂದು ಘೋಷಿಸಿರುವ ಮೋದಿ, ಪೆಸಿಫಿಕ್ ಮಹಾಸಾಗರದ ದ್ವೀಪ ರಾಷ್ಟ್ರವಾದ ವನವಾಟುನ ಪೌರತ್ವವನ್ನು ಪಡೆದಿದ್ದಾರೆ ಎಂದು ವರದಿಯಾಗಿದೆ. ಇದನ್ನು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಖಚಿತಪಡಿಸಿದ್ದಾರೆ.

ಲಲಿತ್ ಮೋದಿ ಅವರು ಲಂಡನ್ನಲ್ಲಿರುವ ಭಾರತೀಯ ಹೈಕಮೀಷನ್ನಲ್ಲಿ ತಮ ಪಾಸ್ಪೋರ್ಟ್ ಅನ್ನು ಸರೆಂಡರ್ ಮಾಡಲು ಅರ್ಜಿ ಸಲ್ಲಿಸಿದ್ದಾರೆ.

ಅಸ್ತಿತ್ವದಲ್ಲಿರುವ ನಿಯಮಗಳು, ಕಾನೂನಿನ ಕಾರ್ಯವಿಧಾನಗಳ ಬೆಳಕಿನಲ್ಲಿ ಈ ಅರ್ಜಿಯನ್ನು ಪರಿಶೀಲಿಸಲಾಗುವುದು. ಅವರು ವನವಾಟು ಪೌರತ್ವವನ್ನು ಪಡೆದಿರುವುದು ನಮಗೆ ತಿಳಿದಿದೆ. ಕಾನೂನಿನಡಿ ನಾವು ಅವರ ವಿರುದ್ಧ ಪ್ರಕರಣವನ್ನು ಮುಂದುವರಿಸುತ್ತಿದ್ದೇವೆ ಎಂದು ಅವರು ತಿಳಿಸಿದರು. ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಉಪಾಧ್ಯಕ್ಷ ಹುದ್ದೆಯನ್ನು ಅಲಂಕರಿಸುವಾಗ ಲಲಿತ್ ಮೋದಿ ಅವರ ಮೇಲೆ ಬಿಡ್ಡಿಂಗ್ ಅಕ್ರಮಗಳು ಮತ್ತು ಹಣ ವರ್ಗಾವಣೆ ಹಾಗೂ ದೇಶಿ ನಿಮಯ ನಿರ್ವಹಣಾ ಕಾಯ್ದೆ, 1999



(ಫೆಮಾ) ನಿಬಂಧನೆಗಳನ್ನು ಉಲ್ಲಂಘಿಸಿದ ಆರೋಪ ಹೊರಿಸಲಾಗಿತ್ತು. ಲಲಿತ್ ಮೋದಿ ಅವರು ಮುಂಬೈನಲ್ಲಿ ಆದಾಯ ತೆರಿಗೆ ಮತ್ತು ಜಾರಿ ನಿರ್ದೇಶನಾಲಯದ (ಇಡಿ) ಅಧಿಕಾರಿಗಳ ವಿಚಾರಣೆಯಲ್ಲಿ ಒಮೆ ಮಾತ್ರ ಹಾಜರಾಗಿದ್ದರು. ಮೇ 2010ರಲ್ಲಿ ಅವರು ದೇಶದಿಂದ ಪಲಾಯನ ಮಾಡಿ ಯುಕೆಗೆ ತೆರಳಿದ್ದರು. ಐಪಿಎಲ್ ಆರಂಭದ ಹಿಂದೆ ಪ್ರಮುಖ ಪಾತ್ರ ವಹಿಸಿದ್ದ ಲಲಿತ್ ಮೋದಿ, ಇಂದು ಅದು ವಿಶ್ವಕ್ರೀಡೆಯಲ್ಲಿ ಒಂದು ದೊಡ್ಡ ಸಂಸ್ಥೆಯಾಗಲು ಕಾರಣರಾಗಿದ್ದರು. 2009ರಲ್ಲಿ, ಭಾರತದಲ್ಲಿ ಸಾರ್ವತ್ರಿಕ ಚುನಾವಣೆಗಳಿಂದಾಗಿ, ಐಪಿಎಲ್ ಅನ್ನು ದಕ್ಷಿಣ ಆಫ್ರಿಕಾಕ್ಕೆ ವರ್ಗಾಹಿಸಬೇಕಾಯಿತು. 2010 ರ ಐಪಿಎಲ್ ಫೈನಲ್ ನಂತರ, ಪುಣೆ, ಕೊಚ್ಚಿ ಎಂಬ ಎರಡು ಹೊಸ ಫ್ರಾಂಚೈಸಿಗಳ ಬಿಡ್ಡಿಂಗ್ನಲ್ಲಿ ದುರುಪಯೋಗ, ಅಶಿಸ್ತು ಆರ್ಥಿಕ ಅಕ್ರಮಗಳ ಆರೋಪದ ಮೇಲೆ ಲಲಿತ್ ಮೋದಿಯನ್ನು ಬಿಸಿಸಿಐನಿಂದ ಅಮಾನತುಗೊಳಿಸಲಾಯಿತು. ಲಲಿತ್ ಮೋದಿ ಅವರ ಮೇಲೆ ಆರ್ಥಿಕ ದುರುಪಯೋಗ ಮತ್ತು ಕಚೇರಿಯಿಂದ ಅನಧಿಕೃತ ಹಣ ವರ್ಗಾವಣೆ ಆರೋಪವಿದೆ.

# ವಿಪಕ್ಷಗಳ ಆರೋಪದ ಬೆನ್ನಲ್ಲೇ ಮಹತ್ವದ ಕ್ರಮಕ್ಕೆ ಮುಂದಾದ ಕೇಂದ್ರ ಚುನಾವಣಾ ಆಯೋಗ

**ನವದೆಹಲಿ:** ಮತದಾರರ ಪಟ್ಟಿಯ ಪ್ರಾಮಾಣಿಕತೆ ಬಗ್ಗೆ ವಿರೋಧ ಪಕ್ಷದ ನಾಯಕರು ಕಳವಳ ವ್ಯಕ್ತಪಡಿಸಿದ ಬೆನ್ನಲ್ಲೇ ಚುನಾವಣಾ ಆಯೋಗ ಮಹತ್ವದ ಕ್ರಮಕ್ಕೆ ಮುಂದಾಗಿದೆ. ಮುಂದಿನ ಮೂರು ತಿಂಗಳಲ್ಲಿ ನಕಲಿ ಮತದಾರರ ಗುರುತಿನಚೀಟಿ ಸಂಖ್ಯೆಗಳ ಸಮಸ್ಯೆಯನ್ನು ಪರಿಹರಿಸುವುದಾಗಿ ತಿಳಿಸಿದೆ. ಹಲವು ಜನ ಒಂದೇ ಚುನಾವಣಾ ಫೋಟೋ ಗುರುತಿನ ಚೀಟಿ ಸಂಖ್ಯೆಯನ್ನು ಹೊಂದಿರುವ ಸಾಧ್ಯತೆ ಇದೆ ಎನ್ನುವುದನ್ನು ಚುನಾವಣಾ ಆಯೋಗ ಒಪ್ಪಿಕೊಂಡಿತ್ತು.

ಆದರೆ ವಿವಿಧ ರಾಜ್ಯಗಳು ಒಂದೇ ಸಂಖ್ಯಾ ಸರಣಿಯನ್ನು ಬಳಕೆ ಮಾಡಿರುವುದು ನಕಲು ಮತದಾರರನ್ನು ಸೂಚಿಸುವುದಿಲ್ಲ ಎಂದು ತಿಳಿಸಿತ್ತು. ಮತದಾರರ ಪಟ್ಟಿ ತಿದ್ದು ಪಡಿಯಲ್ಲಿ ಚುನಾವಣಾ ಆಯೋಗ ಭಾಗಿಯಾಗಿದೆ ಎಂದು ಆರೋಪಿಸಿದ ಬಳಿಕ ಟಿಎಂಸಿ ಕಾಂಗ್ರೆಸ್, ಒಂದೇ ರಾಜ್ಯದಲ್ಲಿ ಹಲವು ಮತ ದಾರರು ಒಂದೇ ಮತದಾರರ ಗುರುತಿನ ಚೀಟಿ ಸಂಖ್ಯೆಯನ್ನು ಬಳಸಿದ ಪ್ರಕರಣಗಳು ವರದಿಯಾಗಿವೆ ಎಂದು ಆರೋಪಿಸಿದೆ. ಟೆಕ್ನಿಕಲ್ ತಂಡಗಳು ಮತ್ತು ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ಜೊತೆ ಚರ್ಚೆ ನಡೆಸುವುದಾಗಿ ಸಮಿತಿ ತಿಳಿಸಿದ್ದು, ಎಪಿಕ್ ಸಂಖ್ಯೆಯನ್ನು ಲೆಕ್ಕಿಸದೆ, ಒಂದು




ನಿರ್ದಿಷ್ಟ ಮತಗಟ್ಟೆಯ ಮತದಾರರ ಪಟ್ಟಿಗೆ ಲಿಂಕ್ ಮಾಡಲಾದ ಮತದಾರರು ಆ ಮತಗಟ್ಟೆಯಲ್ಲಿ ಮಾತ್ರ ಮತ ಚಲಾಯಿಸಲು ಅವಕಾಶ ಇರುತ್ತದೆ. ಬೇರೆ ಕಡೆ ಮತ ಹಾಕಲು ಅವಕಾಶ ಇರುವುದಿಲ್ಲ ಎಂದು ಹೇಳಿದೆ.

2000ನೇ ಇಸಯಲ್ಲಿ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ಎಪಿಕ್ ಸರಣಿಯನ್ನು ಹಂಚಿಕೆ ಮಾಡಿದಾಗಿನಿಂದ, ಕೆಲವು ಪ್ರಾದೇಶಿಕ ಚುನಾವಣಾ ಅಧಿಕಾರಿಗಳು ಸರಿಯಾದ ಸರಣಿಯನ್ನು ಬಳಸಲಿಲ್ಲ. ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಸ್ವತಂತ್ರವಾಗಿ ಮತದಾರರ ಪಟ್ಟಿಯ ಅಂಕಿ ಅಂಶಗಳನ್ನು ನಿರ್ವಸುತ್ತಿದ್ದರಿಂದ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಲ್ಲಿ ತಪ್ಪಾದ ಸರಣಿಗಳನ್ನು ಬಳಕೆ ಮಾಡಿದ್ದರಿಂದ ನಕಲಿ ಸಂಖ್ಯೆಗಳ ಸಮಸ್ಯೆ

**ಮತದಾರರಿಗೂ ಅನ್ವಯ**

> **ಚುನಾವಣಾ ಸಮಿತಿ ಮುಂದಿನ ಮೂರು ತಿಂಗಳಲ್ಲಿ ನಕಲಿ ಎಪಿಕ್ ಸಂಖ್ಯೆಯನ್ನು ಹೊಂದಿರುವ ಅಸ್ತಿತ್ವದಲ್ಲಿರುವ ಮತದಾರರಿಗೆ ಶಿಷ್ಟ ರಾಯ ಎಪಿಕ್ ಸಂಖ್ಯೆಯನ್ನು ನೀಡುವ ಮೂಲಕ ದೀರ್ಘಕಾಲದವರೆಗೆ ಬಾಕಿ ಇರುವ ಸಮಸ್ಯೆಯನ್ನು ಪರಿಹಾರ ಕಂಡುಕೊಳ್ಳಲು ನಿರ್ಧರಿಸಿದ್ದು, ಈ ಹೊಸ ವ್ಯವಸ್ಥೆಯು ಮುಂದಿನ ಮತದಾರರಿಗೂ ಅನ್ವಯವಾಗಲಿದೆ ಎಂದು ತಿಳಿಸಿದೆ.**
>
> **● ಪರಿಹಾರ ಕಂಡು ಕೊಳ್ಳಲು ನಿರ್ಧಾರ**

ಯನ್ನು ಪತ್ತೆಹಚ್ಚಲು ಸಾಧ್ಯವಾಗಲಿಲ್ಲ ಎಂದು ಚುನಾವಣಾ ಆಯೋಗ ತಿಳಿಸಿದೆ.

ನಕಲಿ ಮತದಾರರನ್ನು ಬಳಸಿಕೊಂಡು ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯು ಚುನಾವಣಾ ಆಯೋಗದ ಜೊತೆ ಒಪ್ಪಂದ ಮಾಡಿಕೊಂಡಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.


## ಇಸ್ರೇಲ್‌ನಲ್ಲಿ ಭಾರತೀಯ ಕಾರ್ಮಿಕರ ರಕ್ಷಣೆ

**ಟೆಲ್ ಅವೀವಾ:** ಪಾಸ್‌ಪೋರ್ಟ್‌ಗಳನ್ನು ಕಸಿದುಕೊಂಡು ಒಂದು ತಿಂಗಳಿಗೂ ಹೆಚ್ಚು ಕಾಲ ಬಂಧನದಲ್ಲಿರಿಸಲ್ಪಟ್ಟಿದ್ದ ವೆಸ್ಟ್ ಬ್ಯಾಂಕ್‌ನಿಂದ ಕಾಣೆಯಾದ ಹತ್ತು ಭಾರತೀಯ ನಿರ್ಮಾಣ ಕಾರ್ಮಿಕರನ್ನು ಇಸ್ರೇಲ್ ಅಧಿಕಾರಿಗಳು ರಕ್ಷಿಸಿದ್ದಾರೆ. ಇಸ್ರೇಲ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಕಾರ್ಮಿಕರ ಆರೋಗ್ಯ ಮತ್ತು ಅವರ ಚೇತರಿಕೆಯನ್ನು ದೃಢಪಡಿಸಿದೆ ಮತ್ತು ''ಈ ವಿಷಯ ಇನ್ನೂ ತನಿಖೆ ಹಂತದಲ್ಲಿದೆ ಎಂದು ಹೇಳಿದೆ.

ಭಾರತೀಯ ರಾಯಭಾರ ಕಚೇರಿ ಇಸ್ರೇಲ್ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದೆ ಮತ್ತು ಅವರ ಸುರಕ್ಷತೆ ಮತ್ತು ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳಲು ವಿನಂತಿಸಿದೆ'' ಎಂದು ಹೇಳಿದೆ. ಇಸ್ರೇಲ್ ಜನಸಂಖ್ಯಾ ಮತ್ತು ವಲಸೆ ಪ್ರಾಧಿಕಾರದ ಪ್ರಕಾರ, ಉದ್ಯೋಗದ ಸುಳ್ಳು ಭರವಸೆಯ ಮೇರೆಗೆ ಪ್ಯಾಲೆಸ್ಟೀನಿಯನ್ನರು ಕಾರ್ಮಿಕರನ್ನು ಪಶ್ಚಿಮ ದಂಡೆಯ ಅಲ್-ಜಯೆಮ್ ಗ್ರಾಮಕ್ಕೆ ಕರೆದೊಯ್ದರು. ಅವರ ಪಾಸ್‌ಪೋರ್ಟ್‌ಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು ಮತ್ತು ಅಕ್ರಮವಾಗಿ ಇಸ್ರೇಲ್‌ಗೆ ನುಸುಳಲು ಪ್ರಯತ್ನಿಸಲು ಬಳಸಲಾಗಿದೆ ಎಂದು ಆರೋಪಿಸಲಾಗಿದೆ.

ಇಸ್ರೇಲ್ ಜನಸಂಖ್ಯಾ ಮತ್ತು ವಲಸೆ ಪ್ರಾಧಿಕಾರ, ಇಸ್ರೇಲ್ ರಕ್ಷಣಾ ಪಡೆಗಳು ಮತ್ತು ನ್ಯಾಯ ಸಚಿವಾಲಯವು ರಾತ್ರೋರಾತ್ರಿ ರಕ್ಷಣಾ ಕಾರ್ಯಾಚರಣೆಯನ್ನು ನಡೆಸಿತು ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ. ಅಧಿಕಾರಿಗಳು ಅವರ ಉದ್ಯೋಗ ಸ್ಥಿತಿಯನ್ನು ನಿರ್ಧರಿಸುವಾಗ ಕಾರ್ಮಿಕರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ.

ಭಾರತೀಯ ಪಾಸ್‌ಪೋರ್ಟ್‌ಗಳ ವಂಚನೆಯ



**ಈ ನೇಮಕಾತಿಗೆ ತಡೆ**

> **ಇಸ್ರೇಲ್ ತನ್ನ ನಿರ್ಮಾಣ ವಲಯದಲ್ಲಿ ಭಾರತೀಯ ಕಾರ್ಮಿಕರ ಒಳಹರಿವನ್ನು ಕಂಡಿದೆ, ಕಳೆದ ವರ್ಷ ಸುಮಾರು 16,000 ಜನರು ಆಗಮಿಸಿದ್ದಾರೆ. 2023ರ ಅಕ್ಟೋಬರ್ 7ರಂದು ಹಮಾಸ್ ದಾಳಿಯ ನಂತರ ಹತ್ತಾರು ಸಾವಿರ ಪ್ಯಾಲೆಸ್ಟೀನಿಯನ್ ನಿರ್ಮಾಣ ಕಾರ್ಮಿಕರು ದೇಶಕ್ಕೆ ಪ್ರವೇಶಿಸುವುದನ್ನು ನಿಷೇಧಿಸುವ ಇಸ್ರೇಲ್ ನಿರ್ಧಾರದ ನಂತರ ಈ ನೇಮಕಾತಿಗೆ ತಡೆ ಹಾಕಿದೆ.**

ಬಳಕೆಯನ್ನು ಪತ್ತೆಹಚ್ಚಿದೆ ಮತ್ತು ಅವುಗಳನ್ನು ಅವರ ನಿಜವಾದ ಮಾಲೀಕರಿಗೆ ಹಿಂದಿರುಗಿಸಿದೆ. ಇಸ್ರೇಲ್ ಚೆಕ್ ಪೋಸ್ಟ್‌ಗಳನ್ನು ಬೈಪಾಸ್ ಮಾಡಲು ಪ್ಯಾಲೆಸ್ಟೀನಿಯನ್ನರು ದಾಖಲೆ ಬಳಸಿದ್ದಾರೆ ಎಂದು ವರದಿ ಮಾಡಿದೆ. ನಂತರ ಇಸ್ರೇಲಿ ಪಡೆಗಳು ಚೆಕ್‌ಪಾಯಿಂಟ್‌ನಲ್ಲಿ ಕೆಲವು ಶಂಕಿತರನ್ನು ತಡೆದು ವಶಕ್ಕೆ ಪಡೆಯಲಾಗಿದೆ

## ಅರ್ಜೆಂಟೀನಾ ಪ್ರವಾಹ: 10 ಸಾವು

**ಬ್ಯೂನಸ್ ಐರೀಸ್:** ಅರ್ಜೆಂಟೀನಾದ ಬಂದರು ನಗರ ಬಹಿಯಾ ಬ್ಲಾಂಕಾದಲ್ಲಿ ಭಾರಿ ಮಳೆಯಾಗಿ ಉಂಟಾದ ಪ್ರವಾಹದಿಂದಾಗಿ ಕನಿಷ್ಠ 10 ಮಂದಿ ಮೃತಪಟ್ಟಿದ್ದು, ಸಾವಿರಾರು ಜನರನ್ನು ಸ್ಥಳಾಂತರಿಸಲಾಗಿದೆ. ನಗರದಲ್ಲಿ ಸತತವಾಗಿ ಮಳೆ ಸುರಿದಿದ್ದು, 8 ಗಂಟೆಯಲ್ಲಿ 40 ಸೆಂ.ಮೀನಷ್ಟು ಮಳೆಯಾಗಿದೆ. ಇದು, ಇಲ್ಲಿ ಒಂದು ವರ್ಷದಲ್ಲಿ ಬೀಳುವ ವಾಡಿಕೆ ಮಳೆ ಪ್ರಮಾಣವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮನೆಗಳು, ಆಸ್ಪತ್ರೆಗಳಿಗೆ ನೀರು ನುಗ್ಗಿ ಜನರು-ರೋಗಿಗಳು ಪರದಾಡುವಂತಾಗಿದೆ. ನಗರದ ಜೋಸ್ ಪೆನ್ನಾ ಆಸ್ಪತ್ರೆ ಹೆಚ್ಚು ಬಾಧಿತವಾಗಿದ್ದು, ಎಲ್ಲಾ ರೋಗಿಗಳನ್ನು ಅಧಿಕಾರಿಗಳು ಸ್ಥಳಾಂತರಗೊಳಿಸಿದ್ದಾರೆ. ಆಸ್ಪತ್ರೆಯ ಸಿಬ್ಬಂದಿ ನವಜಾತ ಶಿಶುಗಳ ನಿಗಾ ಘಟಕದಿಂದ ಶಿಶುಗಳನ್ನು ಬೇರೆಡೆಗೆ ಸ್ಥಳಾಂತರ ಮಾಡುತ್ತಿರುವ ಚಿತ್ರಗಳು ಸುದ್ದಿವಾಹಿನಿಗಳಲ್ಲಿ ಪ್ರಸಾರವಾಗಿವೆ.

## '340ಕ್ಕೂ ಹೆಚ್ಚು ನಾಗರಿಕರ ಹತ್ಯೆ'

**ಡಮಾಸ್ಕಸ್:** ಕಳೆದೆರಡು ದಿನಗಳಲ್ಲಿ ಸಿರಿಯಾ ಭದ್ರತಾ ಪಡೆಗಳು, ಸರ್ಕಾರ ಜೊತೆಗೆ ನಂಟು ಹೊಂದಿದ ಬಂದೂಕುಧಾರಿ ವ್ಯಕ್ತಿಗಳು ನಡೆಸಿದ ಗುಂಡಿನ ದಾಳಿಯಲ್ಲಿ 340 ಮಂದಿ ನಾಗರಿಕರು ಮೃತಪಟ್ಟಿದ್ದಾರೆ. ಸತ್ತವರಲ್ಲಿ ಅಲ್ಪಸಂಖ್ಯಾತ ಸಮುದಾಯದ ಅಲಾವಿಟ್ ಸಮುದಾಯವರೇ ಹೆಚ್ಚಿದ್ದಾರೆ ಎಂದು ಸಿರಿಯಾದ ಮಾನವ ಹಕ್ಕುಗಳ ನಿಗಾ ಸಂಸ್ಥೆಯ ರಾಮಿ ಅಬ್ದುಲ್‌ಹಮಾನ್ ಅವರು ಶನಿವಾರ 'ರಾಯಿಟರ್ಸ್' ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ. ಅಸಾದ್ ಆಡಳಿತದಲ್ಲಿದ್ದ ಬಂಡುಕೋರರನ್ನು ಮಟ್ಟಹಾಕಲು ಸರ್ಕಾರ ಕೈಗೊಂಡಿರುವ ಕಾರ್ಯಾಚರಣೆಯಲ್ಲಿ ಜನರ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಆಂತರಿಕ ಇಲಾಖೆ ಹೇಳಿಕೆ ಉಲ್ಲೇಖಿಸಿ ಸಿರಿಯಾದ ಮಾಧ್ಯಮಗಳು ವರದಿ ಮಾಡಿವೆ.

## ಮಹಿಳೆಯರ ಪರ್ಸ್‌ನಲ್ಲಿ ಆತ್ಮರಕ್ಷಣೆಗೆ ಚಾಕು, ಮೆಣಸಿನ ಪುಡಿ ಇರಲಿ

**ಜಲಗಾಂವ್:** ಮಹಿಳೆಯರು ಆತ್ಮರಕ್ಷಣೆಗಾಗಿ ತಮ್ಮ ಪರ್ಸ್‌ನಲ್ಲಿ ಲಿಪ್‌ಸ್ಟಿಕ್ ಜೊತೆ ಚಾಕು, ಮೆಣಸಿನ ಪುಡಿ ಇರಿಸಬೇಕು ಎಂದು ಮಹಾರಾಷ್ಟ್ರದ ಸಚಿವ ಗುಲಾಬ್‌ರಾವ್ ಪಾಟೀಲ್ ಶನಿವಾರ ಹೇಳಿಕೆ ನೀಡಿದ್ದಾರೆ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಶಿವಸೇನಾ ಮುಖಂಡ ಗುಲಾಬ್‌ರಾವ್, ಮಹಿಳೆಯರ ಸಬಲೀಕರಣಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಒತ್ತಿ ಹೇಳಿದರು. ನಾವು ಮಹಿಳಾ ಸಬಲೀಕರಣದ ಬಗ್ಗೆ ಮಾತನಾಡಿದರೂ ಅಹಿತಕರ ಘಟನೆಗಳು ಘಟಿಸುತ್ತಿವೆ. ಶಿವಸೇನಾ ಮುಖಂಡ ಬಾಳಾ ಠಾಕ್ರೆ ಅವರ ಆಲೋಚನೆಗಳಿಂದ ನಾವು ಪ್ರೇರಿತರಾಗಿದ್ದೇವೆ. ಮಹಿಳೆಯರು ಲಿಪ್‌ಸ್ಟಿಕ್ ಜೊತೆಗೆ ಮೆಣಸಿನ ಪುಡಿ ಮತ್ತು ಚಾಕುವನ್ನು ಒಯ್ಯಬೇಕು ಎಂದು ಹೇಳಿದ್ದಕ್ಕಾಗಿ ಪತ್ರಕರ್ತರು ಅವರನ್ನು ತೀವ್ರವಾಗಿ ಟೀಕಿಸಿದ್ದರು' ಎಂದು ಅವರು ಹೇಳಿದ್ದಾರೆ.

ಆದರೆ ಇಂದು ಕೂಡ ಪರಿಸ್ಥಿತಿ ಭಿನ್ನವಾಗಿಲ್ಲ. ಹೆಣ್ಣುಮಕ್ಕಳು ಆತ್ಮರಕ್ಷಣೆಗಾಗಿ ಇಂತಹ ವಸ್ತುಗಳನ್ನು ಕೊಂಡೊಯ್ಯಬೇಕು ಎಂದು ನಾನು ವಿನಂತಿಸುತ್ತೇನೆ' ಎಂದು ಹೇಳಿದ್ದಾರೆ.

## ಬಾಂಗ್ಲಾಪ್ರಜೆ; ಯಾರೂ ಏನೂ ಮಾಡಲು ಆಗಲ್ಲ

**ನವದೆಹಲಿ:** ದೆಹಲಿಯ ಒಂದು ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ. ಈ ವೀಡಿಯೋದಲ್ಲಿ, ಒಬ್ಬ ವ್ಯಕ್ತಿ ಕ್ಯಾಮೆರಾ ಮುಂದೆ ಬಹಿರಂಗವಾಗಿ ತಾನು ಬಾಂಗ್ಲಾದೇಶಿ ಎಂದು ಹೇಳಿಕೊಳ್ಳುವುದನ್ನು ಕಾಣಬಹುದು. ಆ ವ್ಯಕ್ತಿ ಯಾರಿಗೆ ಬೇಕಾದರೂ ಕರೆ ಮಾಡಿ. ನಾನು ಬಾಂಗ್ಲಾದೇಶಿ, ಯಾರೂ ನನಗೆ ಏನು ಮಾಡಲು ಸಾಧ್ಯವಿಲ್ಲ.



ವೈರಲ್ ಆಗಿರುವ ವಿಡಿಯೋದಲ್ಲಿ ಒಬ್ಬ ವರದಿಗಾರ ಕೆಲವು ಜನರೊಂದಿಗೆ ಮಾತನಾಡುತ್ತಿದ್ದಾನೆ, ಆಗ ಅಲ್ಲಿದ್ದ ಯುವಕನೊಬ್ಬ ಹೌದು, ನಾನು ಬಾಂಗ್ಲಾದೇಶಿ, ನೀವು ಯಾರನ್ನು ಬೇಕಾದರೂ ಕರೆಯಬಹುದು ಎಂದು ಹೇಳುತ್ತಾನೆ.

ಇದಾದ ನಂತರ, ಅಲ್ಲೇ ಇದ್ದ ಒಬ್ಬ ಹಿರಿಯ ವ್ಯಕ್ತಿ, ನೀವು ಇಲ್ಲಿಗೆ ಬರಬೇಕಾದರೆ ಮೊದಲು ನಮ್ಮ ಮೇಡಂ ಅವರಿಂದ ಅನುಮತಿ ಪಡೆಯಬೇಕು ಎಂದು ತಿಳಿಸಿದ್ದಾರೆ. ಈ ಸಮಯದಲ್ಲಿ ಒಬ್ಬ ಮಹಿಳೆ ಅಲ್ಲಿಗೆ ಪ್ರವೇಶಿಸುತ್ತಾಳೆ.

ಆ ಮಹಿಳೆ ಬಂದ ತಕ್ಷಣ, ಕೋಪದಿಂದ ವರದಿಗಾರ ಮತ್ತು ಕ್ಯಾಮೆರಾಮನ್‌ಗೆ ಬೆದರಿಕೆ ಹಾಕಲು ಪ್ರಾರಂಭಿಸಿ ನೀವು ಇಲ್ಲಿಗೆ ಹೇಗೆ ಬಂದಿರಿ ಎಂದು ಕೇಳಿದ್ದಾಳೆ. ಇದಾದ ನಂತರ ಮಹಿಳೆ ಮತ್ತು ಅಲ್ಲಿದ್ದ ಜನರು ಕ್ಯಾಮೆರಾ ಆಫ್ ಮಾಡಲು ಒತ್ತಾಯಿಸಿದ್ದಾಳೆ.

ವರದಿಗಾರ ಮತ್ತು ಕ್ಯಾಮೆ ರಾಮನ್ ಕೂಡ ಆ ಜನರೊಂದಿಗೆ ಜಗಳವಾಡಿದ್ದು ವೀಡಿಯೋದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಈ ವೈರಲ್ ವಿಡಿಯೋ ದೆಹಲಿಯ ಯಾವ ಕಾಲೋನಿ ಯಿಂದ ಬಂದಿದೆ ಎಂದು ಸ್ಪಷ್ಟವಾಗಿಲ್ಲ.

# ಮಹಾರಾಷ್ಟ್ರ: ಔರಂಗಜೇಬನ 'ಸಮಾಧಿ' ರಾಜಕೀಯ

**ಮುಂಬೈ:** ಮೊಘಲ್ ಚಕ್ರವರ್ತಿ ಔರಂಗಜೇಬನ 'ಸಮಾಧಿ'ಯು ಮಹಾರಾಷ್ಟ್ರ ರಾಜಕೀಯದಲ್ಲಿ ಭಾರಿ ಚರ್ಚೆಗೆ ಕಾರಣವಾಗಿದೆ. ಸರ್ಕಾರದ ಅಧೀನದಲ್ಲಿರುವ ಸಮಾಧಿಯನ್ನು ಕೂಡಲೇ ಕೆಡವಿಹಾಕಬೇಕು ಎಂದು ಬಲಪಂಥೀಯ ಸಂಘಟನೆಗಳು, ಬಿಜೆಪಿ ನಾಯಕರು, ಛತ್ರಪತಿ ಶಿವಾಜಿ ಕುಟುಂಬಸ್ಥರು ಒತ್ತಾಯಿಸಿದ್ದಾರೆ. ರಾಜ್ಯದ ಛತ್ರಪತಿ ಸಂಭಾಜಿ ನಗರ ಜಿಲ್ಲೆಯ (ಔರಾಂಗಾಬಾದ್) ಖುಲ್ದಾಬಾದ್‌ನ ದರ್ಗಾ ಆವರಣದಲ್ಲಿ ಔರಾಂಗಜೇಬ್ ಸಮಾಧಿ ಇದೆ. ಮೊಘಲ್ ರಾಜಮನೆತನದ 6ನೇ ಚಕ್ರವರ್ತಿಯ ಈ ಸಮಾಧಿಯನ್ನು ಭಾರತೀಯ ಪುರಾತತ್ವ ಇಲಾಖೆ (ಎಎಸ್‌ಐ) ನಿರ್ವಹಣೆ ಮಾಡುತ್ತಿದೆ.

'ಸಿಂಧುದುರ್ಗ್ ಕೋಟೆ ಆವರಣದಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜರ ದೇವಾಲಯ ನಿರ್ವಹಣೆಗೆ ಮಾಸಿಕ 250 ನೀಡಲಾಗುತ್ತಿದೆ.



> **'ಔರಂಗಜೇಬ್ ಸಮಾಧಿಯನ್ನು ಪೂರ್ತಿಯಾಗಿ ಕೆಡವಿಹಾಕಬೇಕು' ಎಂದು ಶಿವಾಜಿ ಮಹಾರಾಜರ 13ನೇ ವಂಶಸ್ಥ, ಸತಾರಾ ರಾಜವಂಶಸ್ಥ ಹಾಗೂ ಬಿಜೆಪಿ ಸಂಸದರೂ ಆಗಿರುವ ಛತ್ರಪತಿ ಉದಯರಾಜೆ ಭೋಂಸ್ಲೆ ಒತ್ತಾಯಿಸಿದ್ದಾರೆ.**

ಔರಾಂಗಜೇಬ್ ಸಮಾಧಿಗೆ 2021-22ರಲ್ಲಿ 2.55 ಲಕ್ಷ ಹಾಗೂ 2023ರಲ್ಲಿ 2 ಲಕ್ಷ ಖರ್ಚು ಮಾಡಲಾಗಿದೆ. ಸಮಾಧಿಗೆ ಆರ್ಥಿಕ ನೆರವು ನೀಡುವುದನ್ನು ಸರ್ಕಾರ ಕೂಡಲೇ ನಿಲ್ಲಿಸಬೇಕು ಎಂದು ಹಿಂದೂ ಜನಜಾಗೃತಿ ಸಮಿತಿಯ ರಾಜ್ಯ ಸಂಯೋಜಕ ಸುನಿಲ್ ಗನವತ್ ಒತ್ತಾಯಿಸಿದ್ದಾರೆ.

ಅಲ್ಲಿಗೆ ಭೇಟಿ ನೀಡಿ, ಜನರು ನಮನ ಸಲ್ಲಿಸಲಿ. ಆದರೆ, ಸಮಾಧಿಯ ವೈಭವೀಕರಣ ಮಾಡುವುದನ್ನು ಸಹಿಸಲು ಸಾಧ್ಯವಿಲ್ಲ. ಅದರ ಅಗತ್ಯವಾದರೂ ಏನು? ಜೆಸಿಬಿ ಯಂತ್ರವನ್ನು ಕಳುಹಿಸಿ, ಕೆಡವಿಹಾಕಬೇಕು' ಎಂದು ಆಗ್ರಹಿಸಿದ್ದಾರೆ.

ಆತ ಕಳ್ಳ, ದರೋಡೆಕೋರ. ಛತ್ರಪತಿ ಶಿವಾಜಿ ಕುಟುಂಬಸ್ಥರ ವಿರುದ್ಧ ಹೇಳಿಕೆ ನೀಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ. ಮಹಾರಾಷ್ಟ್ರ ಬಂದರು ಹಾಗೂ ಮೀನುಗಾರಿಕಾ ಸಚಿವ ನಿತೇಶ್ ರಾಣೆ ಅವರೂ ಈ ಅಭಿಪ್ರಾಯವನ್ನು ಬೆಂಬಲಿಸಿದ್ದಾರೆ.

### ಗುಜರಾತ್‌ನಲ್ಲಿ ಕಾಂಗ್ರೆಸ್ ಸುಮಾರು 30 ವರ್ಷಗಳಿಂದ ಅಧಿಕಾರದಿಂದ ದೂರದಲ್ಲಿದೆ

# ಕೈನ ಕೆಲವರು ಬಿಜೆಪಿ ಪರ ಕೆಲಸ ಮಾಡುತ್ತಿದ್ದಾರೆ: ರಾಹುಲ್

**ಅಹಮದಾಬಾದ್:** ಗುಜರಾತ್ ಕಾಂಗ್ರೆಸ್‌ನಲ್ಲಿ ಬಿಜೆಪಿ ಪರ ಗುಟ್ಟಾಗಿ ಕೆಲಸ ಮಾಡುತ್ತಿರುವ ನಾಯಕರಿಗೆ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಶನಿವಾರ ಬಹಿರಂಗ ಎಚ್ಚರಿಕೆ ನೀಡಿದ್ದಾರೆ. ಅಗತ್ಯಬಿದ್ದರೆ ಪಕ್ಷವನ್ನು ಶುದ್ಧೀಕರಿಸಲು 40 ನಾಯಕರನ್ನು ವಜಾಗೊಳಿಸಲು ಹಿಂದೆ ಮುಂದೆ ನೋಡಲ್ಲ ಎಂದು ಅವರು ಹೇಳಿದ್ದಾರೆ.



**ಬಹಿರಂಗವಾಗಿ ಬಿಜೆಪಿಗೆ ಕೆಲಸ ಮಾಡಲಿ**

ಗುಜರಾತ್ ರಾಜಧಾನಿ ಅಹಮದಾಬಾದ್‌ನಲ್ಲಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುವಾಗ ರಾಹುಲ್ ಗಾಂಧಿ ಈ ಹೇಳಿಕೆ ನೀಡಿದ್ದಾರೆ. ಗಮನಿಸಬೇಕಾದ ಸಂಗತಿ ಎಂದರೆ ಗುಜರಾತ್‌ನಲ್ಲಿ ಕಾಂಗ್ರೆಸ್ ದಶಕಗಳಿಂದ ಅಧಿಕಾರದಿಂದ ದೂರ ಇದೆ. ಗುಜರಾತ್ ಕಾಂಗ್ರೆಸ್ ಘಟಕದಲ್ಲಿ ಎರಡು ಬಗೆಯ ನಾಯಕರಿದ್ದಾರೆ ಎಂದ ರಾಹುಲ್ ಗಾಂಧಿ, ಒಂದು, ನಿಜವಾಗಿಯೂ ಜನರೊಂದಿಗೆ ಸಂಪರ್ಕ ಹೊಂದಿ ರುವವರು; ಇನ್ನೊಂದು, ಜನರಿಂದ ದೂರ ಉಳಿದಿರುವವರು.

ಈ ಎರಡು ಗುಂಪುಗಳನ್ನು ಬೇರ್ಪಡಿಸುವ ಅಗತ್ಯವಿದೆ ಎಂದ ಅವರು, ಜನರೊಂದಿಗೆ ಸಂಪರ್ಕ ಸಾಧಿಸಲು, ನಾವು ಎರಡು ಕೆಲಸಗಳನ್ನು ಮಾಡಬೇಕು. ಮೊದಲ ಕೆಲಸ ಈ ಎರಡು ಗುಂಪುಗಳನ್ನು ಬೇರ್ಪಡಿಸುವುದು. 10, 15, 20, 30, 40 ಜನರನ್ನು ತೆಗೆದುಹಾಕಲೂ ನಾವು ಸಿದ್ಧರಿದ್ದೇವೆ, ಎಂದು ಹೇಳಿದ್ದಾರೆ. ಕಾಂಗ್ರೆಸ್‌ನಲ್ಲಿ ಇದ್ದುಕೊಂಡು ಬಿಜೆಪಿ ಪರವಾಗಿ ಗುಟ್ಟಾಗಿ ಕೆಲಸ ಮಾಡುತ್ತಿರುವ ನಾಯಕರು ಬಹಿರಂಗವಾಗಿ ಬಿಜೆಪಿಗೆ ಕೆಲಸ ಮಾಡಲಿ ಎಂದು ಅವರು ಸವಾಲು ಹಾಕಿದ್ದಾರೆ. 'ಬಿಜೆಪಿ ಯಲ್ಲೇನು ನಿಮಗೆ ಜಾಗವಿರುವುದಿಲ್ಲ. ಅವರು ನಿಮ್ಮನ್ನು ಎತ್ತಿ ಹೊರಗೆ ಹಾಕುತ್ತಾರೆ' ಎಂದು ರಾಹುಲ್ ಗಾಂಧಿ ಅಭಿಪ್ರಾಯಪಟ್ಟಿದ್ದಾರೆ. ಗುಜರಾತ್‌ನಲ್ಲಿ ಕಾಂಗ್ರೆಸ್ ಸುಮಾರು 30 ವರ್ಷಗಳಿಂದ ಅಧಿಕಾರದಿಂದ ದೂರ ಇದೆ.

ಇದಕ್ಕಿರುವ ಸವಾಲುಗಳನ್ನು ಒಪ್ಪಿಕೊಂಡಿರುವ ರಾಹುಲ್ ಗಾಂಧಿ, ನಾವು ಕೇವಲ ಚುನಾವಣೆಗಳ ಮೇಲೆ ಗಮನ ಕೇಂದ್ರೀಕರಿಸಿದರೆ ಸಾಲದು. ಜನರ ವಿಶ್ವಾಸವನ್ನು ಗಳಿಸಬೇಕು. ನಮ್ಮ ಜವಾಬ್ದಾರಿಗಳನ್ನು ಪೂರೈಸುವವರೆಗೂ ಗುಜರಾತ್ ಜನರು ನಮ್ಮನ್ನು ಆಯ್ಕೆ ಮಾಡುವುದಿಲ್ಲ. ಮೊದಲು ನಾವು ಅವರ ವಿಶ್ವಾಸವನ್ನು ಗಳಿಸಬೇಕು, ಎಂದು ತಿಳಿ ಹೇಳಿದ್ದಾರೆ.


**ಭಾರೀ ಸಂಚಲನ ಸೃಷ್ಟಿ**

> **ರಾಹುಲ್ ಗಾಂಧಿ ಅವರ ಈ ಹೇಳಿಕೆ ಗುಜರಾತ್ ಕಾಂಗ್ರೆಸ್‌ನಲ್ಲಿ ಭಾರೀ ಸಂಚಲನ ಸೃಷ್ಟಿಸಿದೆ. ಬಿಜೆಪಿ ಪರವಾಗಿ ಕೆಲಸ ಮಾಡುತ್ತಿರುವ ನಾಯಕರು ಯಾರು ಎಂಬುದರ ಬಗ್ಗೆಯೂ ತೀವ್ರ ಚರ್ಚೆಗಳು ಆರಂಭವಾಗಿವೆ. ಕಾಂಗ್ರೆಸ್ ಪಕ್ಷದ ಶುದ್ಧೀಕರಣದ ಬಗ್ಗೆ ವಿವಿಧ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಮುಂದಿನ ದಿನಗಳಲ್ಲಿ ಇದು ಯಾವ ತಿರುವು ಪಡೆಯುತ್ತವೆ ಎಂಬುದನ್ನು ಕಾದು ನೋಡಬೇಕಿದೆ.**

# ನಿಧಿಗಾಗಿ ರಾತ್ರೋರಾತ್ರಿ ಭೂಮಿ ಅಗೆದ ಜನ

**ಭೋಪಾಲ್:** ಛತ್ರಪತಿ ಸಂಭಾಜಿ ಮಹಾರಾಜ್ ಜೀವನವನ್ನು ಆಧರಿಸಿದ ಛಾವಾ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಉತ್ತಮ ಗಳಿಕೆ ಕಾಣುತ್ತಿದ್ದು, ಇದರ ನಡುವೆಯೇ ಈ ಚಿತ್ರ ಹಲವು ಎಡವಟ್ಟುಗಳಿಗೂ ಕಾರಣವಾಗಿದೆ. ಹೌದು.. ಛತ್ರಪತಿ ಸಂಭಾಜಿ ಮಹಾರಾಜ್ ಜೀವನವನ್ನು ಆಧರಿಸಿದ ಈ ಸಿನಿಮಾ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಪಡೆಯುತ್ತಿದೆ. ಈಗಾಗಲೇ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ 500 ಕೋಟಿ ರೂ ಗಳಿಕೆ ಕಂಡಿದ್ದು, ಉತ್ತಮ ಪ್ರದರ್ಶನ ಕಾಣುತ್ತಿದೆ. ಆದರೆ ಈ ಚಿತ್ರ ಇದೀಗ ಸಿನಿಮಾ ವಿಚಾರದ ಹೊರತಾಗಿಯೂ ವ್ಯಾಪಕ ಸುದ್ದಿಗೆ ಗ್ರಾಸವಾಗಿದ್ದು, ಈ ಚಿತ್ರದಲ್ಲಿನ ದೃಶ್ಯವೊಂದನ್ನು ಆಧರಿಸಿ ಜನ ನಿಧಿಗಾಗಿ ಶೋಧ ನಡೆಸುತ್ತಿರುವ ಮಾಹಿತಿ ಬೆಳಕಿಗೆ ಬಂದಿದೆ.

**ನಿಧಿಗಾಗಿ ಶೋಧ:** ಈ ಛಾವಾ ಸಿನಿಮಾ ಮೊಘಲರ ಕಾಲದ ಕಥೆಯನ್ನು ಹೇಳುತ್ತದೆ. ಸಿನಿ ಮಾದಲ್ಲಿ ಮಧ್ಯಪ್ರದೇಶದ ಬುರ್ಹಾನ್



**ಸಿಕ್ಕ ನಾಣ್ಯಗಳ ಅಸಲೀಯತ್ತೇನು?**

ಪುರ, ಅಸೀಘರ್ ಕೋಟೆ ಕುರಿತು ಉಲ್ಲೇಖವಿದೆ. ಈ ಮೊಘಲರು ಮರಾಠರಿಂದ ಅಪಾರ ಚಿನ್ನ, ವಜ್ರಗಳನ್ನು ಲೂಟಿ ಮಾಡಿ ಅಸೀಘಾರ್ ಕೋಟೆಯಲ್ಲಿ ಇಟ್ಟಿದ್ದರು ಎಂದು ಸಿನಿಮಾದ ದೃಶ್ಯವೊಂದರಲ್ಲಿ ಹೇಳಲಾಗುತ್ತದೆ. ಆದರೆ ಇದನ್ನೇ ನಿಜ ಎಂದು ನಂಬಿ ಜನ ಇದೀಗ ಕೆಲಸ ಕಾರ್ಯಗಳನ್ನು ಬಿಟ್ಟು ಶೋಧದಲ್ಲಿ ತೊಡಗಿದ್ದಾರೆ. ನೂರಾರು ಜನರು ಗುದ್ದಲಿ, ಹಾರೆ ಹಿಡಿದು ಭೂಮಿ ಅಗೆದು ಚಿನ್ನಕ್ಕಾಗಿ ಶೋಧ ಕಾರ್ಯ ನಡೆಸಿದ್ದಾರೆ. ಕೆಲವರಂತು ಮೆಟಲ್ ಡಿಟೆಕ್ಟರ್ ಸಾಧನ ತಂದು ಶೋಧ ನಡೆಸುತ್ತಿರುವ ವಿಡಿಯೋಗಳು ವೈರಲ್ ಆಗುತ್ತಿವೆ.

**ಎಲ್ಲಿ ಶೋಧ? ಲೋಹದ ನಾಣ್ಯ ಸಿಕ್ತಿತಾ?**

ಇತ್ತೀಚೆಗೆ ಬುರ್ಹಾನ್‌ಪುರದಿಂದ 18 ಕಿ.ಮೀ ದೂರದಲ್ಲಿರುವ ಆಸಿರ್‌ಗಢ ಗ್ರಾಮದಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಮಾಡುವಾಗ ದರ್ಗಾದ ಬಳಿ ಇರುವ ಮಣ್ಣನ್ನು ಅಗೆದಿತ್ತು. ಈ ಮಣ್ಣನ್ನು ಹಾರೂನ್ ಶೇಖ್ ಎಂಬವರ ಹೊಲದಲ್ಲಿ ಹೋಗಿ ಹಾಕಲಾಗಿತ್ತು. ಹೊಲಕ್ಕೆ ಕೆಲಸ ಮಾಡಲು ಬಂದ ಕೂಲಿ ಕಾರ್ಮಿಕರಿಗೆ, ಹಾಕಿದ್ದ ಮಣ್ಣಿನಲ್ಲಿ ಇತಿಹಾಸ ಕಾಲದ ಲೋಹದ ನಾಣ್ಯಗಳು ಸಿಕ್ಕಿವೆ. ಈ ಬೆಳವಣಿಗೆ ಬೆನ್ನಲ್ಲೇ ಹೊಲದ ಸುತ್ತಮುತ್ತ ಪ್ರದೇಶದಲ್ಲಿ ಚಿನ್ನ, ಬೆಳ್ಳಿಯ ನಾಣ್ಯಗಳು ಸಿಗುತ್ತಿವೆ ಎಂದು ವದಂತಿ ಹಬ್ಬಿದೆ. ಕೂಡಲೇ ಈ ಸುದ್ದಿ ಸುತ್ತಲಿನ ಹಳ್ಳಿಗಳಲ್ಲಿ ವೈರಲ್ ಆಗಿದ್ದು, ಜನ ತಂಡೋಪತಂಡಗಳಾಗಿ ನೆಲ ಅಗೆಯುವ ವಸ್ತುಗಳನ್ನು ತೆಗೆದುಕೊಂಡು ಬಂದು ಇಲ್ಲಿ ಶೋಧ ನಡೆಸಿದ್ದಾರೆ.

